
ಶನಿವಾರ, ಮೇ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 149 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ: 10 ಮತ್ತು 12ನೇ ತರಗತಿಗೆ ಅಂತಿಮ ಪರೀಕ್ಷೆಗಳನ್ನು ನಡೆಸುವುದು ಅನಿವಾರ್ಯವೇ? 7
ಕೋವಿಡ್ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಕರೆ 8
ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ: ನಳಿನ್ 4

ಸೆನ್ಸೆಕ್ಸ್	ನಿಫ್ಟಿ	₹/$
51,422 ▲	15,435 ▲	72.45 ▲

ಪರಿಶಿಷ್ಟ ಜಾತಿ, ಪಂಗಡದವರ ಏಳ್ಗೆಗೆ ಮೀಸಲಾದ ಅನುದಾನ: ಕ್ರಿಯಾ ಯೋಜನೆಗಿಲ್ಲ ಅನುಮೋದನೆ

₹ 26 ಸಾವಿರ ಕೋಟಿ ಬಳಕೆಗೆ ಅಡ್ಡಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ತಳ ಸಮುದಾಯವರ ಏಳಿಗೆಗಾಗಿ ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಮೀಸಲಿಟ್ಟಿರುವ ₹ 26,005 ಕೋಟಿ ಅನುದಾನದ ಬಳಕೆಗೆ ಕೋವಿಡ್ ಅಡ್ಡಿಯಾಗಿದೆ.

ಈ ವರ್ಷ ಎಸ್‌ಸಿಎಸ್‌ಪಿ ಯೋಜನೆಯಡಿ ₹18,331.54 ಕೋಟಿ ಮತ್ತು ಟಿಎಸ್‌ಪಿ ಯೋಜನೆಯಡಿ ₹ 7,673.47 ಕೋಟಿ ಅನುದಾನ ಇದೆ. ಒಟ್ಟು ₹ 26,005.01 ಕೋಟಿ ವೆಚ್ಚದ ಕ್ರಿಯಾ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆ ಅಂತಿಮಗೊಳಿಸಿದೆ. ಆದರೆ, ಮುಖ್ಯಮಂತ್ರಿ ನೇತೃತ್ವದ ರಾಜ್ಯ ಪರಿಷತ್ ಸಭೆ ನಡೆಸಲು ಸಾಧ್ಯವಾಗದೇ ಇರುವುದರಿಂದ ಕ್ರಿಯಾ ಯೋಜನೆ ಅನುಮೋದನೆಯೂ ವಿಳಂಬವಾಗುತ್ತಿದೆ.

'2019-20ರ ಕ್ರಿಯಾ ಯೋಜನೆಗೆ ಜೂನ್ ತಿಂಗಳಿನಲ್ಲಿ ರಾಜ್ಯ ಪರಿಷತ್ ಅನುಮೋದನೆ ನೀಡಿತ್ತು. 2020-21ರ ಕ್ರಿಯಾ ಯೋಜನೆಗೆ 2020ರ ಮೇ 28ರಂದು ಅನುಮೋದನೆ ನೀಡಿತ್ತು. ಈ ಬಾರಿ ಬೇಗ ಯೋಜನೆಗಳ ಅನುಷ್ಠಾನ ಆರಂಭಿಸುವ ಉದ್ದೇಶದಿಂದ ಎಲ್ಲ ಇಲಾಖೆಗಳಿಂದಲೂ ಮೇ ಆರಂಭದಲ್ಲೇ ಕ್ರಿಯಾ ಯೋಜನೆಗಳನ್ನು ಪಡೆಯಲಾಗಿತ್ತು. ಆದರೆ, ಪ್ರಕ್ರಿಯೆ ಲಾಕ್‌ಡೌನ್ ಕಾರಣದಿಂದ ಮುಂದಿನ ಹಂತ ತಲುಪುತ್ತಿಲ್ಲ' ಎಂದು ಸಮಾಜ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಮೊದಲ ಕಂತು ಬಳಕೆ ವಿಳಂಬ: ಎರಡೂ ಯೋಜನೆಗಳ ಒಟ್ಟು ಅನುದಾನದಲ್ಲಿ ಹೊಸ ಕಾರ್ಯಕ್ರಮಗಳ ಆರಂಭಕ್ಕೆ ರಾಜ್ಯ ಪರಿಷತ್‌ನ ಅನುಮೋದನೆ ಕಡ್ಡಾಯ. ಆದರೆ, ಮುಂದುವರಿದ ಹಿಂದಿನ ವರ್ಷದ ಕಾರ್ಯಕ್ರಮಗಳಿಗೆ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡಲು ಅವಕಾಶವಿದೆ. ಇಂತಹ ಕೆಲವು ಕಾರ್ಯಕ್ರಮಗಳ ಅನುಷ್ಠಾನ ಆರಂಭವಾಗಿದ್ದರೂ ಕೋವಿಡ್‌ನಿಂದಾಗಿ ಫಲಾನುಭವಿಗಳನ್ನು ಗುರುತಿಸುವುದು ಮತ್ತು ಸೌಲಭ್ಯ ತಲುಪಿಸುವುದಕ್ಕೆ ಆಗಿಲ್ಲ.

'ಚಾಲ್ತಿಯಲ್ಲಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೊದಲ ಕಂತಿನಲ್ಲಿ ವಾರ್ಷಿಕ ಅನುದಾನದ ಒಟ್ಟು ಮೊತ್ತದಲ್ಲಿ ಶೇ 25ರಷ್ಟನ್ನು ಬಿಡುಗಡೆ ಮಾಡುವಂತೆ ಎಲ್ಲ ಇಲಾಖೆಗಳಿಗೂ ನಿರ್ದೇಶನ ನೀಡಲಾಗಿದೆ. ಕೆಲವು ಇಲಾಖೆಗಳು ಈಗಾಗಲೇ ಬಿಡುಗಡೆ ಮಾಡಿವೆ. ಆದರೆ, ಹೆಚ್ಚಿನ ಇಲಾಖೆಗಳು ನೇರವಾಗಿ ಫಲಾನುಭವಿಗಳನ್ನು ತಲುಪಬೇಕಾದ ಯೋಜನೆಗಳ ಅನುಷ್ಠಾನ ಮಾಡಬೇಕಿರುವುದರಿಂದ ಸಮಸ್ಯೆ ಎದುರಾಗಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ತುರ್ತು ಸಭೆಗೆ ಆಗ್ರಹ: 'ಲಾಕ್‌ಡೌನ್ ಸಮಯದಲ್ಲಿ ಸರ್ಕಾರದ ಸಭೆಗಳು ನಡೆಯುತ್ತಲೇ ಇವೆ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುಷ್ಠಾನ ತುರ್ತಾಗಿ ಆಗಬೇಕಿದೆ. ಆದ್ದರಿಂದ ತಕ್ಷಣವೇ ರಾಜ್ಯ ಪರಿಷತ್ ಸಭೆ ನಡೆಸಿ ಕ್ರಿಯಾಯೋಜನೆಗಳಿಗೆ ಒಪ್ಪಿಗೆ ನೀಡುವ ಕೆಲಸ ಮಾಡಬೇಕು' ಎಂದು ಆಗ್ರಹಿಸುತ್ತಾರೆ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಹ ಸಂಚಾಲಕ ಬಿ. ರಾಜಶೇಖರ ಮೂರ್ತಿ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ನೇರವಾಗಿ ಆಹಾರದ ಕಿಟ್, ಧನ ಸಹಾಯ, ಚಿಕಿತ್ಸಾ ವೆಚ್ಚ ಭರಿಸುವುದಕ್ಕೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಬಳಕೆ ಮಾಡಬೇಕು. ಅದಕ್ಕೆ ಪೂರಕವಾಗಿ ಕ್ರಿಯಾ ಯೋಜನೆಯಲ್ಲಿ ಬದಲಾವಣೆಗಳನ್ನು ತಂದು, ಅನುಮೋದನೆ ನೀಡಬೇಕು ಎಂದು ಅವರು ಒತ್ತಾಯಿಸುತ್ತಾರೆ.

ಪ್ರಜಾವಾಣಿ ವಿಶೇಷ

ಹೋರಾಟಕ್ಕೆ ಸಿದ್ಧತೆ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಉದ್ಯೋಗ ಖಾತರಿ ಯೋಜನೆ ಅಡಿ ಕೆಲಸ ಒದಗಿಸಲು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಬಳಕೆ ಮಾಡಬೇಕು. ಇದರಲ್ಲಿ ಶಾಲಾ ಮಕ್ಕಳಿಗೆ ಆಹಾರದ ಕಿಟ್ ವಿತರಣೆ ಮಾಡಬೇಕು ಎಂಬ ಬೇಡಿಕೆಯನ್ನು ದಲಿತ ಸಂಘಟನೆಗಳ ಒಕ್ಕೂಟ ಸಮಾಜ ಕಲ್ಯಾಣ ಇಲಾಖೆಯ ಮುಂದಿಟ್ಟಿದೆ.

'ಲಾಕ್‌ಡೌನ್ ನೆಪ ಹೇಳಿಕೊಂಡು ಅನುಷ್ಠಾನದಲ್ಲಿ ವಿಳಂಬ ಮುಂದುವರಿಸಿದರೆ, ಹೋರಾಟ ಮಾಡುತ್ತೇವೆ' ಎಂದು ಒಕ್ಕೂಟದ ಭಾಗವಾಗಿರುವ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದರು.

ಶೇ 95ರಷ್ಟು ವೆಚ್ಚ

2020-21ರಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನದಲ್ಲಿ ಶೇ 95ರಷ್ಟು ವೆಚ್ಚವಾಗಿದೆ.

ಎಸ್‌ಸಿಎಸ್‌ಪಿಯಡಿ ₹ 18,113.92 ಕೋಟಿ ಮೀಸಲಿಟ್ಟಿದ್ದು, ₹ 17,304 ಕೋಟಿ ವೆಚ್ಚ ಮಾಡಲಾಗಿದೆ. ಟಿಎಸ್‌ಪಿ ₹ 7,802.46 ಕೋಟಿ ಅನುದಾನ ಮೀಸಲಿಟ್ಟಿದ್ದು, ₹ 7,263.74 ವೆಚ್ಚ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಮೂಲಗಳು ತಿಳಿಸಿವೆ.



ಲಸಿಕೆಗೆ ಮುಗಿಬಿದ್ದ ಜನ
ಪಶ್ಚಿಮ ಬಂಗಾಳದ ದಕ್ಷಿಣ ದಿನಜ್‌ಪುರದಲ್ಲಿ ಕೋವಿಡ್ ಲಸಿಕೆ ಪಡೆಯಲು ಶುಕ್ರವಾರ ಅಂತರ ಮರೆತು ಮುಗಿಬಿದ್ದ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು –ಪಿಟಿಐ ಚಿತ್ರ

ವಿವಾದ ಸೃಷ್ಟಿಸಿದ ನಡೆ • ರಾಜ್ಯಪಾಲರಿಂದ ಖಂಡನೆ

ಮೋದಿ ಸಭೆಗೆ ಮಮತಾ ಗೈರು

ಪ್ರಜಾವಾಣಿ ವಾರ್ತೆ

ನವದೆಹಲಿ: ಯಸ್ ಚಂಡಮಾರುತದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಹಾನಿಯ ಪರಿಶೀಲನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಸಭೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗೈರುಹಾಜರಾಗಿದ್ದಾರೆ. ಬಿಜೆಪಿ ಮುಖಂಡರು ಮತ್ತು ರಾಜ್ಯಪಾಲರು ಮಮತಾ ಅವರ ನಡೆಯನ್ನು ಖಂಡಿಸಿದ್ದಾರೆ.

ಚಂಡಮಾರುತದಿಂದ ಆದ ಹಾನಿಯ ಪರಿಶೀಲನಾ ಸಭೆಗೆ ಹಾಜರಾಗುವ ಬದಲು, ಮಮತಾ ಅವರು ಮೋದಿ ಅವರನ್ನು ಕಲೈಕುಂದದಲ್ಲಿ ಭೇಟಿ ಮಾಡಿ, ₹20 ಸಾವಿರ ಕೋಟಿ ಪರಿಹಾರಕ್ಕೆ ಬೇಡಿಕೆ ಇಟ್ಟಿದ್ದಾರೆ.

'ಕಲೈಕುಂದದಲ್ಲಿ ಪ್ರಧಾನಿಯ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಸಭೆಯ ಬಗ್ಗೆ ನನಗೆ ಮಾಹಿತಿಯೇ ಇರಲಿಲ್ಲ. ದಿಘಾದಲ್ಲಿ ಬೇರೊಂದು ಸಭೆ ಆಯೋಜನೆಯಾಗಿದ್ದರೂ, ನಾನು ಮತ್ತು ಪ್ರಧಾನ ಕಾರ್ಯದರ್ಶಿ ಕಲೈಕುಂದಕ್ಕೆ ಹೋಗಿ, ಹಾನಿಯ ಬಗೆಗಿನ ವರದಿಯನ್ನು ಸಲ್ಲಿಸಿ ಬಂದಿದ್ದೇವೆ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಮಮತಾ ತಿಳಿಸಿದ್ದಾರೆ.

'ನೀವು ನನ್ನನ್ನು ಭೇಟಿಮಾಡಲು ಬಯಸಿದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ಈ ವರದಿಯನ್ನು ತಮಗೆ ಸಲ್ಲಿಸುತ್ತಿದ್ದೇನೆ. ತಮಗೆ ಸೂಕ್ತವೆನಿಸಿದ ತೀರ್ಮಾನ ಕೈಗೊಳ್ಳಬಹುದು ಎಂದು ಪ್ರಧಾನಿಗೆ ಹೇಳಿದ್ದೇನೆ. ದಿಘಾದಲ್ಲಿ ಒಂದು ಸಭೆ ನಿಗದಿಯಾಗಿರುವುದರಿಂದ ಅಲ್ಲಿಗೆ ತೆರಳಬೇಕಾಗಿದೆ ಎಂದು ಅವರ ಅನುಮತಿ ಪಡೆದು ಬಂದಿದ್ದೇನೆ' ಎಂದು ಮಮತಾ ಅವರು ಹೇಳಿದ್ದಾರೆ.

9ನೇ ಪುಟ ನೋಡಿ

'ಒಕ್ಕೂಟ ವ್ಯವಸ್ಥೆಯ ಕಗ್ಗೊಲೆ'

ಮಮತಾ ಅವರ ಕ್ರಮವನ್ನು ಖಂಡಿಸಿದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, 'ಇದು ಸಂವಿಧಾನದ ಆಶಯಗಳು ಹಾಗೂ ಒಕ್ಕೂಟ ವ್ಯವಸ್ಥೆಯ ಕಗ್ಗೊಲೆ' ಎಂದಿದ್ದಾರೆ.

'ಒಕ್ಕೂಟ ವ್ಯವಸ್ಥೆಯನ್ನು ಪವಿತ್ರ ಎಂದು ಮೋದಿ ಅವರು ಗೌರವಿಸುತ್ತಾರೆ ಮತ್ತು ಜನರಿಗೆ ನೆರವು ಒದಗಿಸುವ ವಿಚಾರದಲ್ಲಿ ಪಕ್ಷಭೇದ ಮರೆತು ಎಲ್ಲಾ ಮುಖ್ಯಮಂತ್ರಿಗಳ ಜತೆ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾರೆ. ಆದರೆ ಮಮತಾ ಅವರ ತಂತ್ರಗಳು ಮತ್ತು 'ಚಿಲ್ಲರೆ ರಾಜಕಾರಣ'ವು ಬಂಗಾಳದ ಜನರಿಗೆ ತೊಂದರೆ ಉಂಟುಮಾಡುತ್ತದೆ' ಎಂದು ನಡ್ಡಾ ಶುಕ್ರವಾರ ಹೇಳಿದ್ದಾರೆ.

'ತಾನು ಸೂಕ್ಷ್ಮತೆಯನ್ನು ಕಳೆದುಕೊಂಡಿದ್ದೇನೆ ಎಂದು ಮಮತಾ ಪುನಃ ಸಾಬೀತುಮಾಡಿದ್ದಾರೆ. ಭಾರತದ ಒಕ್ಕೂಟ ವ್ಯವಸ್ಥೆಯ ಕರಾಳದಿನವಿದು. ಸ್ವತಂತ್ರ ಭಾರತದಲ್ಲಿ ಈವರೆಗೆ ಯಾವ ಮುಖ್ಯಮಂತ್ರಿಯೂ ಪ್ರಧಾನಿ ಮತ್ತು ರಾಜ್ಯಪಾಲರ ಜತೆ ಈ ರೀತಿ ಅಗೌರವ ಮತ್ತು ಅಹಂಕಾರದಿಂದ ವರ್ತಿಸಿದ್ದಿಲ್ಲ' ಎಂದು ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಹೇಳಿದ್ದಾರೆ.

ಒಳ ಪುಟಗಳು



ಯಸ್: ₹1,000 ಕೋಟಿ ತುರ್ತು ನೆರವು

ನವದೆಹಲಿ (ಪಿಟಿಐ): 'ಯಸ್' ಚಂಡಮಾರುತದಿಂದ ಹಾನಿ ಅನುಭವಿಸಿರುವ ರಾಜ್ಯಗಳಿಗೆ, ಪ್ರಧಾನಿ ನರೇಂದ್ರ ಮೋದಿ ಅವರು ₹1000 ಕೋಟಿ ತುರ್ತು ಪರಿಹಾರ ಘೋಷಿಸಿದ್ದಾರೆ. 9

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಹುನಗುಂದ: ರಾಷ್ಟ್ರೀಯ ಹೆದ್ದಾರಿಯಲ್ಲಿ ಯುವಪಡೆಯ ಮಾದರಿ ಕಾರ್ಯ

ವಾಹನ ಚಾಲಕರಿಗೆ ಮಧ್ಯಾಹ್ನದ ಊಟ

• ವೆಂಕಟೇಶ ಜಿ.ಎಚ್

ಬಾಗಲಕೋಟೆ: ಲಾಕ್‌ಡೌನ್ ಕಾರಣ ಹೆದ್ದಾರಿ ಪಕ್ಕದ ಡಾಬಾಗಳು ಬಂದ್ ಆಗಿದ್ದು, ವಾಹನ ಚಾಲಕರು ದಿನಗಟ್ಟಲೇ ಹಸಿವು-ನೀರಡಿಕೆಯಲ್ಲಿ ಸಾಗಬೇಕಿದೆ. ಇವರ ಸಂಕಷ್ಟಕ್ಕೆ ಹುನಗುಂದದ ಪರಿಸರ ಸ್ನೇಹಿ ಬಳಗದ ಹುಡುಗರು ಸ್ಪಂದಿಸಿದ್ದಾರೆ.

ಹುನಗುಂದ ಪಟ್ಟಣದ ಹೊರ ವಲಯದಲ್ಲಿ ಚಿತ್ರದುರ್ಗ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ (ಸಂಖ್ಯೆ 50) ಹಾದುಹೋಗುತ್ತದೆ. ಇದು ಉತ್ತರ ಭಾರತದ ರಾಜ್ಯಗಳೊಂದಿಗೆ ರಾಜ್ಯವನ್ನು ಬೆಸೆಯುವ ಪ್ರಮುಖ ಸಂಪರ್ಕ ಮಾರ್ಗ.

ಲಾಕ್‌ಡೌನ್‌ನಿಂದ ಈಗ ಹೆದ್ದಾರಿ ಜೀವಂತಿಕೆ ಕಳೆದುಕೊಂಡಿದೆ. ವಾಹನಗಳಿಗೆ ವಿರಾಮಕ್ಕೆ ನೆಲೆ ನೀಡಿ ಚಾಲಕರ ಹಸಿವು ನೀಗಿಸುತ್ತಿದ್ದ ಡಾಬಾಗಳು ಬಾಗಿಲುಮುಚ್ಚಿವೆ. ಸಂಕಷ್ಟ ಮನಗಂಡ ಬಳಗದ ಸದಸ್ಯರು ಚಾಲಕರಿಗೆ ನಿತ್ಯ ಮಧ್ಯಾಹ್ನ ಊಟದ ಪೊಟ್ಟಣ ಹಾಗೂ ನೀರಿನ ಸ್ಯಾಷೆಗಳನ್ನು ಉಚಿತವಾಗಿ ವಿತರಿಸುತ್ತಿದ್ದಾರೆ.

ನಿತ್ಯವೂ ಮಧ್ಯಾಹ್ನ 1 ಗಂಟೆಗೆ ಹೆದ್ದಾರಿಯ ಆಸುಪಾಸು ನಿಲ್ಲುವ ಪರಿಸರ ಸ್ನೇಹಿ ಬಳಗದ ಸದಸ್ಯರು, ವಾಹನಗಳನ್ನು ನಿಲ್ಲಿಸಿ ಅವುಗಳಲ್ಲಿ ಪ್ರಯಾಣಿಸುವವರಿಗೆ ಊಟ-ನೀರು ಕೊಡುತ್ತಿದ್ದಾರೆ.

ಹುನಗುಂದದಲ್ಲಿ ಅಂಗಡಿ, ಗ್ಯಾರೇಜ್‌ಗಳಲ್ಲಿ ಕೆಲಸಕ್ಕಿದ್ದವರು, ಸಣ್ಣ ಪುಟ್ಟ ವ್ಯಾಪಾರಿಗಳು, ವಿದ್ಯಾರ್ಥಿಗಳು ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಒಂದು ವಾರದಿಂದ ಈ ದಾಸೋಹ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ನಿತ್ಯ 200 ಜನರ ಹಸಿವು ನೀಗಿಸುತ್ತಿದ್ದಾರೆ.

'ಆರಂಭದಲ್ಲಿ ನಾವೇ ಕೆಲವರು ಕೈಯಿಂದ ಹಣ ಹಾಕಿ ಊಟ ಸಿದ್ಧಪಡಿಸಿ ಕೊಡಲು ಆರಂಭಿಸಿದೆವು. ನಂತರ ಊರಿನ ದಾನಿಗಳು ನೆರವಿಗೆ ನಿಂತರು' ಎಂದು ಗೆಳೆಯರಾದ ಸಂತೋಷ ಬಡಿಗೇರ, ರವಿ ಚಿತ್ತರಗಿ, ರಾಹುಲ್ ಬಡಿಗೇರ 'ಪ್ರಜಾವಾಣಿ'ಗೆ ತಿಳಿಸಿದರು. ಲಾಕ್‌ಡೌನ್ ಮುಗಿಯುವವರೆಗೂ ಚಾಲಕರಿಗೆ ಊಟ ಕೊಡುವ ಯೋಜನೆ ಹೊಂದಿದ್ದೇವೆ' ಎಂದರು.

ಹೆದ್ದಾರಿ ಪಕ್ಕದಲ್ಲಿಯೇ ಗ್ಯಾರೇಜ್ ಹೊಂದಿರುವ ಮಹಾಂತೇಶ ಹೊಂಬಳ ಈ ಸದಸ್ಯರ ಬೆನ್ನಿಗೆ ನಿಂತು ಮಾರ್ಗದರ್ಶನ ಮಾಡುತ್ತಾರೆ.

'ಹೊಸಪೇಟೆಯಿಂದ ಇಲ್ಲಿವರೆಗೆ ಎಲ್ಲೂ ಕುಡಿಯಲು ನೀರು ಸಿಕ್ಕಿರಲಿಲ್ಲ. ಈ ಹುಡುಗರದು ಮಾದರಿ ಕೆಲಸ' ಎಂದು ಹಾಸನದಿಂದ ಮಹಾರಾಷ್ಟ್ರದ ಸೊಲ್ಲಾಪುರಕ್ಕೆ ತೆಂಗಿನಕಾಯಿ ಲೋಡ್ ಒಯ್ಯುತ್ತಿದ್ದ ಲಾರಿಯ ಚಾಲಕ ತನ್ವೀರ್ ಮೆಚ್ಚುಗೆ ವ್ಯಕ್ತಪಡಿಸಿದರು.



ಹುನಗುಂದ ಪಟ್ಟಣದ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಲಾರಿ ಚಾಲಕರಿಗೆ ಊಟದ ಪೊಟ್ಟಣ ವಿತರಿಸಿದ ಪರಿಸರ ಸ್ನೇಹಿ ಬಳಗದ ಗೆಳೆಯರು ಚಿತ್ರ: ಸುರೇಶ ಪತ್ತಾರ

ಒಳ್ಳೆ ಸುದ್ದಿ

ಕಪ್ಪು ಶಿಲೀಂಧ್ರ ಔಷಧಕ್ಕೆ ತೆರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಕಪ್ಪು ಶಿಲೀಂಧ್ರದ ಚಿಕಿತ್ಸೆಯಲ್ಲಿ ಬಳಸುವ ಆ್ಯಂಫೊಟೆರಿಸಿನ್-ಬಿ ಔಷಧಿಯ ಆಮದಿಗೆ ಏಕೀಕೃತ ಸರಕು ಮತ್ತು ಸೇವಾ ತೆರಿಗೆಯಿಂದ (ಐ-ಜಿಎಸ್‌ಟಿ) ವಿನಾಯಿತಿ ನೀಡಲು ಶುಕ್ರವಾರ ನಡೆದ ಜಿಎಸ್‌ಟಿ ಮಂಡಳಿ ಸಭೆ ಸಮ್ಮತಿ ಸೂಚಿಸಿದೆ. ಕೋವಿಡ್ ಲಸಿಕೆಗೆ ವಿಧಿಸಲಾಗುತ್ತಿರುವ ಜಿಎಸ್‌ಟಿ ಪ್ರಮಾಣದಲ್ಲಿ ಮಂಡಳಿಯು ಬದಲಾವಣೆ ಮಾಡಿಲ್ಲ.

ಲಸಿಕೆ ಮೇಲಿನ ತೆರಿಗೆ ಪ್ರಮಾಣ ಕುರಿತು ಸಚಿವರ ಸಮಿತಿಯೊಂದು ಚರ್ಚೆ ನಡೆಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು. ಲಸಿಕೆಗೆ ಈಗ ಶೇಕಡ 5ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ವಿದೇಶಗಳಿಂದ ಉಚಿತವಾಗಿ ತರಿಸಿಕೊಳ್ಳುವ, ಕೋವಿಡ್-19ಕ್ಕೆ ಸಂಬಂಧಿಸಿದ ವಸ್ತುಗಳಿಗೆ ಐ-ಜಿಎಸ್‌ಟಿ ವಿನಾಯಿತಿ ಮುಂದುವರಿಸಲು ಮಂಡಳಿ ಒಪ್ಪಿದೆ ಎಂದು ನಿರ್ಮಲಾ ತಿಳಿಸಿದರು.

ಜಿಎಸ್‌ಟಿ ಅನುಷ್ಠಾನದಿಂದ ರಾಜ್ಯಗಳಿಗೆ ವರಮಾನದಲ್ಲಿ ಆಗಿರುವ ನಷ್ಟವನ್ನು ಭರ್ತಿ ಮಾಡಿಕೊಡಲು ₹ 1.58 ಲಕ್ಷ ಕೋಟಿಯನ್ನು ಕೇಂದ್ರವು ಸಾಲವಾಗಿ ಪಡೆಯಬೇಕು ಎಂದೂ ಮಂಡಳಿ ತೀರ್ಮಾನ ಮಾಡಿದೆ. ಜಿಎಸ್‌ಟಿ ಅನುಷ್ಠಾನದಿಂದ ಆಗಬಹುದಾದ ನಷ್ಟವನ್ನು ರಾಜ್ಯಗಳಿಗೆ ಕೇಂದ್ರವು ಭರ್ತಿ ಮಾಡಿಕೊಡಬೇಕು ಎಂಬ ನಿಯಮವನ್ನು 2022ರ ನಂತರವೂ ಜಾರಿಯಲ್ಲಿ ಇರಿಸುವ ಬಗ್ಗೆ ಪರಿಶೀಲಿಸಲು ಮಂಡಳಿಯ ವಿಶೇಷ ಸಭೆಯೊಂದು ಶೀಘ್ರದಲ್ಲೇ ನಡೆಯಲಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



₹ 3.67 ಲಕ್ಷಕ್ಕೆ ಮೃತದೇಹ ಒತ್ತೆ ಆಸ್ಪತ್ರೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ನಿಧನರಾಗಿದ್ದ ರೋಗಿಯ ಮೃತದೇಹ ಒತ್ತೆ ಇಟ್ಟುಕೊಂಡು ₹ 3.67 ಲಕ್ಷ ಚಿಕಿತ್ಸಾ ಶುಲ್ಕ ಪಾವತಿಸುವಂತೆ ಪಟ್ಟು ಹಿಡಿದಿದ್ದ ಆರೋಪದಡಿ ಇಲ್ಲಿನ ಚನ್ನಸಂದ್ರದ ಪಾಥ್‌ವೇ ಆಸ್ಪತ್ರೆ ವಿರುದ್ಧ ರಾಜರಾಜೇಶ್ವರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರೋಗಿಯ ಚಿಕಿತ್ಸೆಗೆ ಬೇಕಾಬಿಟ್ಟಿ ದರ ವಿಧಿಸಿ, ಶುಲ್ಕ ವಸೂಲಿಗಾಗಿ ಮೃತದೇಹ ಒತ್ತೆಯಾಗಿಟ್ಟುಕೊಂಡು ಕುಟುಂಬಸ್ಥರಿಗೆ ಕಿರುಕುಳ ನೀಡುವ ಕೆಲಸವನ್ನು ಕೆಲವು ಆಸ್ಪತ್ರೆಗಳು ಮಾಡುತ್ತಿದ್ದವು. ಇಂಥ ಆಸ್ಪತ್ರೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿವಿಧ ಸಂಘಟನೆಗಳು ಒತ್ತಾಯಿಸಿದ್ದವು.

ಮೃತದೇಹ ಹಸ್ತಾಂತರ ಸಂಬಂಧ ಆದೇಶ ಹೊರಡಿಸಿದ್ದ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, 'ಶುಲ್ಕ ಪಾವತಿಸಿಲ್ಲವೆಂದು ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲು ನಿರಾಕರಿಸುವಂತಿಲ್ಲ. ಶುಲ್ಕಕ್ಕಾಗಿ ಒತ್ತಡ ಹೇರುವಂತಿಲ್ಲ. ಈ ರೀತಿ ಮಾಡಿದರೆ, ಆಸ್ಪತ್ರೆ ನೋಂದಣಿ ರದ್ದುಪಡಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದರು.

ಇದರ ಬೆನ್ನಲ್ಲೇ ಪಾಥ್‌ವೇ ಆಸ್ಪತ್ರೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಮೃತದೇಹ ಒತ್ತೆಯಾಗಿಟ್ಟುಕೊಂಡಿದ್ದರ ವಿರುದ್ಧ ರಾಜ್ಯದಲ್ಲಿ ದಾಖಲಾದ ಮೊದಲ ಪ್ರಕರಣ ಇದಾಗಿದೆ.

'ಕೊರೊನಾ ಸೋಂಕಿತರಾಗಿದ್ದ ಲಕ್ಷ್ಮಿನಾರಾಯಣ (45) ಎಂಬುವರು ಚಿಕಿತ್ಸೆಗೆ ಸ್ಪಂದಿಸದೇ ಗುರುವಾರ ಮೃತಪಟ್ಟಿದ್ದರು. ಚಿಕಿತ್ಸೆಗೆ ಶುಲ್ಕ ಪಾವತಿಸಿಲ್ಲವೆಂದು ಆಸ್ಪತ್ರೆಯವರು ಸಂಬಂಧಿಕರಿಗೆ ಮೃತದೇಹ ನೀಡಿರಲಿಲ್ಲ. ಮೃತರ ಸಂಬಂಧಿ ಗೀತಾ ದೂರು ನೀಡಿದ್ದರು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.

4ನೇ ಪುಟ ನೋಡಿ

ಮುಖ್ಯಾಂಶಗಳು
- ₹ 8.17 ಲಕ್ಷ ಬಿಲ್ ಮಾಡಿದ್ದ ಆಸ್ಪತ್ರೆ
- ₹4.50 ಪಾವತಿ ಮಾಡಿದ್ದ ಸಂಬಂಧಿಕರು

ರಾಜ್ಯ ಕೋವಿಡ್ ಅಂಕಿ-ಅಂಶ

25,46,821 ▲	ಒಟ್ಟು ಸೋಂಕಿತರು (25,23,998 ನಿನ್ನೆಯ ವಿವರ)
3,72,373 ▼	ಸಕ್ರಿಯ ಪ್ರಕರಣಗಳು
21,46,621 ▲	ಗುಣಮುಖರಾದವರು
27,806 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	22,823	▼
ಗುಣಮುಖ	52,253	▲
ಸಾವು	401	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನಾರದಾ ಪ್ರಕರಣ: ಟಿಎಂಸಿ ಮುಖಂಡರಿಗೆ ಜಾಮೀನು 8

ವಲಸಿಗರೊಂದಿಗೆ ಹಳ್ಳಿಗೆ ಕಾಲಿಟ್ಟ ಸೋಂಕು • ಪರೀಕ್ಷೆಗೆ ಹಿಂಜರಿಯುತ್ತಿರುವ ಜನರು

ಕೋವಿಡ್ ಲಸಿಕೆ ಅಭಾವ, ವೈದ್ಯರ ಕೊರತೆ!

• ಆರ್.ಜಿತೇಂದ್ರ

ರಾಮನಗರ: ಬ್ಯಾಲಕೆರೆ ಎಂಬ ಆ ಪುಟ್ಟ ಗ್ರಾಮದ ಮನೆಗಳ ಮುಂದೆ ನಿಂತ ಗ್ರಾಮ ಪಂಚಾಯಿತಿ ಸಿಬ್ಬಂದಿ, 'ದಯಮಾಡಿ ಕೋವಿಡ್ ಪರೀಕ್ಷೆಗೆ ಬನ್ನಿ' ಎಂದು ಗೋಗರೆಯುತ್ತಿದ್ದರು. ಅವರ ಮನವಿಗೆ ಓಗೊಟ್ಟು ಅರ್ಧದಷ್ಟು ಮಂದಿ ಹೊರಬಂದರೆ, ಇನ್ನರ್ಧ ಮಂದಿ ಭಯದಿಂದ ಬಾಗಿಲು ಹಾಕಿಕೊಂಡು ಒಳಗೇ ಅವಿತಿದ್ದರು.

'ನಿನ್ನೆಯಷ್ಟೇ ನಡೆದ ರ‍್ಯಾಪಿಡ್ ಪರೀಕ್ಷೆಯಲ್ಲಿ ಗ್ರಾಮದ 50ರಲ್ಲಿ 15 ಮಂದಿಗೆ ಕೋವಿಡ್ ಪಾಸಿಟಿವ್ ಆಗಿದೆ. ಹೀಗಾಗಿ, ಆರೋಗ್ಯ ಇಲಾಖೆಯವರು ಇಂದು ಎಚ್ಚೆತ್ತು ಎಲ್ಲರ ಪರೀಕ್ಷೆ ಮಾಡುತ್ತಿದ್ದಾರೆ. ಆದರೆ ಜನ ಮಾತ್ರ ಭಯದಿಂದ ಹೊರಗೆ ಬರುತ್ತಿಲ್ಲ. ನಮ್ಮೂರಿನ ಮೂಲನಿವಾಸಿಗಳು ಲಾಕ್‌ಡೌನ್ ಘೋಷಣೆ ಆಗುತ್ತಿದ್ದಂತೆಯೇ ಬೆಂಗಳೂರಿನಿಂದ ಇಲ್ಲಿಗೆ ಬರದೇ ಹೋಗಿದ್ದರೆ, ಮದುವೆ-ತಿಥಿ ಹೆಸರಲ್ಲಿ ಜನ ಗುಂಪಾಗಿ ಸೇರದೇ ಹೋಗಿದ್ದರೆ ಹೀಗೆ ಕೋವಿಡ್ ಮನೆಮಂದಿಗೆಲ್ಲ ಹರಡುತ್ತಿರಲಿಲ್ಲ' ಎಂದು ಗ್ರಾಮದವರೇ ಆದ ಚಿಕ್ಕರಾಜು 'ಪ್ರಜಾವಾಣಿ'ಯೊಂದಿಗೆ ಬೇಸರ ತೋಡಿಕೊಂಡರು.

ಇದು ಮಾಗಡಿ ತಾಲ್ಲೂಕಿನ ಬ್ಯಾಲಕೆರೆಯ ಪರಿಸ್ಥಿತಿ ಮಾತ್ರವಲ್ಲ, ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲೂ ಇದೇ ಚಿತ್ರಣ. ಊರ ತುಂಬೆಲ್ಲ ಸೋಂಕು ಹಬ್ಬಿದೆ. ಪರೀಕ್ಷೆಗೆ ಬರಲು ಜನ ಹಿಂದೇಟು ಹಾಕುತ್ತಿದ್ದಾರೆ. ಮತ್ತೊಂದೆಡೆ ಜೀವಭಯದಿಂದ ಲಸಿಕೆ ಹಾಕಿಸಿಕೊಳ್ಳಲು ಆಸ್ಪತ್ರೆಗಳತ್ತ ಹೆಜ್ಜೆ ಇಟ್ಟವರಿಗೆ 'ದಾಸ್ತಾನು ಇಲ್ಲ' ಎಂಬ ಬೋರ್ಡಿನ ದರ್ಶನವಾಗುತ್ತಿದೆ.

ರಾಮನಗರ ಜಿಲ್ಲೆಯಲ್ಲಿ ಒಟ್ಟು 823 ಗ್ರಾಮಗಳಿವೆ. ಇವುಗಳಲ್ಲಿ 107 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 4 ಸಮುದಾಯ ಆರೋಗ್ಯ ಕೇಂದ್ರಗಳು ಇವೆ. ಬಹುತೇಕ ಕಡೆ ಕೋವಿಡ್ ಲಸಿಕೆ ಕೊರತೆ ಇದೆ. ಮೊದಲೆಲ್ಲ ಅಂಗನವಾಡಿ, ಸಮುದಾಯ ಕೇಂದ್ರಗಳಲ್ಲಿ ಜನರನ್ನು ಗುಂಪುಗೂಡಿಸಿಕೊಂಡು ಲಸಿಕೆ ಕೊಟ್ಟಿದ್ದ ಆರೋಗ್ಯ ಇಲಾಖೆ ಸದ್ಯ ಲಸಿಕೆ ಭಂಡಾರ ಖಾಲಿಯಾಗುತ್ತಲೇ ಕೈ ಕಟ್ಟಿ ಕುಳಿತಿದೆ.

9ನೇ ಪುಟ ನೋಡಿ

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಬ್ಯಾಲಕೆರೆಯಲ್ಲಿ ವೈದ್ಯರು ವ್ಯಕ್ತಿಯೊಬ್ಬರ ಗಂಟಲ ದ್ರವ ಮಾದರಿ ಸಂಗ್ರಹಿಸಿದರು

ಮನೆ ಮದ್ದಿಗೆ ಮೊರೆ

ಕೋವಿಡ್ ಪರೀಕ್ಷೆಗೆ ಒಳಗಾಗಲು ಜನರು ಹೆದರುತ್ತಿದ್ದಾರೆ. ಮನೆ-ಮನೆ ಸಮೀಕ್ಷೆ ನಡೆಸುತ್ತಿರುವ ಆಶಾ, ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಹಲ್ಲೆ ಯತ್ನವೂ ನಡೆದಿದೆ.

'ನಮ್ಮೂರಿನ ಯಾರೊಬ್ಬರೂ ಕೊರೊನಾ ಭಯದಿಂದ ಆಸ್ಪತ್ರೆ ಮೆಟ್ಟಿಲು ತುಳಿಯುತ್ತಿಲ್ಲ. ಜ್ವರ-ಕೆಮ್ಮು ಹೆಚ್ಚಾದರೆ ಕಷಾಯ, ವಿವಿಧ ಬೇರಿನ ರಸ ಕುಡಿಯುತ್ತಿದ್ದಾರೆ. ಬಹುತೇಕರು ಸ್ವಯಂ ಚಿಕಿತ್ಸಾ ವಿಧಾನ ಅನುಸರಿಸುತ್ತಿದ್ದಾರೆ' ಎನ್ನುತ್ತಾರೆ ಮಟಕಯ್ಯನದೊಡ್ಡಿ ನಿವಾಸಿ ಮುತ್ತುರಾಜ್.

'ಜನರ ಈ ಹಿಂಜರಿಕೆಯಿಂದಾಗಿಯೇ ಹಳ್ಳಿಗಳಲ್ಲಿ ಕೋವಿಡ್ ಸೋಂಕು ಉಲ್ಬಣಗೊಳ್ಳುತ್ತಿದೆ' ಎನ್ನುತ್ತಾರೆ ಮಾಗಡಿಯ ವೈದ್ಯಾಧಿಕಾರಿ ಡಾ.ಸತೀಶ್.

ವಿಶೇಷ ಪುಟ 9

ಶನಿವಾರದ ಉಷ್ಣಾಂಶ 32° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಬಿಸಿಲಿನ ವಾತಾವರಣ ಇರಲಿದೆ. ಸಂಜೆ ವೇಳೆ ಮಳೆ ಆಗುವ ಸಾಧ್ಯತೆ.

ಭಾನುವಾರ	ಸೋಮವಾರ	ಮಂಗಳವಾರ
31° 21°	31° 22°	32° 22°

ಸೂರ್ಯೋದಯ: 5:53 ಸೂರ್ಯಾಸ್ತ : 6:41 ಚಂದ್ರೋದಯ: ರಾ. 9:58 ಚಂದ್ರಾಸ್ತ: ಬೆ. 8:33

ಶುಕ್ರವಾರದ ಹವಾಮಾನ : ಗರಿಷ್ಠ 31° ಕನಿಷ್ಠ 21°

ಪ್ರಜಾವಾಣಿ

ನೀರು ಪೂರೈಕೆಯಲ್ಲಿ ವ್ಯತ್ಯಯ ಇಂದು

ಬೆಂಗಳೂರು: ನಗರದ ಶಿವಾನಂದ ವೃತ್ತದಲ್ಲಿ 700 ಮಿ.ಮೀ. ವ್ಯಾಸದ ನೀರು ಸರಬರಾಜು ಕೊಳವೆಯನ್ನು ಸ್ಥಳಾಂತರಿಸುವ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧೆಡೆ ಶನಿವಾರ (ಮೇ 29) ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಮಾಧವನಗರ, ಕುಮಾರ ಪಾರ್ಕ್ ಪೂರ್ವ, ಶ್ರೀಕಂಠ ಬಡಾವಣೆ, ಅಮೆರಿಕನ್ ಕಾಲೊನಿ, ಅಬ್‌ಶಾಟ್ ಬಡಾವಣೆ, ಫೇರ್ಫೀಲ್ಡ್ ಬಡಾವಣೆ, ಕನ್ನಿಂಗ್‌ಹ್ಯಾಮ್ ಅಡ್ಡರಸ್ತೆ, ಸಂಪಂಗಿರಾಮನಗರ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಗಾಂಧಿನಗರ, ಲಕ್ಷ್ಮಣಪುರಿ, ಕಾಟನ್‌ಪೇಟೆ, ಬಿ.ವಿ.ಕೆ ಅಯ್ಯಂಗಾರ್ ರಸ್ತೆ ಮತ್ತು ಎಂ.ಎಸ್.ಬಿಲ್ಡಿಂಗ್, ವಿಕಾಸಸೌಧ, ವಿಧಾನಸೌಧ, ಹೈಕೋರ್ಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಸರ್ಕಾರ, ಪೊಲೀಸರು ನಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ • ಸಹಾಯಕ್ಕಾಗಿ ಮನವಿ

ಲಾಕ್‌ಡೌನ್: ತೃತೀಯ ಲಿಂಗಿಗಳ ಸಂಕಷ್ಟ

• ಜಿ.ಶಿವಕುಮಾರ

ಬೆಂಗಳೂರು: 'ಲಾಕ್‌ಡೌನ್‌ನಿಂದಾಗಿ ಕೆಲಸ ಇಲ್ಲದಂತಾಗಿದೆ. ಇದರಿಂದ ಒಪ್ಪೊತ್ತಿನ ಊಟಕ್ಕೂ ಪಡಿಪಾಟಲು ಎದುರಿಸಬೇಕಾಗಿದೆ. ಸರ್ಕಾರಕ್ಕೆ ನಮ್ಮ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಪೊಲೀಸರ ದೌರ್ಜನ್ಯವಂತೂ ಮಿತಿಮೀರಿದೆ. ಎಲ್ಲರೂ ನಮ್ಮನ್ನು ಅನ್ಯಗ್ರಹದ ಜೀವಿಗಳಂತೆ ನೋಡುತ್ತಾರೆ. ನಾವು ಯಾರಿಗೂ ಬೇಡವಾಗಿದ್ದೇವೆ'....

ಬೆಂಗಳೂರಿನಲ್ಲಿರುವ ತೃತೀಯ ಲಿಂಗಿಯರ ಅಳಲು ಇದು. ಕೂಡ್ಲು ಗೇಟ್, ಬೊಮ್ಮನಹಳ್ಳಿ, ಆರ್‌ಪಿಸಿ ಲೇಔಟ್, ಕೆಂಗೇರಿ, ಯಶವಂತಪುರ, ಹೆಬ್ಬಾಳ, ದಾಸರಹಳ್ಳಿ, ವಿಜಯನಗರ ಹೀಗೆ ಬೆಂಗಳೂರಿನ ವಿವಿಧ ಭಾಗಗಳಲ್ಲಿ ಈ ಸಮುದಾಯಕ್ಕೆ ಸೇರಿದ ಸುಮಾರು 10 ಸಾವಿರ ಮಂದಿ ನೆಲೆಸಿದ್ದಾರೆ. ಭಿಕ್ಷಾಟನೆಯಿಂದ ಬರುವ ಹಣವೇ ಇವರಿಗೆ ಜೀವನಾಧಾರ. ಕೆಲವರು ಲೈಂಗಿಕ ಕಾರ್ಯಕರ್ತರಾಗಿಯೂ ಕೆಲಸ ಮಾಡುತ್ತಾರೆ. ಕೋವಿಡ್‌ನಿಂದಾಗಿ

> **ಎರಡು ತಿಂಗಳಿಂದ ಬಾಡಿಗೆ ಕಟ್ಟಿಲ್ಲ. ಸಾಲಮಾಡಿಯಾದರೂ ಬಾಡಿಗೆ ನೀಡುವಂತೆ ಪೀಡಿಸುತ್ತಿದ್ದಾರೆ. ಇಲ್ಲದಿದ್ದರೆ ಮನೆಯಿಂದ ಹೊರ ಹಾಕುವುದಾಗಿ ಬೆದರಿಸುತ್ತಿದ್ದಾರೆ.**
> **ಸೌಮ್ಯ,** ತೃತೀಯ ಲಿಂಗಿ

ಪ್ರಜಾವಾಣಿ ವಿಶೇಷ

ಅದಕ್ಕೂ ಕುತ್ತುಬಂದಿದ್ದು, ದಿಕ್ಕೇ ತೋಚದ ಸ್ಥಿತಿಯಲ್ಲಿ ಇವರಿದ್ದಾರೆ. ಸರ್ಕಾರದಿಂದ ಏನಾದರೂ ಪರಿಹಾರ ಸಿಗಬಹುದೇನೊ ಎಂಬ ನಿರೀಕ್ಷೆಯಲ್ಲಿದ್ದವರಿಗೆ ಮತ್ತೆ ನಿರಾಸೆ ಕಾಡಿದೆ.

ಸದ್ಯಕ್ಕಂತೂ ಬೆಂಗಳೂರು ತೊರೆಯುವಂತಿಲ್ಲ. ಊರಿಗೆ ಹೋದರೂ ಸಂಬಂಧಿಕರು ಮನೆಗೆ ಸೇರಿಸುವುದಿಲ್ಲ. ಇಂತಹ ತ್ರಿಶಂಕು ಸ್ಥಿತಿಯಲ್ಲಿ ಬದುಕು ಸಾಗಿಸಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ.

'ನಾವು ಭಿಕ್ಷಾಟನೆ ಮೂಲಕ ಹೊಟ್ಟೆ ಹೊರೆಯುತ್ತಿದ್ದೆವು. ಕೆಲವರು ಲೈಂಗಿಕ ಕಾರ್ಯಕರ್ತರಾಗಿಯೂ ದುಡಿಯುತ್ತಿದ್ದರು. ಲಾಕ್‌ಡೌನ್ ನಮ್ಮ ಜೀವನೋಪಾಯವನ್ನೇ ಕಸಿದುಕೊಂಡಿದೆ. ಬೆಳಿಗ್ಗೆ 6 ರಿಂದ 10ಗಂಟೆವರೆಗೆ ಅಗತ್ಯ ವಸ್ತು ಖರೀದಿಸಲು ಸರ್ಕಾರ ಅನುಮತಿ ನೀಡಿದೆ. ಈ ಅವಧಿಯಲ್ಲಿ ಯಾರು ಭಿಕ್ಷೆ ಹಾಕುತ್ತಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಲೈಂಗಿಕ ಕಾರ್ಯಕರ್ತರಾಗಿ ದುಡಿಯಲೂ ಸಾಧ್ಯವಿಲ್ಲ. ಇದು ಸರ್ಕಾರದ ಅರಿವಿಗೆ ಬಂದಿಲ್ಲವೇ. ನಮ್ಮದು ಅತ್ಯಂತ ಶೋಷಿತ ಸಮುದಾಯ. ಹೀಗಿದ್ದರೂ ಸರ್ಕಾರ ಯಾವುದೇ ಪರಿಹಾರ ಪ್ರಕಟಿಸಿಲ್ಲ. ಇದು ಎಷ್ಟರ ಮಟ್ಟಿಗೆ ಸರಿ' ಎಂದು ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಪ್ರಶ್ನಿಸಿದರು.

'ರಾಜಸ್ಥಾನ, ಕೇರಳ, ಅಸ್ಸಾಂ, ಮಹಾರಾಷ್ಟ್ರದಲ್ಲಿ ತೃತೀಯ ಲಿಂಗಿಯರನ್ನು ಗೌರವದಿಂದ ಕಾಣಲಾಗುತ್ತಿದೆ. ಆದರೆ ನಮ್ಮ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. ನಿರ್ದಿಷ್ಟ ಅವಧಿವರೆಗೆ ಲಾಕ್‌ಡೌನ್ ಹೇರುವುದಾಗಿ ಸರ್ಕಾರ ಮೊದಲೇ ತಿಳಿಸಿದ್ದರೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು. ಆ ಕೆಲಸ ಆಗಲಿಲ್ಲ. ಸರ್ಕಾರ ಗಂಟೆಗೊಂದು ತೀರ್ಮಾನ ಪ್ರಕಟಿಸುವ ಮೂಲಕ ಜನರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದೆ. ಸರ್ಕಾರಕ್ಕೆ ಲೆಕ್ಕವಿಲ್ಲದಷ್ಟು ಬಾರಿ ಮನವಿ ಸಲ್ಲಿಸಲಾಗಿದೆ. ಅಧಿಕಾರಿಗಳು ಮನವಿ ಪತ್ರ ಸ್ವೀಕರಿಸಿ ಅದನ್ನು ಕಸದ ಬುಟ್ಟಿಗೆ ಹಾಕುತ್ತಾರಷ್ಟೇ. ಅದರಿಂದ ಯಾವ ಪ್ರಯೋಜನವೂ ಆಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸರ್ಕಾರ ಮತ್ತು ಪೊಲೀಸರು ನಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ. ನಮಗೆ ಜೀವನ ಭದ್ರತೆಯೇ ಇಲ್ಲದಂತಾಗಿದೆ. ಒಂದೊಮ್ಮೆ ಅನಿವಾರ್ಯಕ್ಕೆ ಕಟ್ಟುಬಿದ್ದು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಕೊಂಡರೂ ಕೊರೊನಾ ಸೋಂಕು ತಗುಲುವ ಅಪಾಯವಿದೆ. ಲಸಿಕೆಗಾಗಿ ಆರೋಗ್ಯ ಕೇಂದ್ರಗಳಿಗೆ ಹೋದರೆ ಬೈಯ್ದು ಮನೆಗೆ ಕಳಿಸುತ್ತಾರೆ. ಸರ್ಕಾರದಿಂದ ನೆರವು ಸಿಗುವ ಯಾವ ಲಕ್ಷಣವೂ ಕಾಣುತ್ತಿಲ್ಲ. ಖಾಸಗಿ ಸಂಸ್ಥೆಯ ಯಾರಾದರು ಸಹಾಯ ಮಾಡಿದರೆ ಹೇಗೋ ಬದುಕು ನಡೆಸಬಹುದು' ಎಂದು ನಕ್ಷತ್ರ ಮನವಿ ಮಾಡಿದರು.

ಬೇಡಿಕೆಗಳೇನು?

- ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿರುವ ಸಮುದಾಯದ ಸದಸ್ಯರಿಗೆ ತಿಂಗಳಿಗೆ ₹20 ಸಾವಿರ ನೆರವು ಪ್ರಕಟಿಸಬೇಕು.
- ಲಾಕ್‌ಡೌನ್ ಅವಧಿಯಲ್ಲಿ ಎಲ್ಲರ ಮನೆ ಬಾಡಿಗೆಯನ್ನು ಸರ್ಕಾರವೇ ಪಾವತಿಸಬೇಕು. ವಿದ್ಯುತ್ ಹಾಗೂ ನೀರಿನ ಬಿಲ್ ಅನ್ನು ಸರ್ಕಾರವೇ ಭರಿಸಬೇಕು ಅಥವಾ ಮನ್ನಾ ಮಾಡಬೇಕು.
- ಸಮುದಾಯದವರಿಗೆ ಪ್ರತ್ಯೇಕವಾಗಿ ಲಸಿಕೆ ನೀಡಲು ಕ್ರಮಕೈಗೊಳ್ಳಬೇಕು.

ಸುದ್ದಿ 2 ನಿಮಿಷ

ಬಿಜೆಪಿ ಪಾಪದ ಫಲ ಅನುಭವಿಸುತ್ತಿದೆ: ಎಚ್‌ಡಿಕೆ

ಬೆಂಗಳೂರು: ಜಿಂದಾಲ್ ಕಂಪನಿಗೆ 3,667 ಎಕರೆ ಜಮೀನನ್ನು ಕ್ರಯಕ್ಕೆ ನೀಡುವ ವಿಚಾರದಲ್ಲಿ ಬಿಜೆಪಿ ಹಿಂದೆ ಮಾಡಿದ್ದ ಪಾಪದ ಫಲವನ್ನು ಈಗ ಅನುಭವಿಸುತ್ತಿದೆ. ಆದರೆ, ನಷ್ಟ ಜಾಸ್ತಿಯೇ ಆಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಈ ಕುರಿತು ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಗುತ್ತಿಗೆ ಅವಧಿ ಮುಗಿದ ಕಾರಣಕ್ಕಾಗಿ ಜಿಂದಾಲ್ ಕಂಪನಿಗೆ ಕ್ರಯಪತ್ರ ಮಾಡಿಕೊಡಬೇಕಿತ್ತು. ಅಷ್ಟನ್ನು ಮಾತ್ರ ಮಾಡಲು ಮುಂದಾಗಿದ್ದ ನನ್ನ ಸರ್ಕಾರದ ವಿರುದ್ಧ ಯಡಿಯೂರಪ್ಪ ಸಲ್ಲದ ಆರೋಪ ಮಾಡಿದ್ದರು. ನನ್ನ ಮೇಲೆ ಅಂದು ಮಾಡಿದ್ದ ಆರೋಪಗಳನ್ನೆಲ್ಲ ಈಗ ಅವರು ತಮ್ಮ ಮೇಲೆ ಹೊತ್ತುಕೊಳ್ಳುವಂತಾಗಿದೆ' ಎಂದಿದ್ದಾರೆ.

'ಪಕ್ಷದೊಳಗಿನ ಬಂಡಾಯದಿಂದ ಅನಿವಾರ್ಯವಾಗಿ ಬಿಜೆಪಿ ಸರ್ಕಾರ ಈ ವಿಚಾರದಲ್ಲಿ ಹಿಂದೆ ಸರಿದಿದೆ. ಪಕ್ಷವೊಂದು ದ್ವಿಮುಖ ಧೋರಣೆಯ ರಾಜಕಾರಣ ಮಾಡಬಾರದು ಎಂಬುದಕ್ಕೆ ಇದೊಂದು ನಿದರ್ಶನ. ವಿರೋಧ ಪಕ್ಷದಲ್ಲಿದ್ದಾಗ ವಿರೋಧಿಸಿದ ಕೆಲಸವನ್ನು ಆಡಳಿತ ಪಕ್ಷದಲ್ಲಿದ್ದಾಗ ಕದ್ದು ಮುಚ್ಚಿ ಮಾಡುವುದು ಬಿಜೆಪಿ ಸಂಸ್ಕೃತಿ' ಎಂದು ವಾಗ್ದಾಳಿ ನಡೆಸಿದ್ದಾರೆ.



'ಅಡುಗೆ ಎಣ್ಣೆ ದರ ನಿಯಂತ್ರಿಸಿ'

ಬೆಂಗಳೂರು: ಅಡುಗೆ ಎಣ್ಣೆ ದರ ನಿಯಂತ್ರಿಸುವಂತೆ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪೀಯೂಷ್ ಗೋಯಲ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ರಾಜ್ಯದ ಆಹಾರ ಸಚಿವ ಉಮೇಶ ಕತ್ತಿ ಅವರಿಗೆ ಸುರೇಶ್ ಪತ್ರ ಬರೆದಿದ್ದಾರೆ.

'ಲಾಕ್‌ಡೌನ್‌ನಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಹೈರಾಣಾಗಿರುವಾಗಲೇ ಅಡುಗೆ ಎಣ್ಣೆ ದರ ದುಪ್ಪಟ್ಟಾಗಿದೆ. ಸಾಮಾನ್ಯ ಅಡುಗೆ ಎಣ್ಣೆ ದರ ಪ್ರತಿ ಲೀಟರ್‌ಗೆ ₹ 150 ರಿಂದ ₹ 180 ಇದ್ದರೆ, ಬ್ರಾಂಡೆಡ್ ಎಣ್ಣೆ ದರ ಲೀಟರ್‌ಗೆ ₹ 230ರವರೆಗೂ ಇದೆ. ಇದರಿಂದಾಗಿ ಸಾಮಾನ್ಯ ಜನರಿಗೆ ಅಡುಗೆ ಎಣ್ಣೆ ಕೈಗೆಟುಕದಂತಾಗಿದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಕೆಪಿಎಸ್‌ಸಿ ಅಕ್ರಮ: ರಾಜ್ಯ ಸರ್ಕಾರದಿಂದ ಭ್ರಷ್ಟರ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಎಸ್‌ಸಿ 2011ನೇ ಸಾಲಿನ ಗೆಜೆಟೆಡ್ ಅಧಿಕಾರಿಗಳ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಅಧ್ಯಕ್ಷರು ಹಾಗೂ ಸದಸ್ಯರ ವಿರುದ್ಧದ ವಿಚಾರಣೆ ಕೈಬಿಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಬಿಜೆಪಿ ಸರ್ಕಾರವು ಭ್ರಷ್ಟರ ರಕ್ಷಣೆಗೆ ನಿಂತಿರುವುದಕ್ಕೆ ಇದು ನಿದರ್ಶನ. ತನ್ನ ಅವಧಿಯಲ್ಲಾಗಿರುವ ಕರ್ಮಕಾಂಡಗಳನ್ನು ಮುಚ್ಚಿಹಾಕಲು ಈ ತಂತ್ರ ಅನುಸರಿಸಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಯುವ ಘಟಕದ ಅಧ್ಯಕ್ಷ ಮುಕುಂದ್ ಗೌಡ ದೂರಿದ್ದಾರೆ.

'ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸುವಂತೆ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಸೂಚಿಸಿವೆ. ಹೀಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ನ್ಯಾಯಾಲಯಗಳ ಆದೇಶ ಗಾಳಿಗೆ ತೂರಲಾಗಿದೆ. ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್‌ನ ಕೆಲ ನಾಯಕರು ತನಿಖೆ ಕೈಬಿಡಬೇಕೆಂಬ ಅರ್ಥದಲ್ಲಿ ಮಾತನಾಡಿರುವುದು ಖಂಡನಾರ್ಹ. ಈ ಪ್ರಕರಣವನ್ನು ಮುಚ್ಚಿಹಾಕಲು ಹೊರಟಿರುವ ಸರ್ಕಾರದ ನಡೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ. ಇದರ ವಿರುದ್ಧ ನಮ್ಮ ಪಕ್ಷವು ರಾಷ್ಟ್ರಪತಿಗೆ ದೂರು ನೀಡಲಿದ್ದು, ರಾಜ್ಯದಲ್ಲಿ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕೆಂದು ಮನವಿ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

ಬಂಡವಾಳ ಸಂಗ್ರಹಕ್ಕೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ ಈಕ್ವಿಟಿ ಮತ್ತು ಸಾಲಪತ್ರಗಳ ಮೂಲಕ ಒಟ್ಟು ₹ 9 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲಿದೆ.

ಶುಕ್ರವಾರ ನಡೆದ ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ಈ ಮೊತ್ತದ ಬಂಡವಾಳ ಸಂಗ್ರಹಿಸಲು ಅನುಮೋದನೆ ನೀಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

'ಮೆಟ್ರೊ: ಮರಗಳ ಬಲಿ ಬೇಡ'

ನಿವೃತ್ತ ನ್ಯಾಯಮೂರ್ತಿ ಮೈಕಲ್ ಎಫ್. ಸಲ್ಡಾನಾ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಮಾರ್ಗ ನಿರ್ಮಾಣಕ್ಕಾಗಿ ಮರಗಳನ್ನು ಕಡಿಯುವ ಕಾರ್ಯವನ್ನು ತಕ್ಷಣದಿಂದಲೇ ನಿಲ್ಲಿಸಬೇಕು. ಉಳಿದ ಮಾರ್ಗಗಳನ್ನು ನೆಲದಡಿಯಲ್ಲಿಯೇ ನಿರ್ಮಾಣ ಮಾಡಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕಲ್ ಎಫ್. ಸಲ್ಡಾನಾ ಅವರು ಬೆಂಗಳೂರು ಮೆಟ್ರೊ ರೈಲು ನಿಗಮವನ್ನು (ಬಿಎಂಆರ್‌ಸಿಎಲ್) ಒತ್ತಾಯಿಸಿದ್ದಾರೆ.

ಈ ಕುರಿತು ನಿಗಮದ ನಿರ್ದೇಶಕ (ಯೋಜನೆ) ಡಿ. ರಾಧಾಕೃಷ್ಣ ರೆಡ್ಡಿ ಅವರಿಗೆ ಪತ್ರ ಬರೆದಿರುವ ಸಲ್ಡಾನಾ, ಮುಂಬೈನಲ್ಲಿ ಮೆಟ್ರೊ ಕಾರ್ ಶೆಡ್ ನಿರ್ಮಾಣ ಕಾರ್ಯದಿಂದ ಪರಿಸರದ ಮೇಲೆ ಆದ ಹಾನಿಯನ್ನು ಅವರು ಉದಾಹರಿಸಿದ್ದಾರೆ. ಸಲ್ಡಾನಾ ಅವರು ಬಾಂಬೆ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿಯೂ ಹೌದು.

'ಮರಗಳನ್ನು ಕಡಿದು ಮೆಟ್ರೊ ಕಾರ್ ಶೆಡ್ ನಿರ್ಮಾಣ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದರೂ ಅಂದಿನ ಬಿಜೆಪಿ ಸರ್ಕಾರ ಮಾತು ಕೇಳಲಿಲ್ಲ. ಈಗ ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರವೂ ಇದೇ ಕಾರ್ಯಕ್ಕೆ ಮುಂದಾಗಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಬೆಂಗಳೂರಿನಲ್ಲಿಯೂ ಇದೇ ಪರಿಸ್ಥಿತಿ ಉದ್ಭವವಾಗುವುದು ಬೇಡ. ಮುಂದೆ ಯಾವುದೇ ಮಾರ್ಗ ನಿರ್ಮಾಣ ಮಾಡುವುದಿದ್ದರೂ ಅದು ನೆಲದಡಿ ಅಥವಾ ಸುರಂಗ ಮಾರ್ಗದ್ದಾಗಿರಲಿ. ಭೂಮಿಯ ಮೇಲೆ ಇಂತಹ ಯೋಜನೆಗಳು ಜಾರಿ ಆಗಬಾರದು' ಎಂದೂ ಸಲ್ಡಾನಾ ಸಲಹೆ ನೀಡಿದ್ದಾರೆ.

'ಮೆಟ್ರೊ ಮಾರ್ಗಕ್ಕೆ ಐದು ಸಾವಿರ ಮರಕ್ಕೆ ಕೊಡಲಿಯೇಟು?'

ಹೊರವರ್ತುಲ ರಸ್ತೆ ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ (ಕೆಐಎ) ಮೆಟ್ರೊ ಮಾರ್ಗ ನಿರ್ಮಾಣಕ್ಕೆ 4,789 ಮರಗಳಿಗೆ ಕೊಡಲಿಯೇಟು ಬೀಳಲಿದೆ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಈ ಮೊದಲು ಉದ್ದೇಶಿಸಿದ್ದ ಬಸ್ ಆದ್ಯತಾ ಮಾರ್ಗದಲ್ಲಿಯೇ ಈ ಮೆಟ್ರೊ ಮಾರ್ಗವೂ ನಿರ್ಮಾಣವಾಗಲಿದೆ. ಬಸ್ ಆದ್ಯತಾ ಪಥದ ಮಧ್ಯದ ಭಾಗದಲ್ಲಿ ಅಂದರೆ ಮೀಡಿಯನ್‌ನಲ್ಲಿರುವ ಮರಗಳು ಈ ಯೋಜನೆಗೆ ಬಲಿಯಾಗಲಿವೆ. ಇವು ಬಹುತೇಕ ಸಣ್ಣ ಮರಗಳಾಗಿದ್ದು, ಕಡಿಯಬೇಕಾದ ಮರಗಳನ್ನು ಬಿಎಂಆರ್‌ಸಿಎಲ್ ಈಗಾಗಲೇ ಗುರುತಿಸಿದೆ ಎನ್ನಲಾಗಿದೆ. ಆದರೆ, ಬಿಬಿಎಂಪಿಯ ಅರಣ್ಯ ವಿಭಾಗದಿಂದ ಅನುಮತಿ ಸಿಗಬೇಕಿದೆ ಎಂದು ಮೂಲಗಳು ಹೇಳಿವೆ.

ನಮ್ಮ ಮೆಟ್ರೊ

ಪಶ್ಚಿಮ ಬಂಗಾಳ ಸರ್ಕಾರ ವಜಾಗೊಳಿಸಲು ಮನವಿ

ಬೆಂಗಳೂರು: 'ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶದ ಬಳಿಕ ಟಿಎಂಸಿ ಕಾರ್ಯಕರ್ತರು ಹಿಂದೂಗಳನ್ನೇ ಗುರಿಯಾಗಿಸಿಕೊಂಡು ಭಾರಿ ಹಿಂಸಾಚಾರ ನಡೆಸಿದ್ದಾರೆ. ಅವರ ಆಸ್ತಿಪಾಸ್ತಿಗಳಿಗೂ ಹಾನಿ ಮಾಡಿದ್ದಾರೆ. ಅನೇಕ ಹಿಂದೂ ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ನೇರ ಹೊಣೆ. ಹೀಗಾಗಿ ರಾಜ್ಯ ಸರ್ಕಾರವನ್ನು ಕೂಡಲೇ ವಜಾಗೊಳಿಸಬೇಕು' ಎಂದು ಒತ್ತಾಯಿಸಿ ಹಿಂದೂ ಜಾಗರಣ ವೇದಿಕೆಯ ಕರ್ನಾಟಕ ಘಟಕವು ರಾಷ್ಟ್ರಪತಿ ಅವರಿಗೆ ಪತ್ರದ ಮೂಲಕ ಆಗ್ರಹಿಸಿದೆ.

ಒಂದು ದಿನದ ವೇತನ ನೀಡಲು ಶಿಕ್ಷಕರ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕಷ್ಟದಲ್ಲಿರುವ ಖಾಸಗಿ ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ ಹಣಕಾಸಿನ ನೆರವು ನೀಡಲು ಐದು ದಿನಗಳ ವೇತನವನ್ನು ದೇಣಿಗೆ ನೀಡಿ ಎಂಬ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಮನವಿಯನ್ನು, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸ್ಪಷ್ಟವಾಗಿ ನಿರಾಕರಿಸಿದೆ.

ಅನುದಾನ ರಹಿತ ಶಾಲೆಗಳ ಶಿಕ್ಷಕರು ಮತ್ತು ಸಿಬ್ಬಂದಿಗೆ ಪ್ಯಾಕೇಜ್ ನೀಡಬೇಕು ಎಂದು ವಿಧಾನ ಪರಿಷತ್ತಿನ ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳ ಸದಸ್ಯರು ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಇದರ ಬೆನ್ನಲ್ಲೇ, ಶಿಕ್ಷಕರ ಸಂಘಗಳ ಪದಾಧಿಕಾರಿಗಳ ಜತೆ ಸಭೆ ನಡೆಸಿದ್ದ ಸಚಿವ ಸುರೇಶ್‌ಕುಮಾರ್, ಐದು ದಿನಗಳ ವೇತನ ದೇಣಿಗೆಯಾಗಿ ನೀಡಿ ಎಂದು ಮನವಿ ಮಾಡಿದ್ದರು. ಅದಕ್ಕೆ ಸಂಘದ ಪದಾಧಿಕಾರಿಗಳು ಒಪ್ಪದೇ ಇದ್ದಾಗ, ಕನಿಷ್ಠ ಒಂದು ದಿನದ ವೇತನ ನೀಡುವಂತೆ ಮನವೊಲಿಸುವ ಯತ್ನ ಮಾಡಿದ್ದರು.

ಒಂದು ದಿನ ವೇತನ ಕೊಡಲು ಸಾಧ್ಯವಿಲ್ಲ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರ್ಣಯ ತೆಗೆದುಕೊಂಡಿದೆ. 'ಹಾಗೊಂದು ವೇಳೆ ಒಂದು ದಿನದ ವೇತನ ನೀಡಬೇಕಾದರೆ ಸರ್ಕಾರ ನಮ್ಮ ಬೇಡಿಕೆಗಳನ್ನು ಒಪ್ಪಬೇಕು ಮತ್ತು ತುಟ್ಟಿಭತ್ಯೆ ಬಿಡುಗಡೆ ಮಾಡಬೇಕು' ಎಂದು ಸರ್ಕಾರಕ್ಕೆ ತಿಳಿಸಿರುವುದಾಗಿ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಶಿಕ್ಷಕರಲ್ಲಿ ಮನವಿ: ಅವಮಾನ'

'ಒಂದು ದಿನದ ಸಂಬಳವನ್ನು ದೇಣಿಗೆ ನೀಡುವಂತೆ ಸರ್ಕಾರಿ ಶಿಕ್ಷಕರ ಬಳಿ ಮನವಿ ಮಾಡುವ ಮೂಲಕ ಸರ್ಕಾರ, ಅನುದಾನ ರಹಿತ ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಅವಮಾನಿಸಿದೆ' ಎಂದು ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ ಹೇಳಿದೆ.

ಈ ಸಂಬಂಧ ಆಡಳಿತ ಮಂಡಳಿಗಳ ಸಂಘ ಸಚಿವ ಸುರೇಶ್‌ಕುಮಾರ್ ಅವರಿಗೆ ಪತ್ರ ಬರೆದಿದೆ.

'ಸರ್ಕಾರಿ ಶಾಲಾ ಶಿಕ್ಷಕರ ಸಂಘ ಖಾಸಗಿ ಶಾಲಾ ಶಿಕ್ಷಕರನ್ನು ಅವಮಾನಿಸಿದೆ. ಸರ್ಕಾರಿ ಶಾಲಾ ಶಿಕ್ಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಖಾಸಗಿ ಶಾಲಾ ಶಿಕ್ಷಕರಿಗೆ ನೆರವು ನೀಡುವ ವಿಚಾರದಲ್ಲಿ ಸರ್ಕಾರಿ ಶಾಲಾ ಶಿಕ್ಷಕರನ್ನು ಮಧ್ಯ ಎಳೆದು ತರಬೇಡಿ ಎಂದು ಸರ್ಕಾರಕ್ಕೆ ಮನವಿ ಮಾಡಿದ್ದೆವು. ಮತ್ತೆ ಅದೇ ತಪ್ಪನ್ನು ಸರ್ಕಾರ ಮಾಡಿದೆ' ಎಂದು ಪತ್ರದಲ್ಲಿ ಟೀಕಿಸಿದೆ.

ಜಲ್ಲಿ ಕ್ರಷರ್ ಪರವಾನಗಿ ಶುಲ್ಕ ನಿಗದಿಗೆ ಸೂಚನೆ

ಬೆಂಗಳೂರು: ಜಲ್ಲಿ ಕ್ರಷರ್ ಪರವಾನಗಿಗಳಿಗೆ ವಾರ್ಷಿಕ ನಿಯಂತ್ರಣ ಶುಲ್ಕ ನಿಗದಿ ಮಾಡುವ ಸಂಬಂಧ ನಿಯಮಾವಳಿ ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.



'ಜಲ್ಲಿ ಕ್ರಷರ್ ನಿಯಂತ್ರಣ ಕಾಯ್ದೆಗೆ ಸರ್ಕಾರ ತಿದ್ದುಪಡಿ ತಂದಿದ್ದು, ಅದರ ಪ್ರಕಾರ ಕ್ರಷರ್‌ಗಳ ಮಾಲೀಕರು ವಾರ್ಷಿಕ ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ, ನಿಯಮಾವಳಿ ರೂಪಿಸದ ಕಾರಣ ಸರ್ಕಾರಕ್ಕೆ ವರಮಾನ ಬರದಂತಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

'ಕಾಯ್ದೆಗೆ ತಿದ್ದುಪಡಿ ತಂದು 15 ತಿಂಗಳಾಗಿದ್ದರೂ ನಿಯಮಾವಳಿ ರೂಪಿಸದ ಕಾರಣ ಪುಸ್ತಕದಲ್ಲೇ ಕಾಯ್ದೆ ಉಳಿದುಕೊಂಡಿದೆ. ನಿಯಮಾವಳಿಗಳನ್ನು ಕೂಡಲೇ ರೂಪಿಸಬೇಕು. ಈ ಕುರಿತ ಆದೇಶ ಪ್ರತಿಯನ್ನು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗೆ ರವಾನಿಸಬೇಕು' ಎಂದು ಸರ್ಕಾರದ ಪರ ವಕೀಲರಿಗೆ ತಿಳಿಸಿದ ಪೀಠ, ವಿಚಾರಣೆಯನ್ನು ಜುಲೈ 2ಕ್ಕೆ ಮುಂದೂಡಿತು.

ಲಾಕ್‌ಡೌನ್ ವಿಸ್ತರಣೆ ಮಾಡಿದ್ದರಿಂದ ಪ್ರಕರಣಗಳು ಇಳಿಮುಖ: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿಕೆ

‘ಕೋವಿಡ್ ನಿಯಂತ್ರಣಕ್ಕೆ ಕ್ರಿಯಾಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಈಗ ಇಳಿಮುಖವಾಗಿದ್ದು, ಇನ್ನಷ್ಟು ಕಡಿಮೆ ಮಾಡಲು ಕ್ರಿಯಾಯೋಜನೆ ರೂಪಿಸಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.


ಗೌರವ ಗುಪ್ತ


‘ಲಾಕ್‌ಡೌನ್ ವಿಸ್ತರಣೆ ಮಾಡಿದ್ದರಿಂದ ಪ್ರಕರಣಗಳು ಇಳಿಮುಖ ಆಗಿರಬಹುದು. ಮತ್ತೆ ಲಾಕ್‌ಡೌನ್ ವಿಸ್ತರಣೆ ಮಾಡಬೇಕೇ, ಬೇಡವೇ ಎಂಬುದನ್ನು ತಜ್ಞರ ಸಮಿತಿ ವರದಿ ಆಧರಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ. ಅದರ ಹೊರತಾಗಿ ಬಿಬಿಎಂಪಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಲಾಗುತ್ತಿದೆ’ ಎಂದು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಕೋವಿಡ್ ಪರೀಕ್ಷೆಯನ್ನು ಒತ್ತಾಯದಿಂದ ಯಾರಿಗೂ ಮಾಡಿಸುತ್ತಿಲ್ಲ. ಸೋಂಕು ಹರಡುವಿಕೆ ತಡೆಯಲು ಪರೀಕ್ಷೆಯನ್ನು ವ್ಯಾಪಕವಾಗಿ ಮಾಡಲಾಗುತ್ತಿದೆ. ಪರೀಕ್ಷೆ ಹೆಚ್ಚಾದಷ್ಟೂ ವಸ್ತುಸ್ಥಿತಿ ಅರ್ಥವಾಗಲಿದೆ’ ಎಂದರು.

ಲಸಿಕೆ: ವಿದೇಶಕ್ಕೆ ತೆರಳುವವರಿಗೆ ಆದ್ಯತೆ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಗುರುತಿಸಲಾದ 18 ರಿಂದ 44 ವರ್ಷದೊಳಗಿನ ಆದ್ಯತಾ ಗುಂಪಿನಲ್ಲಿ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳುವ ಅಭ್ಯರ್ಥಿಗಳನ್ನು ಸೇರ್ಪಡೆ ಮಾಡಲಾಗಿದೆ.

ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಜಿಲ್ಲಾಧಿಕಾರಿಗಳು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಈಗಾಗಲೇ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವವರನ್ನು ಗುರುತಿಸಿ, ಕೊರೊನಾ ಮುಂಚೂಣಿ ಕಾರ್ಯಕರ್ತರು ಹಾಗೂ ಆದ್ಯತಾ ಗುಂಪುಗಳು ಎಂದು ವಿಂಗಡಿಸಲಾಗಿದೆ. ಅವರಿಗೆ ಮೇ 22ರಿಂದ ಲಸಿಕೆ ವಿತರಣೆ ಪ್ರಾರಂಭಿಸಲಾಗಿದೆ. ಈಗ ಆ ಸಾಲಿಗೆ ಮತ್ತಷ್ಟು ಗುಂಪುಗಳನ್ನು ಸೇರ್ಪಡೆ ಮಾಡಲಾಗಿದೆ. ಹಾಲು ಸಹಕಾರ ಸಂಘದ ಸಿಬ್ಬಂದಿ, ಕೇಬಲ್ ಆಪರೇಟರ್‌ಗಳನ್ನು ಕೂಡ ಆದ್ಯತಾ ಗುಂಪಿನಲ್ಲಿ ಗುರುತಿಸಲಾಗಿದೆ. ಉದ್ಯೋಗ ಹಾಗೂ ವ್ಯಾಸಂಗ ನಿಮಿತ್ತ ವಿದೇಶಕ್ಕೆ ತೆರಳುವವರ ದಾಖಲಾತಿಗಳನ್ನು ಪರಿಶೀಲಿಸಿ, ಲಸಿಕೆ ಪಡೆಯಲು ಅರ್ಹತಾ ಪ್ರಮಾಣ ಪತ್ರವನ್ನು ನೀಡಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.



‘ಈವರೆಗೆ 25.73 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಪ್ರತಿದಿನ 45 ವರ್ಷ ಮೇಲ್ಪಟ್ಟ 25 ಸಾವಿರ ಜನರಿಗೆ, 18ರಿಂದ 44 ವರ್ಷದೊಳಗಿನ ಕೋವಿಡ್ ಮುಂಚೂಣಿ ಯೋಧರಿಗೆ ನೀಡಲಾಗುತ್ತಿದೆ. 45 ವರ್ಷ ಮೇಲ್ಪಟ್ಟವರು ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೂ ಲಸಿಕೆ ಪಡೆಯಬಹುದು. ಆಯ್ದ 20 ವರ್ಗದ ನೌಕರರಿಗೆ ಅಲ್ಲಲ್ಲೇ ವಿಶೇಷ ಶಿಬಿರಗಳನ್ನು ಏರ್ಪಡಿಸಿ ಲಸಿಕೆ ನೀಡಲಾಗುವುದು’ ಎಂದರು.

52 ಸಾವಿರ ಮಂದಿ ಗುಣಮುಖ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಮತ್ತೆ 52,253 ಮಂದಿ ಗುಣವಾಗಿದ್ದಾರೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3.72 ಲಕ್ಷಕ್ಕೆ ಇಳಿಕೆಯಾಗಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 22,823 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.38 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 16.42ಕ್ಕೆ ಇಳಿಕೆಯಾಗಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 25.46 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 192 ಮಂದಿ ಸೇರಿದಂತೆ ರಾಜ್ಯದಲ್ಲಿ 401 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರ ಶೇ 1.75ಕ್ಕೆ ಇಳಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 27,806ಕ್ಕೆ ಏರಿಕೆಯಾಗಿದೆ.

10 ಜಿಲ್ಲೆಗಳಲ್ಲಿ 10ಕ್ಕೂ ಅಧಿಕ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಮೈಸೂರಿನಲ್ಲಿ 20 ಮಂದಿ, ಬಳ್ಳಾರಿಯಲ್ಲಿ 17 ಮಂದಿ, ತುಮಕೂರಿನಲ್ಲಿ 15 ಮಂದಿ, ಧಾರವಾಡದಲ್ಲಿ 14 ಮಂದಿ, ಹಾಸನ ಹಾಗೂ ಶಿವಮೊಗ್ಗದಲ್ಲಿ ತಲಾ 13 ಮಂದಿ, ಉತ್ತರ ಕನ್ನಡ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 11 ಮಂದಿ, ಬೆಳಗಾವಿಯಲ್ಲಿ 10 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಕೋವಿಡ್ ಪೀಡಿತರಲ್ಲಿ ಚೇತರಿಸಿಕೊಳ್ಳುವವರ ಸಂಖ್ಯೆ ಕೆಲ ದಿನಗಳಿಂದ ಹೆಚ್ಚಳವಾಗಿದೆ. ಈ ತಿಂಗಳು 28 ದಿನಗಳ ಅವಧಿಯಲ್ಲಿ 10.23 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಇದೇ ಅವಧಿಯಲ್ಲಿ ಸೋಂಕಿತರಲ್ಲಿ 10.21 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 5,736 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (1,677), ತುಮಕೂರು (1,326), ಬೆಳಗಾವಿ (1,319), ಶಿವಮೊಗ್ಗ (1,135), ಹಾಸನ (1,170) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿವೆ.

ಸುದ್ದಿ 2 ನಿಮಿಷ

ಕಪ್ಪು ಶಿಲೀಂಧ್ರ: ನಿಮ್ಹಾನ್ಸ್‌ಗೆ ಬಾಲಕ ಸ್ಥಳಾಂತರ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕು ತಗುಲಿ ನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದ ಮೈಸೂರಿನ 11 ವರ್ಷದ ಬಾಲಕನಿಗೆ ಹೆಚ್ಚಿನ ತಪಾಸಣೆ ನಡೆಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ಸ್ಥಳಾಂತರ ಮಾಡಲಾಗಿದೆ.

ಕೋವಿಡ್‌ನಿಂದ ಚೇತರಿಸಿಕೊಂಡಿದ್ದ ಬಾಲಕ ಶಿಲೀಂಧ್ರ ಸೋಂಕಿತನಾಗಿ, ಗಂಭೀರವಾಗಿ ಅಸ್ವಸ್ಥಗೊಂಡಿದ್ದ. ಪರೀಕ್ಷೆ ನಡೆಸಿದ ಬೌರಿಂಗ್ ಆಸ್ಪತ್ರೆಯ ವೈದ್ಯರು ಮಿದುಳಿಗೆ ಸೋಂಕು ಹರಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಹೀಗಾಗಿ, ಹೆಚ್ಚಿನ ತಪಾಸಣೆಯ ಸಂಬಂಧ ನಿಮ್ಹಾನ್ಸ್‌ಗೆ ಶುಕ್ರವಾರ ದಾಖಲಿಸಲಾಗಿದೆ. ಅಲ್ಲಿನ ನರರೋಗ ತಜ್ಞರು ವಿವಿಧ ಪರೀಕ್ಷೆಗಳನ್ನು ನಡೆಸಿ, ಚಿಕಿತ್ಸೆ ನೀಡಲಾರಂಭಿಸಿದ್ದಾರೆ.

ನಗರದಲ್ಲಿ ಹೊಸದಾಗಿ 19 ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ದೃಢಪಟ್ಟಿವೆ. 8 ಮಂದಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದವರಲ್ಲಿ ಒಬ್ಬರು ಚೇತರಿಸಿಕೊಂಡು ಮನೆಗೆ ತೆರಳಿದ್ದಾರೆ. ಸದ್ಯ 67 ಮಂದಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.

‘ಮೈ ಸೇವಾ’ ನಿಂದ ತುರ್ತು ಸೇವೆ



ಬೆಂಗಳೂರು: ಕೋವಿಡ್ ಸೋಂಕಿತರನ್ನು ಸಕಾಲಕ್ಕೆ ಆಂಬುಲೆನ್ಸ್‌ನಲ್ಲಿ ಉಚಿತವಾಗಿ ಆಸ್ಪತ್ರೆಗೆ ತಲುಪಿಸುವುದು, ಅಗತ್ಯವಿರುವ ರೋಗಿಗಳಿಗೆ ಆಮ್ಲಜನಕ ಸಾಂದ್ರಕ ಒದಗಿಸಲು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದ ‘ಮೈ ಸೇವಾ ತಂಡ’ದ ತುರ್ತು ಸೇವಾ ಕಾರ್ಯಕ್ಕೆ ಕಂದಾಯ ಸಚಿವ ಆರ್.ಅಶೋಕ ಶುಕ್ರವಾರ ಚಾಲನೆ ನೀಡಿದರು.

‘ಕಳೆದ ವರ್ಷದ ಲಾಕ್‌ಡೌನ್ ಸಮಯದಲ್ಲಿ ರಾಜ್ಯದಾದ್ಯಂತ ಉಚಿತ ಔಷಧ ವಿತರಣೆ ಮಾಡಲಾಗಿತ್ತು. ಈ ಸಲ ಚಿಕಿತ್ಸೆಗೆ ಅಗತ್ಯವಿರುವ ಆಮ್ಲಜನಕ ವಿತರಣೆ ನಡೆಯುತ್ತಿದೆ’ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೊರೊನಾ ಸೋಂಕಿತರ ಸೇವೆಯಲ್ಲಿ ನಿರತರಾಗಿರುವ ಮುಂಚೂಣಿ ಸಿಬ್ಬಂದಿಗೆ ಆಸರೆಯಾಗಿ ಈ ತಂಡ ಕಾರ್ಯನಿರ್ವಹಿಸಲಿದೆ. ಜಿಲ್ಲೆಗೊಂದು ಆಂಬುಲೆನ್ಸ್ ಸೇವೆ ಕಲ್ಪಿಸಲಾಗಿದೆ. ಕೊರೊನಾ ಕರ್ತವ್ಯದ ನಡುವೆ ಸಿಬ್ಬಂದಿ ವಿಶ್ರಾಂತಿ ಪಡೆಯಲು ಹೋಟೆಲ್ ಸೌಲಭ್ಯ ಕಲ್ಪಿಸಲಾಗುವುದು’ ಎಂದರು. ಸಂಪರ್ಕಕ್ಕೆ: 7899854857

ನಗರದಲ್ಲಿ ಇಂದು

ಬಾಲಕಾರ್ಮಿಕ ಪದ್ಧತಿ ಕುರಿತು ಮಕ್ಕಳೊಂದಿಗೆ ಸಮಾಲೋಚನೆ: ಆಯೋಜನೆ–ಬೆಂಗಳೂರು ಚೈಲ್ಡ್ ರೈಟ್ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

‘ರಿಯಲ್ ಎಸ್ಟೇಟ್ ಸರ್‌ವೈವಲ್ ಸೀರೀಸ್’ ವೆಬಿನಾರ್: ಉದ್ಘಾಟನೆ–ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಮಾತನಾಡುವವರು–ರಾಜೀವ್ ತಲ್ವಾರ್, ನಿರಂಜನ್ ಹಿರಾನಂದನಿ, ರಂಜನ್ ಬಂಡೇಲ್ಕರ್, ಪ್ರೇಮ್ ಕುಮಾರ್, ಸತೀಶ್ ಕುಮಾರ್, ಡಾ.ಸುಜಿತ್ ಕುಮಾರ್, ಆಯೋಜನೆ–ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್ (ಎನ್‌ಎಆರ್‌ಇಡಿಸಿಒ), ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

‘ಎಚ್.ಎಸ್.ದೊರೆಸ್ವಾಮಿ–ನೆನಪು ಮತ್ತು ಹೊರಿಸಿರುವ ಜವಾಬ್ದಾರಿಗಳು’ ಕುರಿತು ಚರ್ಚೆ: ಅಧ್ಯಕ್ಷತೆ–ಮೈಕಲ್ ಫರ್ನಾಂಡಿಸ್, ವಿಷಯ ಮಂಡನೆ–ಬಿ.ಆರ್.ಪಾಟೀಲ, ಗುರುಪ್ರಸಾದ್ ಕೆರೆಗೋಡು, ಸುನಂದಾ ಜಯರಾಮ್, ಬಡಗಲಪುರ ನಾಗೇಂದ್ರ, ಟಿ.ಎನ್.ಪ್ರಕಾಶ್ ಕಮ್ಮರಡಿ, ಆಯೋಜನೆ–ಸಮಾಜವಾದಿ ಅಧ್ಯಯನ ಕೇಂದ್ರ, ಸಮಾಜವಾದಿ ಸಮಾಗಮ, ಮಧ್ಯಾಹ್ನ 12 (ಆನ್‌ಲೈನ್ ಕಾರ್ಯಕ್ರಮ)

ಹಿಂದೂಸ್ತಾನಿ ಗಾಯಕ ಸಿದ್ದರಾಮ ಜಂಬಲದಿನ್ನಿ ಸ್ಮರಣೆ: ನೇತೃತ್ವ–ಗೊ.ರು. ಚನ್ನಬಸಪ್ಪ, ಪ್ರಧಾನ ಭಾಷಣ–ಪಂಡಿತ್ ನರಸಿಂಹಲು ವಡವಾಟಿ, ಅತಿಥಿಗಳು–ಕುಮಾರ ಕಣವಿ, ಸೂಗುರೇಶ್ ಅಸ್ಕಿಹಾಳ್, ಉಷಾ ಕಿರಣ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಕೋವಿಡ್ ನಿಯಂತ್ರಣಕ್ಕೆ ಜೈವಿಕ ಸೋಂಕು ನಿವಾರಕವನ್ನು ವೈಮಾನಿಕವಾಗಿ ಸಿಂಪಡಣೆ ಮಾಡುವ ಪೈಲಟ್ ಯೋಜನೆಯ ಉದ್ಘಾಟನೆ: ಅತಿಥಿಗಳು–ಕಂದಾಯ ಸಚಿವ ಆರ್.ಅಶೋಕ, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಶಾಸಕ ಕೃಷ್ಣಬೈರೇಗೌಡ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಆಯೋಜನೆ–ಏರಿಯಲ್ ವರ್ಕ್ಸ್ ಎಲ್‌ಎಲ್‌ಪಿ, ಸ್ಥಳ–ಜಕ್ಕೂರು ಏರೋಡ್ರೋಮ್, ಸಂಜೆ 4

ಸಾವಿನ ಸಂಕಟದ ಶ್ರದ್ಧಾಂಜಲಿ–‘ಕೊರೊನಾ ಕಂಬನಿಯ ಕುಯಿಲು’ ವೆಬಿನಾರ್ ಸರಣಿಗೆ ಚಾಲನೆ: ಬರಗೂರು ರಾಮಚಂದ್ರಪ್ಪ, ಮಾತನಾಡುವವರು–ಗೀತಾ ವಸಂತ, ಎ.ಬಿ.ರಾಮಚಂದ್ರಪ್ಪ, ಲಕ್ಷ್ಮೀ ಚಂದ್ರಶೇಖರ್, ವಾಸುದೇವ ಉಚ್ಚಿಲ, ಎ.ವಿ.ಲಕ್ಷ್ಮೀನಾರಾಯಣ್, ಸುಜಾತ ಲಕ್ಷ್ಮೀಪುರ, ಆಯೋಜನೆ–ಬಂಡಾಯ ಸಾಹಿತ್ಯ ಸಂಘಟನೆ, ದಲಿತ ಹಕ್ಕುಗಳ ಸಮಿತಿ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)


ಬರಗೂರು ರಾಮಚಂದ್ರಪ್ಪ

ಉಪನಿಷದ್ ಸರಣಿ–‘ಇತಿಹಾಸ್ ಆ್ಯಂಡ್ ಹಿಸ್ಟರಿ’ ಕುರಿತು ಚರ್ಚೆ: ದರ್ಪಣ್ ಫೌಂಡೇಷನ್‌ನ ಸ್ಥಾಪಕ ಗುರೂಜಿ ನಂದಕಿಶೋರ್ ತಿವಾರಿ, ನೀಲೇಶ್ ಓಕ್, ಆಯೋಜನೆ–ದರ್ಪಣ್ ಫೌಂಡೇಷನ್, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ

ನಗರದ ಕೋವಿಡ್ ಅಂಕಿ–ಅಂಶ

11,49,614 ▲	ಒಟ್ಟು ಪ್ರಕರಣಗಳು
1,80,697 ▼	ಸಕ್ರಿಯ ಪ್ರಕರಣಗಳು
9,56,303 ▲	ಗುಣಮುಖರಾದವರು
12,613 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	5,736	▼
ಗುಣಮುಖ	31,237	▲
ಸಾವು	192	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅಸಂಘಟಿತ ಕಾರ್ಮಿಕರಿಗೆ ನೆರವು

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ತೊಂದರೆಗೆ ಸಿಲುಕಿರುವ 11 ವರ್ಗಗಳ 3.30 ಲಕ್ಷ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸರ್ಕಾರದ ಪರಿಹಾರ ಪ್ಯಾಕೇಜ್ ಅಡಿಯಲ್ಲಿ ತಲಾ ₹ 2,000 ಪರಿಹಾರ ವಿತರಿಸುವುದಕ್ಕಾಗಿ ₹ 66.09 ಕೋಟಿಯನ್ನು ಕಾರ್ಮಿಕ ಇಲಾಖೆ ಶುಕ್ರವಾರ ಬಿಡುಗಡೆ ಮಾಡಿದೆ.

ಅಗಸರು, ಕ್ಷೌರಿಕರು, ಮನೆ ಕೆಲಸದವರು, ಟೈಲರ್‌ಗಳು, ಮೆಕ್ಯಾನಿಕ್‌ಗಳು, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಮತ್ತು ಭಟ್ಟಿ ಕಾರ್ಮಿಕರಿಗೆ ಈ ಅನುದಾನವನ್ನು ಬಳಸಿ ತಲಾ ₹ 2,000 ಪರಿಹಾರ ವಿತರಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.


ಇ.ಸಿ.ಜೆ, ಹೃದಯ ಬಡಿತ ಸೇರಿ ತುರ್ತು ಆರೋಗ್ಯ ಮಾಹಿತಿ

ಜಯದೇವ ಆಸ್ಪತ್ರೆ: ರೋಗಿಯ ಮೇಲೆ ನಿಗಾಕ್ಕೆ ಸಾಧನ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ.ಸಿ.ಜಿ (ಎಲೆಕ್ಟ್ರೊಕಾರ್ಡಿಯೊಗ್ರಾಮ್), ಹೃದಯ ಬಡಿತ ಸೇರಿದಂತೆ ವಿವಿಧ ಪರೀಕ್ಷೆಗಳಿಗೆ ಸಹಕಾರಿಯಾಗುವ ವೈದ್ಯಕೀಯ ಸಾಧನವನ್ನು ಅಭಿವೃದ್ಧಿಪಡಿಸಿರುವ ಕಾರ್ಡಿಯಾಕ್ ಡಿಸೈನ್ ಲ್ಯಾಬ್ ಎಂಬ ಕಂಪನಿ ಜಯದೇವ ಹೃದ್ರೋಗ ಸಂಸ್ಥೆಗೆ ಕೆಲ ಉಪಕರಣಗಳನ್ನು ಮೌಲ್ವೀಕರಿಸಲು ನೀಡಿದೆ.

‘ಪದ್ಮ ವೈಟಲ್ಸ್’ ಹೆಸರಿನ ಈ ಟೆಲಿಮೆಟ್ರಿಕ್ ಮೇಲ್ವಿಚಾರಣಾ ಸಾಧನವನ್ನು ರೋಗಿಯು ಸುಲಭವಾಗಿ ನಿರ್ವಹಿಸಬಹುದು. ಲ್ಯಾಬ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಆನಂದ ಮದನ ಗೋಪಾಲ್ ನೇತೃತ್ವದ ತಂಡವು ಈ ಸಾಧನವನ್ನು ಅಭಿವೃದ್ಧಿಪಡಿಸಿದೆ. ಎಲೆಕ್ಟ್ರೋಫಿಜಿಯಾಲಾಜಿಸ್ಟ್ ಡಾ.ಎಸ್. ಜಯಪ್ರಕಾಶ್ ಇದಕ್ಕೆ ಮಾರ್ಗದರ್ಶನ ನೀಡಿದ್ದರು. ಈ ಸಾಧನವನ್ನು ಕೈ, ಹೊಟ್ಟೆಯ ಭಾಗದಲ್ಲಿ ಕಟ್ಟಿಕೊಳ್ಳಬಹುದು. ಇ.ಸಿ.ಜಿ., ಹೃದಯ ಬಡಿತ, ದೇಹದ ಉಷ್ಣಾಂಶ, ರಕ್ತದ ಒತ್ತಡ, ಉಸಿರಾಟ, ಆಮ್ಲಜನಕ ಪ್ರಮಾಣ ಸೇರಿ ವಿವಿಧ ಮಾಹಿತಿ ಪಡೆದುಕೊಳ್ಳಬಹುದು.


ನೂತನವಾಗಿ ಅಭಿವೃದ್ಧಿಪಡಿಸಲಾದ ‘ಪದ್ಮ ವೈಟಲ್ಸ್’ ಸಾಧನದ ಜತೆಗೆ ಡಾ.ಸಿ.ಎನ್. ಮಂಜುನಾಥ್, ಡಾ.ಎಸ್. ಜಯಪ್ರಕಾಶ್, ಡಾ. ಆನಂದ ಮದನಗೋಪಾಲ್ ಇದ್ದರು.

ಆಸ್ಪತ್ರೆ ಮತ್ತು ಮನೆಯಲ್ಲಿ ವ್ಯಕ್ತಿಯ ಆರೋಗ್ಯದ ಬಗ್ಗೆ ತಿಳಿದುಕೊಳ್ಳಲು ಈ ಸಾಧನ ನೆರವಾಗಲಿದೆ. ತೀವ್ರ ನಿಗಾ ಘಟಕದಲ್ಲಿ ದಾಖಲಿಸಿದ ರೋಗಿಯ ಮೇಲೆ ನಿಗಾ ಇರಿಸುವಂತೆ ಈ ಸಾಧನವು ಕಾರ್ಯನಿರ್ವಹಿಸಲಿದ್ದು, ಆರೋಗ್ಯದಲ್ಲಿನ ಏರಿಳಿತವನ್ನು ಪತ್ತೆ ಮಾಡಲಿದೆ. ಆಸ್ಪತ್ರೆಯಲ್ಲಿ ಪ್ರಯೋಗ ಮಾಡಲಾಗಿದ್ದು, ದೇಶದ ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಕೂಡ ಇದನ್ನು ಅಳವಡಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ‘ಈ ಸಾಧನವನ್ನು ಆಸ್ಪತ್ರೆಯ ಕೋವಿಡ್ ವಾರ್ಡ್ ಮತ್ತು ತೀವ್ರ ನಿಗಾ ಘಟಕದಲ್ಲಿ ಅಳವಡಿಕೆ ಮಾಡಲಾಗಿದೆ. ಇದರಿಂದಾಗಿ ಕೋವಿಡ್ ಪೀಡಿತರು ಹಾಗೂ ಹೃದ್ರೋಗಿಗಳ ಆರೋಗ್ಯದ ಮೇಲೆ ನಿಗಾ ಇಡಲು ಸಾಧ್ಯವಾಗುತ್ತದೆ’ ಎಂದು ತಿಳಿಸಿದ್ದಾರೆ.

‘ಇ.ಸಿ.ಜಿ, ಹೃದಯ ಬಡಿತ ಸೇರಿದಂತೆ ಪ್ರಮುಖ ಐದು ತುರ್ತು ಆರೋಗ್ಯ ಮಾಹಿತಿಯನ್ನು ಕೇಂದ್ರ ಸ್ಥಾನದಿಂದ ಎಲ್ಲ ವೈದ್ಯರು ಹಾಗೂ ಶುಶ್ರೂಷಕರು ತಮ್ಮ ಮೊಬೈಲ್ ದೂರವಾಣಿಯ ಮೂಲಕ ತಿಳಿದುಕೊಂಡು, ಚಿಕಿತ್ಸೆಯ ಬಗ್ಗೆ ನಿರ್ಧರಿಸಬಹುದು’ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಮಕ್ಕಳ ಆರೈಕೆ ಕೇಂದ್ರ ಆರಂಭಕ್ಕೆ ಕ್ರಮ

ದಾಬಸ್ ಪೇಟೆ: ’ಜಿಲ್ಲೆಯಲ್ಲಿ ಮಕ್ಕಳು ಕೋವಿಡ್ ಸೋಂಕಿಗೆ ತುತ್ತಾಗುತ್ತಿದ್ದು, ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ ಎಂದು ಈಗಾಗಲೇ ತಜ್ಞರು ಎಚ್ಚರಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಮಕ್ಕಳಿಗಾಗಿಯೇ ಆರೈಕೆ ಕೇಂದ್ರಗಳನ್ನು ತೆರೆಯಲಾಗುವುದು’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಶ್ರೀನಿವಾಸ್ ತಿಳಿಸಿದರು.

ನೆಲಮಂಗಲ ತಾಲ್ಲೂಕಿನ ನರಸೀಪುರ ಪಂಚಾಯಿತಿಯ ಗೋವಿಂದಪುರ ಗ್ರಾಮಕ್ಕೆ ಭೇಟಿ ನೀಡಿ, ಮೊಬೈಲ್ ಕ್ಲಿನಿಕ್ ಕಾರ್ಯವೈಖರಿ ವೀಕ್ಷಿಸಿ ಮಾತನಾಡಿದರು.

ಕೊರೊನಾ ಎರಡನೇ ಅಲೆ ತಡೆಯಲು ಅಗತ್ಯ ಬಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲೆಯ ಪ್ರತಿ ಹೋಬಳಿಯಲ್ಲೊಂದು ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗುವುದು ಎಂದರು.


ಗೋವಿಂದಪುರದ ಮೊಬೈಲ್ ಕ್ಲಿನಿಕ್ ಕಾರ್ಯವೈಖರಿಯನ್ನು ಜಿಲ್ಲಾಧಿಕಾರಿ ಶ್ರೀನಿವಾಸ್ ಹಾಗೂ ತಹಶೀಲ್ದಾರ್ ಮಂಜುನಾಥ ಕೆ. ವೀಕ್ಷಿಸಿದರು.

ದಾಬಸ್ ಪೇಟೆ ಪಟ್ಟಣದಲ್ಲಿರುವ ಆರೋಗ್ಯ ಭಾರತಿ ಆಸ್ಪತ್ರೆಯಲ್ಲಿ ಕೋವಿಡ್ ನಿಯಮಾವಳಿಗಳನ್ನು ಅನುಸರಿಸುತ್ತಿಲ್ಲ ಎಂದು ಸ್ಥಳೀಯರು ಆರೋಪಿಸಿದ ಕಾರಣ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯ ಮಾಲೀಕ ಡಾ.ಚಂದ್ರಶೇಖರ್ ಅವರನ್ನು ತರಾಟೆಗೆ ತೆಗೆದುಕೊಂಡರು. ಇದೇ ವೇಳೆ ಕೆಲ ಸಮಸ್ಯೆಗಳು ಕಂಡು ಬಂದದ್ದರಿಂದ ತಾತ್ಕಾಲಿಕವಾಗಿ ಆಸ್ಪತ್ರೆ ಮುಚ್ಚಲು ತಾಲ್ಲೂಕು ಆರೋಗ್ಯಾಧಿಕಾರಿಗೆ ಸೂಚಿಸಿದರು.


ಮಹಾಲಕ್ಷ್ಮಿ ಲೇಔಟ್‌ನ ಶಂಕರಮಠ ಆಟದ ಮೈದಾನದಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಜನ ಕಾಯುತ್ತಿರುವುದು–ಪ್ರಜಾವಾಣಿ ಚಿತ್ರ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.99 ಕೋಟಿ ▲	2.77 ಕೋಟಿ ▲
ಸಕ್ರಿಯ ಪ್ರಕರಣ	1.46 ಕೋಟಿ ▼	22.16 ಲಕ್ಷ ▼
ಗುಣಮುಖ	15.17 ಕೋಟಿ ▲	2.51 ಕೋಟಿ ▲
ಸಾವು	35.31 ಲಕ್ಷ ▲	3.22 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.37 ಲಕ್ಷ ▼	1.64 ಲಕ್ಷ ▼
ಗುಣಮುಖ	6.55 ಲಕ್ಷ ▼	2.71 ಲಕ್ಷ ▲
ಸಾವು	11,678 ▼	3,440 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	66,722 ▼
ಅಮೆರಿಕ	24,393 ▲
ಫ್ರಾನ್ಸ್	13,933 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	56.90 ▼
ಬ್ರೆಜಿಲ್	10.99 ▼
ಫ್ರಾನ್ಸ್	2.42 ▼

(*ರಾತ್ರಿ 12.00ರ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	93,198 ▲
ದೆಹಲಿ	23,951 ▲
ತಮಿಳುನಾಡು	22,775 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	56.92 ▲
ಕೇರಳ	24.70 ▲
ತಮಿಳುನಾಡು	16.86 ▼

ಪ್ರಜಾವಾಣಿ ಗ್ರಾಫಿಕ್ಸ್

‘ಲಸಿಕೆ: ಸರ್ಕಾರ ಯಾರ ಹಿತ ರಕ್ಷಿಸುತ್ತಿದೆ?’

ಬೆಂಗಳೂರು: ಕೋವಿಡ್ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳು ವಿಧಿಸುವ ಸೇವಾ ಶುಲ್ಕವನ್ನು ₹ 100ರಿಂದ ₹ 200ಕ್ಕೆ ಹೆಚ್ಚಿಸಿರುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಸರ್ಕಾರ ರಾಜ್ಯದ ಜನರ ಹಿತರಕ್ಷಣೆ ಮಾಡುತ್ತಿದೆಯೊ? ಅಥವಾ ಖಾಸಗಿ ಆಸ್ಪತ್ರೆಗಳ ಹಿತ ರಕ್ಷಿಸುತ್ತಿದೆಯೊ’ ಎಂದು ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಸೇವಾ ಶುಲ್ಕ ಹೆಚ್ಚಳಕ್ಕೆ ಅವಕಾಶ ಕಲ್ಪಿಸಿ ಆರೋಗ್ಯ ಇಲಾಖೆ ಗುರುವಾರ ಹೊರಡಿಸಿರುವ ಆದೇಶದ ಪ್ರತಿಯೊಂದಿಗೆ ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, ‘₹ 100 ಸೇವಾ ಶುಲ್ಕ ಇದ್ದಾಗಲೇ ಖಾಸಗಿ ಆಸ್ಪತ್ರೆಗಳು ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವ ದೂರುಗಳಿವೆ. ಈಗ ಸೇವಾ ಶುಲ್ಕವನ್ನು ದುಪ್ಪಟ್ಟುಗೊಳಿಸುವ ಮೂಲಕ ಸರ್ಕಾರವೇ ಸುಲಿಗೆಯನ್ನು ಬೆಂಬಲಿಸಿದೆ’ ಎಂದು ಆರೋಪಿಸಿದ್ದಾರೆ.


ಸಿದ್ದರಾಮಯ್ಯ

ಪತ್ನಿ ಆತ್ಮಹತ್ಯೆ; ಪತಿಯೂ ನೇಣಿಗೆ ಶರಣು


ಪುನೀತ್ ಹಾಗೂ ಹರ್ಷಿತಾ

ಬೆಂಗಳೂರು: ಪರಸ್ಪರ ಪ್ರೀತಿಸಿ ಪೋಷಕರ ವಿರೋಧ ಕಟ್ಟಿಕೊಂಡು ಮದುವೆಯಾಗಿದ್ದ ದಂಪತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ನಗರದ ಖಾಸಗಿ ಕಂಪನಿ ಉದ್ಯೋಗಿ ಪುನೀತ್ (21) ಹಾಗೂ ಅವರ ಪತ್ನಿ ಹರ್ಷಿತಾ (19) ಆತ್ಮಹತ್ಯೆ ಮಾಡಿಕೊಂಡವರು.

'ಮಾಗಡಿ ತಾಲ್ಲೂಕಿನ ಚನ್ನೇನಹಳ್ಳಿಯ ಪುನೀತ್ ಹಾಗೂ ಹರ್ಷಿತಾ, 6 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಅವರ ಮದುವೆಗೆ ಮನೆಯವರ ವಿರೋಧವಿತ್ತು. ಆರು ತಿಂಗಳ ಹಿಂದಷ್ಟೇ ಮನೆ ಬಿಟ್ಟು ಬಂದು ಅವರಿಬ್ಬರು ಮದುವೆಯಾಗಿದ್ದರು. ಹಾರೋಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಶುಕ್ರವಾರ ಬೆಳಿಗ್ಗೆ ಮನೆಯಲ್ಲೇ ಹರ್ಷಿತಾ ನೇಣು ಹಾಕಿಕೊಂಡು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದರು. ಅವರನ್ನು ಚಿಕಿತ್ಸೆಗಾಗಿ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಹರ್ಷಿತಾ ತೀರಿಕೊಂಡಿದ್ದರು. ಆ ಸುದ್ದಿ ತಿಳಿಯುತ್ತಿದ್ದಂತೆ ಮನೆಗೆ ಹೋಗಿದ್ದ ಪುನೀತ್ ಸಹ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದೂ ತಿಳಿಸಿದರು.

'ಹರ್ಷಿತಾ ಬರೆದಿದ್ದಾರೆ ಎನ್ನಲಾದ ಮರಣ ಪತ್ರ ಮನೆಯಲ್ಲಿ ಸಿಕ್ಕಿದೆ. 'ನಾವಿಬ್ಬರು (ಪುನೀತ್-ಹರ್ಷಿತಾ) ಇಷ್ಟಪಟ್ಟು ಮದುವೆಯಾಗಿದ್ದೇವೆ. ನಮ್ಮಿಬ್ಬರ ಮದುವೆಗೆ ತಂದೆ-ತಾಯಿ ಒಪ್ಪಿರಲಿಲ್ಲ. ಈಗ ಅವರಿಂದ ನಮಗೆ ತೊಂದರೆ ಆಗುತ್ತಿದೆ' ಎಂದು ಪತ್ರದಲ್ಲಿ ಬರೆಯಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದರು.

ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ • ನುಸುಳುಕೋರರ ಬಳಿ ಆಧಾರ್, ಚುನಾವಣಾ ಗುರುತಿನ ಚೀಟಿ

ಆರೋಪಿಗಳಿಗೆ ಗುಂಡೇಟು: ಸಂತ್ರಸ್ತೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ 23 ವರ್ಷದ ಯುವತಿ ಜೊತೆ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಇಬ್ಬರು ಆರೋಪಿಗಳ ಕಾಲಿಗೆ ಪೂರ್ವ ವಿಭಾಗದ ಪೊಲೀಸರು ಗುಂಡು ಹೊಡೆದಿದ್ದಾರೆ. ಕೃತ್ಯದಿಂದ ತೀವ್ರ ಗಾಯಗೊಂಡು ನಾಪತ್ತೆಯಾಗಿದ್ದ ಸಂತ್ರಸ್ತೆ ಕೇರಳದಲ್ಲಿ ಪತ್ತೆಯಾಗಿದ್ದಾರೆ.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೃತ್ಯವನ್ನು ಆರೋಪಿಗಳೇ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಯಬಿಟ್ಟಿದ್ದರು. ಅಸ್ಸಾಂ ಪೊಲೀಸರು ನೀಡಿದ್ದ ಮಾಹಿತಿ ಆಧರಿಸಿ ಆರೋಪಿಗಳಾದ ಬಾಂಗ್ಲಾದೇಶದ ಸಾಗರ್, ಮೊಹಮ್ಮದ್ ಬಾಬಾ ಶೇಕ್, ರಿದಾಯ್ ಬಾಬು ಹಾಗೂ ಹೈದರಾಬಾದ್‌ನ ಹಕೀಲ್ ಎಂಬುವರನ್ನು ಗುರುವಾರ ಬಂಧಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಪರಾಧ ಸುದ್ದಿ

'ನಾಲ್ವರು ಆರೋಪಿಗಳನ್ನು ಮಹಜರು ಪ್ರಕ್ರಿಯೆಗಾಗಿ ಕೆ. ಚನ್ನಸಂದ್ರದ ಕನಕನಗರಕ್ಕೆ ಶುಕ್ರವಾರ ಬೆಳಿಗ್ಗೆ ಕರೆದೊಯ್ಯಲಾಗಿತ್ತು. ಇದೇ ಸಂದರ್ಭದಲ್ಲಿ ಸಾಗರ್ ಹಾಗೂ ರಿದಾಯ್ ಬಾಬು, ಪೊಲೀಸರ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದರು.'

'ಗಾಳಿಯಲ್ಲಿ ಗುಂಡು ಹಾರಿಸಿದ್ದ ಪೊಲೀಸ್ ಅಧಿಕಾರಿ, ಶರಣಾಗುವಂತೆ ಸೂಚಿಸಿದ್ದರು. ಆದರೂ ಆರೋಪಿಗಳು ತಪ್ಪಿಸಿಕೊಳ್ಳಲು ಮುಂದಾಗಿದ್ದರು. ಈ ವೇಳೆ ಅಧಿಕಾರಿ ಇಬ್ಬರು ಆರೋಪಿಗಳ ಕಾಲಿಗೆ ಗುಂಡು ಹಾರಿಸಿದ್ದಾರೆ. ಗಾಯಗೊಂಡಿರುವ ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸಿಬ್ಬಂದಿಗೂ ಗಾಯವಾಗಿದ್ದು, ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದೂ ಅಧಿಕಾರಿ ತಿಳಿಸಿದರು.


ಗುಂಡೇಟಿನಿಂದ ಗಾಯಗೊಂಡಿರುವ ಆರೋಪಿಗಳು

'ಕೃತ್ಯ ನಡೆದಿದ್ದ ಮನೆಯಲ್ಲಿದ್ದ ಹಾಸಿಗೆ, ದಿಂಬು, ಮದ್ಯದ ಬಾಟಲಿ ಸೇರಿದಂತೆ ಹಲವು ವಸ್ತುಗಳನ್ನು ಪೊಲೀಸರು ಮಹಜರು ವೇಳೆ ಸಂಗ್ರಹಿಸಿದ್ದಾರೆ. ಬಾಂಗ್ಲಾದೇಶದ ಆರೋಪಿಗಳ ಬಳಿ ಆಧಾರ್, ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳೂ ಸಿಕ್ಕಿವೆ' ಎಂದೂ ತಿಳಿಸಿದರು.

ಕೇರಳದಲ್ಲಿ ಸಂತ್ರಸ್ತೆ: 'ಅತ್ಯಾಚಾರ ಎಸಗಿದ್ದ ಆರೋಪಿಗಳು ಜೀವ ಬೆದರಿಕೆ ಒಡ್ಡಿದ್ದರಿಂದ ಹೆದರಿದ ಸಂತ್ರಸ್ತೆ ಕೇರಳಕ್ಕೆ ಹೋಗಿದ್ದರು. ಸ್ನೇಹಿತರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದರು. ಸಂತ್ರಸ್ತೆಯ ಸುಳಿವರಿತು ಕೇರಳಕ್ಕೆ ಹೋಗಿದ್ದ ಪೂರ್ವ ವಿಭಾಗದ ಮಹಿಳಾ ಇನ್‌ಸ್ಪೆಕ್ಟರ್ ನೇತೃತ್ವದ ತಂಡ, ಅವರನ್ನು ಪತ್ತೆ ಮಾಡಿ ನಗರಕ್ಕೆ ಕರೆತರುತ್ತಿದೆ' ಎಂದು ಅಧಿಕಾರಿ ವಿವರಿಸಿದರು.

'ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಹೇಳಿಕೆ ಪಡೆಯಲಾಗುವುದು. ನಂತರ ಮಹಜರು ನಡೆಸಿ ಆರೋಪಿಗಳ ಗುರುತು ಪತ್ತೆಗೆ ಪರೇಡ್ ನಡೆಸಲಾಗುವುದು' ಎಂದೂ ಹೇಳಿದರು.

'ಅತ್ಯಾಚಾರಕ್ಕೆ ಮಹಿಳೆಯರಿಬ್ಬರ ನೆರವು'

'ಸಂತ್ರಸ್ತೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲು ಆರೋಪಿಗಳಿಗೆ ಸಹಕಾರ ನೀಡಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನೂ ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ಅಧಿಕಾರಿ ಮಾಹಿತಿ ನೀಡಿದರು.

'ಬಂಧಿತ ಮಹಿಳೆಯರು, ಸಂತ್ರಸ್ತೆ ಜೊತೆಯಲ್ಲಿ ಇರುತ್ತಿದ್ದರು. ಕೃತ್ಯದ ದಿನವೂ ಮಹಿಳೆಯರು ಮನೆಯಲ್ಲೇ ಇದ್ದರು. ಆರೋಪಿಗಳೊಂದಿಗೆ ಸೇರಿ ಸಂತ್ರಸ್ತೆ ಜೊತೆ ಅವರೂ ಜಗಳ ತೆಗೆದಿದ್ದರು. ಸಂತ್ರಸ್ತೆಯ ಬಟ್ಟೆ ಬಿಚ್ಚಿದ್ದ ಬಂಧಿತ ಮಹಿಳೆ, ಹೊಟ್ಟೆ ಮೇಲೆ ಕುಳಿತು ಕೈಗಳನ್ನು ಅದುಮಿ ಹಿಡಿದಿದ್ದಳು. ಉಳಿದ ಆರೋಪಿಗಳು ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳು ತುರುಕಿ ಮೃಗೀಯವಾಗಿ ವರ್ತಿಸಿದ್ದರು. ಇವೆಲ್ಲವೂ ವಿಡಿಯೊದಲ್ಲಿ ಸೆರೆಯಾಗಿತ್ತು' ಎಂದೂ ಅಧಿಕಾರಿ ವಿವರಿಸಿದರು.

ಎಚ್.ಎಸ್.ದೊರೆಸ್ವಾಮಿ ಅವರಿಗೆ ನುಡಿನಮನ

'ನಾಗರಿಕತೆ ಮೇಲೆ ದಾಳಿ ನಡೆದಾಗ ಸಿಡಿದೇಳುತ್ತಿದ್ದರು'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರು ಈ ನಾಡು ಕಂಡ ಮಹಾನ್ ಚೇತನ. ನಾಗರಿಕತೆ ಹಾಗೂ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆದಾಗ ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿದ್ದರು. ಯಾರಿಗೆ ಏನೇ ಸಮಸ್ಯೆಯಾದರೂ ಅವರ ಪರ ಧ್ವನಿ ಎತ್ತುತ್ತಿದ್ದರು. ಅವರಂತಹ ವ್ಯಕ್ತಿ ಮತ್ತೆ ಹುಟ್ಟಿಬರುವುದು ಕಷ್ಟ' ಎಂದು ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ತಿಳಿಸಿದರು.

'ಸಂಯುಕ್ತ ಹೋರಾಟ–ಕರ್ನಾಟಕ' ಆನ್‌ಲೈನ್ ಮೂಲಕ ಶುಕ್ರವಾರ ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಯೋಗೇಂದ್ರ ಯಾದವ್, 'ದೊರೆಸ್ವಾಮಿ ಅವರನ್ನು ಜೀವನದಲ್ಲಿ ಒಮ್ಮೆ ಭೇಟಿ ಮಾಡುವುದೇ ಅದೃಷ್ಟ. ಅವರನ್ನು ಐದಾರು ಬಾರಿ ಭೇಟಿಯಾಗಿರುವ ನಾನು ನಿಜಕ್ಕೂ ಭಾಗ್ಯವಂತ. ಅವರು ನನ್ನ ಹೆಗಲ ಮೇಲೆ ಕೈಯಿಟ್ಟು ಮಾತನಾಡುತ್ತಿದ್ದಾಗ ಒಂದು ಬಗೆಯ ಪುಳಕ ಉಂಟಾಗುತ್ತಿತ್ತು. ಅವರ ಹೋರಾಟ ಬ್ರಿಟಿಷರ ವಿರುದ್ಧವಷ್ಟೇ ಸೀಮಿತವಾಗಿರಲಿಲ್ಲ. ಇಳಿ ವಯಸ್ಸಿನಲ್ಲೂ ಅವರು ಭ್ರಷ್ಟ ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಿದ್ದರು. ಅವರಿಗೆ ಅಗಾಧವಾದ ನೆನಪಿನ ಶಕ್ತಿ ಇತ್ತು. ಸಣ್ಣ ಸಣ್ಣ ಘಟನೆಗಳನ್ನೂ ನೆನಪು ಮಾಡಿಕೊಂಡು ನಮ್ಮ ಜೊತೆ ಹಂಚಿಕೊಳ್ಳುತ್ತಿದ್ದರು' ಎಂದು ಅವರು ಸ್ಮರಿಸಿದರು.


ಯೋಗೇಂದ್ರ ಯಾದವ್


ಪ್ರಶಾಂತ್ ಭೂಷಣ್


ಪ್ರಸನ್ನ

ಹಿರಿಯ ರಂಗಕರ್ಮಿ ಪ್ರಸನ್ನ, 'ದೊರೆಸ್ವಾಮಿ ಅವರು ಒಂಚೂರು ಅಹಂಕಾರವಿಲ್ಲದೆ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುವ ಗುಣ ಅವರಲ್ಲಿತ್ತು. ವಯಸ್ಸಿನಲ್ಲಿ ತಮಗಿಂತ ಕಿರಿಯರನ್ನೂ ಸ್ನೇಹಿತರಂತೆ ಕಾಣುತ್ತಿದ್ದರು. ಅವರಿಗೆ ಮನುಕುಲದ ಶತ್ರು ಯಾರು ಎಂಬುದು ಚೆನ್ನಾಗಿ ಗೊತ್ತಿತ್ತು. ಅತಿಯಾದ ಮಡಿವಂತಿಕೆ ಇರಲಿಲ್ಲ' ಎಂದು ಹೇಳಿದರು.

ಹಿರಿಯ ಕಮ್ಯುನಿಸ್ಟ್ ಮುಖಂಡ ಎಚ್.ವಿ.ಅನಂತ ಸುಬ್ಬರಾವ್, 'ದೊರೆಸ್ವಾಮಿ ಮತ್ತಷ್ಟು ಕಾಲ ನಮ್ಮ ಜೊತೆ ಇರಬೇಕಿತ್ತು. ಅವರು ಹೋರಾಟ ಜೀವಿಯಾಗಿಯೇ ಇಡೀ ಬದುಕು ಕಳೆದರು. ಹೋರಾಟಗಾರರ ಪಾಲಿನ ಮಹಾನ್ ಶಕ್ತಿ ಹಾಗೂ ಸ್ಫೂರ್ತಿಯಾಗಿದ್ದರು' ಎಂದು ಹೇಳಿದರು.

ಹೋರಾಟಗಾರ ಎಸ್.ಆರ್. ಹಿರೇಮಠ, 'ದೊರೆಸ್ವಾಮಿ ಅವರ ಜೊತೆ ಹಲವಾರು ಹೋರಾಟಗಳಲ್ಲಿ ಜೊತೆಯಾಗಿದ್ದು ನನ್ನ ಸೌಭಾಗ್ಯ. ಅವರ ಹೋರಾಟದ ಹಾದಿ ನಮಗೆ ದಾರಿದೀಪವಾಗಲಿ' ಎಂದರು.

ಹೋರಾಟಗಾರರಾದ ಜಿ.ಸಿ. ಬಯ್ಯಾರೆಡ್ಡಿ, ಸಿರಿಮನೆ ನಾಗರಾಜ್, ಬಡಗಲಪುರ ನಾಗೇಂದ್ರ ಇದ್ದರು.

ಎಸ್‌ಆರ್‌ಎಂ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟ

ಬೆಂಗಳೂರು: ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಆಯೋಜಿಸಿದ್ದ ಮೊದಲನೇ ಹಂತದ ಜಾಯಿಂಟ್ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ ಫಲಿತಾಂಶ ಗುರುವಾರ ಪ್ರಕಟವಾಗಿದೆ.

ಇದೇ ತಿಂಗಳ 23 ಮತ್ತು 24ರಂದು ಮೂರು ಹಂತಗಳಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು. ಮೊದಲ ಹಂತದ ಕೌನ್ಸೆಲಿಂಗ್ ಶೀಘ್ರವೇ ಆರಂಭವಾಗಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಎಸ್‌ಆರ್‌ಎಂ ಸಂಸ್ಥೆಯ ಎರಡನೇ ಹಂತದ ಜಾಯಿಂಟ್ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯು ಜುಲೈ 25 ಮತ್ತು 26ರಂದು ನಿಗದಿಯಾಗಿದೆ. ಜುಲೈ 20ರವರೆಗೂ ಅರ್ಜಿಗಳು ಲಭ್ಯವಿರಲಿವೆ. ಈ ಪರೀಕ್ಷೆಯ ಫಲಿತಾಂಶವನ್ನು ಅದೇ ತಿಂಗಳ 29ರಂದು ಪ್ರಕಟಿಸಲಾಗುತ್ತದೆ.

ಈ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆಯುವ ರ‍್ಯಾಂಕ್‌ಗಳ ಆಧಾರದಲ್ಲಿ ಅವರಿಗೆ ಎಸ್‌ಆರ್‌ಎಂ ಐಎಸ್‌ಟಿ ಚೆನ್ನೈ, ಎಸ್‌ಆರ್‌ಎಂ ವಿಶ್ವವಿದ್ಯಾಲಯ ಸೋನೆಪತ್, ಹರಿಯಾಣ ಹಾಗೂ ಎಸ್‌ಆರ್‌ಎಂ ವಿಶ್ವವಿದ್ಯಾಲಯ ಆಂಧ್ರಪ್ರದೇಶದಲ್ಲಿ ಬಿ.ಟೆಕ್ ಪ್ರವೇಶ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ SRMIST.edu.in ಗೆ ಭೇಟಿ ನೀಡಿ.

ಸಂಕ್ಷಿಪ್ತ ಸುದ್ದಿ

ಮದ್ಯದಂಗಡಿಯಲ್ಲಿ ನಗದು ಕಳವು: ಬಂಧನ

ಬೆಂಗಳೂರು: ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯ ಮದ್ಯದಂಗಡಿಯಲ್ಲಿ ₹ 90 ಸಾವಿರ ಕದ್ದಿದ್ದ ಆರೋಪಿ ಹರೀಶ್ ಅಲಿಯಾಸ್ ರವಿಯಪ್ಪ (45) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.


ಹರೀಶ್

'ಬನಶಂಕರಿ 3ನೇ ಹಂತದ ಇಟ್ಟಮಡು ನಿವಾಸಿ ಹರೀಶ್, ಮೇ 25ರಂದು ರಾತ್ರಿ ಕೃತ್ಯ ಎಸಗಿ ಪರಾರಿಯಾಗಿದ್ದ. ಕದ್ದ ಹಣದಲ್ಲಿ ₹ 380 ಖರ್ಚು ಮಾಡಿದ್ದ. ಆತನ ಬಳಿ ಉಳಿದಿದ್ದ ₹ 89,620 ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ವೆಲ್ಡಿಂಗ್ ಸಾಧನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಇಟ್ಟುಮಡು ಮುಖ್ಯರಸ್ತೆಯಲ್ಲಿ 'ಮಂಜುನಾಥ್ ಮದ್ಯದ ಅಂಗಡಿ' ಇದೆ. ಅದೇ ಅಂಗಡಿಯ ಹಿಂಬದಿ ಕಿಟಕಿ ಸರಳನ್ನು ವೆಲ್ಡಿಂಗ್ ಸಾಧನದಿಂದ ಕತ್ತರಿಸಿ ಆರೋಪಿ ಒಳಗೆ ನುಗ್ಗಿದ್ದ. ಪೆಟ್ಟಿಗೆಯಲ್ಲಿದ್ದ ಹಣವನ್ನು ಕದ್ದು ಪರಾರಿಯಾಗಿದ್ದ.'

'ಕಿಟಕಿ ಸರಳು ಮುರಿದಿದ್ದನ್ನು ನೋಡಿದ್ದ ಪಕ್ಕದ ಮನೆಯವರು ಮದ್ಯದಂಗಡಿ ಮಾಲೀಕರಿಗೆ ವಿಷಯ ತಿಳಿಸಿದ್ದರು. ಅಂಗಡಿಗೆ ಬಂದು ನೋಡಿದಾಗ ಹಣ ಕಳವಾಗಿದ್ದು ಗೊತ್ತಾಗಿತ್ತು. ಮಾಲೀಕ ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

ಆಸ್ಪತ್ರೆ ಸಿಬ್ಬಂದಿ ಮೇಲೆ ಹಲ್ಲೆ: ಪ್ರಕರಣ ದಾಖಲು

ನೆಲಮಂಗಲ: ಪಟ್ಟಣದ ಕೇರ್ ಏಷ್ಯಾ ಆಸ್ಪತ್ರೆಯಲ್ಲಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಶ್ರೀನಿವಾಸ್ ಅವರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಕಾಲಿನ ಶಸ್ತ್ರಚಿಕಿತ್ಸೆಗಾಗಿ ರವಿಕುಮಾರ್ ಎಂಬುವವರು ಬುಧವಾರ ಆಸ್ಪತ್ರೆಗೆ ದಾಖಲಾಗಿದ್ದರು. ಅದೇ ದಿನ ರಾತ್ರಿ ಅವರ ಕಡೆಯವರು ಭದ್ರತಾ ಸಿಬ್ಬಂದಿಯ ಅನುಮತಿ ಪಡೆಯದೆ ಕೋವಿಡ್ ಚಿಕಿತ್ಸೆ ನೀಡುತ್ತಿರುವ ಕೊಠಡಿಗೆ ಏಕಾಏಕಿ ನುಗ್ಗಿದ್ದಾರೆ. ಅದನ್ನು ಪ್ರಶ್ನಿಸಿದ ಸಿಬ್ಬಂದಿ ಅರುಣ ಕುಮಾರಿ ಅವರನ್ನು ಎಳೆದಾಡಿದ್ದು, ತಡೆಯಲು ಹೋದ ಇತರೆ ಸಿಬ್ಬಂದಿ ಮೇಲೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾರೆ. ಲ್ಯಾಬ್‌ನ ಗ್ಲಾಸನ್ನು ಒಡೆದುಹಾಕಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ರೌಡಿ ಗನ್ ಮಂಜು ಸೆರೆ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ನಿರಂತರವಾಗಿ ಭಾಗಿಯಾಗಿ ಸಾರ್ವಜನಿಕರನ್ನು ಬೆದರಿಸಿ, ಭಯವನ್ನುಂಟು ಮಾಡುತ್ತಿದ್ದ ಆರೋಪದಡಿ ರೌಡಿ ಚಂದ್ರಶೇಖರ್ ಅಲಿಯಾಸ್ ಗನ್ ಮಂಜುನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ.

'ಯಶವಂತಪುರ ಠಾಣೆ ರೌಡಿ ಪಟ್ಟಿಯಲ್ಲಿ ಗನ್ ಮಂಜು ಹೆಸರಿತ್ತು. ಕೊಲೆ, ಕೊಲೆ ಯತ್ನ, ಸುಲಿಗೆ, ಕಿರುಕುಳ, ಬೆದರಿಕೆ ಸೇರಿದಂತೆ 13 ಪ್ರಕರಣಗಳು ಆತನ ವಿರುದ್ಧ ದಾಖಲಾಗಿದ್ದವು. ಹಲವು ಬಾರಿ ಜೈಲಿಗೆ ಹೋಗಿ ಬಂದಿದ್ದ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ತಿಳಿಸಿದರು.

'ಜೈಲಿನಿಂದ ಜಾಮೀನು ಮೇಲೆ ಹೊರಗೆ ಬಂದಿದ್ದ ರೌಡಿ, ನ್ಯಾಯಾಲಯದ ವಿಚಾರಣೆಗೂ ಹಾಜರಾಗುತ್ತಿರಲಿಲ್ಲ. ತಲೆಮರೆಸಿಕೊಂಡು ಅಪರಾಧ ಎಸಗುತ್ತಿದ್ದ. ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆತನನ್ನು ಜೈಲಿಗಟ್ಟಲಾಗಿದೆ' ಎಂದೂ ಅವರು ಹೇಳಿದರು.

ಪಾದಚಾರಿ ಮಾರ್ಗದಲ್ಲಿ ಮೃತದೇಹ: ಆಂಬುಲೆನ್ಸ್ ಚಾಲಕ ಬಂಧನ

ಬೆಂಗಳೂರು: ಕೇಳಿದಷ್ಟು ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಕೋವಿಡ್ ರೋಗಿಯ ಮೃತದೇಹವನ್ನು ಪಾದಚಾರಿ ಮಾರ್ಗದಲ್ಲಿ ಇರಿಸಿಹೋಗಿದ್ದ ಆರೋಪದಡಿ ಆಂಬುಲೆನ್ಸ್ ಚಾಲಕ ಶರತ್ ಗೌಡ ಎಂಬಾತನನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಹೆಬ್ಬಾಳ ಚಿತಾಗಾರದ ನಿರ್ವಹಣೆ ಅಧಿಕಾರಿ ಸತೀಶ್ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆಂಬುಲೆನ್ಸ್‌ನಲ್ಲಿದ್ದ ಇನ್ನೊಬ್ಬ ಆರೋಪಿ ನಾಗೇಶ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಅನುಜ್ ಸಿಂಗ್ ಎಂಬುವರು ಕೊರೊನಾ ಸೋಂಕಿನಿಂದಾಗಿ ಜಯದೇವ ಆಸ್ಪತ್ರೆಯಲ್ಲಿ ಮೇ 24ರಂದು ಮೃತಪಟ್ಟಿದ್ದರು. ಮೃತದೇಹವನ್ನು ಹೆಬ್ಬಾಳದ ಚಿತಾಗಾರಕ್ಕೆ ಸಾಗಿಸಲು ಕುಟುಂಬಸ್ಥರು ಮುಂದಾಗಿದ್ದರು. ₹ 18 ಸಾವಿರ ಕೊಟ್ಟರೆ ಮೃತದೇಹವನ್ನು ಚಿತಾಗಾರಕ್ಕೆ ತೆಗೆದುಕೊಂಡು ಹೋಗುವುದಾಗಿ ಚಾಲಕ ಶರತ್ ಗೌಡ ಹೇಳಿದ್ದ.'

'₹18 ಸಾವಿರ ಇಲ್ಲವೆಂದು ಹೇಳಿದ್ದ ಮೃತನ ಪತ್ನಿ, ₹ 3 ಸಾವಿರ ಹೊಂದಿಸಿ ಚಾಲಕನಿಗೆ ಕೊಟ್ಟಿದ್ದರು. ಮೃತದೇಹವನ್ನು ಹೆಬ್ಬಾಳ ಚಿತಾಗಾರ ಬಳಿ ತಂದಿದ್ದ ಆರೋಪಿ, ಉಳಿದ ಹಣ ಕೇಳಿದ್ದ. ಹಣವಿಲ್ಲವೆಂದು ಮೃತನ ಪತ್ನಿ ಹೇಳುತ್ತಿದ್ದಂತೆ, ಮೃತದೇಹವನ್ನು ಪಾದಚಾರಿ ಮಾರ್ಗದಲ್ಲೇ ಇಳಿಸಿ ಹೋಗಿದ್ದ' ಎಂದೂ ಪೊಲೀಸರು ತಿಳಿಸಿದರು.

ಡ್ರೀಮ್ಸ್ ಇನ್ಫ್ರಾ ಕಂಪನಿ ವಿರುದ್ಧ ಕ್ರಮ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆ ಅಡಿಯಲ್ಲಿ ಡ್ರೀಮ್ಸ್ ಇನ್ಫ್ರಾ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವಿರುದ್ಧ ಕೈಗೊಂಡಿದ್ದ ಕ್ರಮವನ್ನು ಹೈಕೋರ್ಟ್ ರದ್ದುಪಡಿಸಿದೆ. ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿಯು (ಎನ್‌ಸಿಎಲ್‌ಟಿ) ಈ ಕಂಪನಿಯ ಎಲ್ಲ ಸ್ವತ್ತುಗಳನ್ನು ವಶಕ್ಕೆ ಪಡೆದಿರುವುದನ್ನು ಗಮನಿಸಿದ ಪೀಠ, ಈ ಆದೇಶವನ್ನು ಹೊರಡಿಸಿತು.

3,668 ಠೇವಣಿದಾರರಿಗೆ ₹386 ಕೋಟಿ ವಾಪಸ್ ಕೊಡಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಕೆಪಿಐಡಿ ಕಾಯ್ದೆಯಡಿ ಪ್ರಾಧಿಕಾರವೊಂದನ್ನು ರಚಿಸಿತ್ತು. ಕಂಪನಿಯಿಂದ ಮನೆಗಳನ್ನು ಖರೀದಿಸಲು ಕಂಪನಿಗೆ ಮುಂಗಡ ಹಣವನ್ನು ಅಷ್ಟೂ ಮಂದಿ ಪಾವತಿಸಿದ್ದರು. ಮನೆಗಳನ್ನು ವಿತರಿಸದಿದ್ದರಿಂದ ಹೂಡಿಕೆದಾರರು ಆತಂಕ ವ್ಯಕ್ತಪಡಿಸಿದ ಕಾರಣ ಈ ಸಮಸ್ಯೆ ಉದ್ಭವಿಸಿತು. ಒಪ್ಪಂದದ ಪ್ರಕಾರ ಮನೆಗಳನ್ನು ವಿತರಿಸಬೇಕು ಎಂದು ಠೇವಣಿದಾರರು ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಿದ್ದರು.



ಕಂಪನಿಯ ಆಸ್ತಿ ಮುಟ್ಟುಗೋಲು ಆದೇಶ ಹೊರಡಿಸಿದ್ದ ಪ್ರಾಧಿಕಾರ, ಸ್ವತ್ತಿನ ಮೌಲ್ಯಮಾಪನ ಮತ್ತು ಠೇವಣಿ ಹೊಣೆಗಾರಿಕೆ ನಿಗದಿ ಮಾಡಲು ವಿಶೇಷ ನ್ಯಾಯಾಲಯವನ್ನು ಸಂಪರ್ಕಿಸಿತ್ತು. ಈ ಕ್ರಮ ಪ್ರಶ್ನಿಸಿ ಕಂಪನಿಯು ಹೈಕೋರ್ಟ್ ಮೆಟ್ಟಿಲೇರಿತ್ತು.

'ಕಂಪನಿ ದಿವಾಳಿಯಾಗಿದೆ ಎಂದು ಘೋಷಿಸಲು ಕೋರಿ ಮೂವರು ಖರೀದಿದಾರರು ಎನ್‌ಸಿಎಲ್‌ಟಿ ಮೊರೆ ಹೋಗಿದ್ದಾರೆ. ಅಶೋಕ್ ಕೃಪಲಾನಿ ಎಂಬುವರನ್ನು ಮಧ್ಯಂತರ ರೆಸಲ್ಯೂಷನಲ್ ಪ್ರೊಫೆಷನಲ್ (ಐಆರ್‌ಪಿ) ಆಗಿ 2019ರ ಆಗಸ್ಟ್‌ನಲ್ಲಿ ಎನ್‌ಟಿಸಿಎಲ್ ನೇಮಿಸಿದೆ. ಕಂಪನಿಗೆ ಸಂಬಂಧಿಸಿದ ಎಲ್ಲ ಸ್ವತ್ತುಗಳನ್ನು ಐಆರ್‌ಪಿ ವಶಕ್ಕೆ ಪಡೆದುಕೊಂಡಿದೆ' ಎಂದು ಕಂಪನಿ ತಿಳಿಸಿದೆ.

'ಕೇಂದ್ರ ಸರ್ಕಾರದ ದಿವಾಳಿ ಸಂಹಿತೆ ಕಾಯ್ದೆ ಅಡಿಯಲ್ಲಿ ಎನ್‌ಸಿಎಲ್‌ಟಿ ಸ್ವತ್ತುಗಳನ್ನು ವಶಕ್ಕೆ ಪಡೆದಿರುವ ಕಾರಣ ರಾಜ್ಯದ ಕೆಪಿಐಡಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌರತ್ವ: ಮುಸ್ಲಿಮೇತರ ನಿರಾಶ್ರಿತರಿಂದ ಅರ್ಜಿ ಆಹ್ವಾನ

ನವದೆಹಲಿ (ಪಿಟಿಐ): ಅಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನದಿಂದ ಬಂದು ಗುಜರಾತ್, ರಾಜಸ್ಥಾನ, ಛತ್ತೀಸಗಡ, ಹರಿಯಾಣ ಮತ್ತು ಪಂಜಾಬ್‌ನ 13 ಜಿಲ್ಲೆಗಳಲ್ಲಿ ನೆಲೆಸಿರುವ ಹಿಂದೂ, ಸಿಖ್, ಜೈನ, ಬೌದ್ಧ ಧರ್ಮೀಯರು ಸೇರಿದಂತೆ ಮುಸ್ಲಿಮೇತರರಿಂದ ಭಾರತದ ಪೌರತ್ವಕ್ಕಾಗಿ ಕೇಂದ್ರ ಸರ್ಕಾರವು ಶುಕ್ರವಾರ ಅರ್ಜಿ ಆಹ್ವಾನಿಸಿದೆ.

1955ರ ಪೌರತ್ವ ಕಾಯ್ದೆ ಮತ್ತು 2009ರ ಕಾನೂನಿನಡಿಯಲ್ಲಿ ರೂಪಿಸಲಾದ ನಿಯಮಗಳನ್ನು ತಕ್ಷಣ ಜಾರಿಗೆ ತರಲು ಕೇಂದ್ರ ಗೃಹ ಸಚಿವಾಲಯವು ಈ ಅಧಿಸೂಚನೆಯನ್ನು ಹೊರಡಿಸಿದೆ. 2019ರ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ ಸರ್ಕಾರ ಇನ್ನೂ ನಿಯಮಗಳನ್ನು ರೂಪಿಸಿಲ್ಲ.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು 2019ರಲ್ಲಿ ಜಾರಿಗೆ ತಂದಾಗ ಇದನ್ನು ವಿರೋಧಿಸಿ ದೇಶದಾದ್ಯಂತ ಭಾರಿ ಪ್ರತಿಭಟನೆಗಳು ನಡೆದಿದ್ದವು.

ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದಲ್ಲಿ ಕಿರುಕುಳಕ್ಕೊಳಗಾಗಿ 2014 ರ ಡಿಸೆಂಬರ್ 31 ರವರೆಗೆ ಭಾರತಕ್ಕೆ ಬಂದ ಅಲ್ಪಸಂಖ್ಯಾತ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತರಿಗೆ ಭಾರತದ ಪೌರತ್ವ ನೀಡುವುದು ಸಿಎಎ ಉದ್ದೇಶವಾಗಿದೆ.

ನಿಧನ ವಾರ್ತೆ

ಕೆ.ಟಿ. ಗಂಗಯ್ಯ



ಬೆಂಗಳೂರು: ನಿವೃತ್ತ ಪ್ರಾಂಶುಪಾಲ ಕೆ.ಟಿ. ಗಂಗಯ್ಯ (85) ಅನಾರೋಗ್ಯ ದಿಂದಾಗಿ ಗುರುವಾರ ನಿಧನ ಹೊಂದಿದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ನಟರೂ ಆಗಿರುವ ಪುತ್ರ ಕಿಶೋರ್ ಇದ್ದಾರೆ. ನಿವೃತ್ತಿ ಬಳಿಕ ಗಂಗಯ್ಯ ಕುಟುಂಬ ಜೆ.ಪಿ.ನಗರದಲ್ಲಿ ನೆಲೆಸಿತ್ತು.

ಸ್ವಂತ ಊರಾದ ಕುಣಿಗಲ್ ತಾಲ್ಲೂಕಿನ ಕತ್ತರಿಘಟ್ಟ ಗ್ರಾಮದ ಶಂಭಯ್ಯನಪಾಳ್ಯದಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಡಾ. ರುದ್ರಮ್ಮ



ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಡಾ. ಎಚ್. ಎಂ. ರುದ್ರಮ್ಮ (90) ಅವರು ಗುರುವಾರ ರಾತ್ರಿ ನಿಧನರಾದರು.

ಅವರಿಗೆ ಪುತ್ರ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.

ಚಿತ್ರಾವಳಿ



ಹೆಸರಘಟ್ಟ ಗ್ರಾಮದ ರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆ, ಇಸ್ಕಾನ್ ಸಂಸ್ಥೆ ಸಹಯೋಗದಲ್ಲಿ ಎಸ್‌ಎನ್‌ಎಲ್‌ಚಲನಚಿತ್ರದ ಮಂದಿರದ ಮಾಲೀಕ ಮನೋಜ್ ಅವರು ದಿನಗೂಲಿ ಕಾರ್ಮಿಕರು, ನಿರ್ಗತಿಕರಿಗೆ ಆಹಾರದ ಪೊಟ್ಟಣಗಳನ್ನು ವಿತರಿಸಿದರು. ಸ್ವಯಂಸೇವಕರಾದ ಬಿಳಿಜಾಜಿ ಗೋವಿಂದ ರಾಜು, ಆನಂದ್ ಇದ್ದರು.



ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆಯ ಕೋವಿಡ್ ಸಹಾಯವಾಣಿ ಕೇಂದ್ರದಲ್ಲಿ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ ನೇತೃತ್ವದಲ್ಲಿ ಮಂಗಳವಾದ್ಯ ಕಲಾವಿದರಿಗೆ ಆಹಾರ ಕಿಟ್ ಕೊಡುವ ಕೆಲಸಕ್ಕೆ ಮಾಜಿ ಶಾಸಕ ಎಸ್.ಮುನಿರಾಜು ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ಟಿ.ಶಿವಕುಮಾರ್, ವಿನೋದ್ ಗೌಡ, ಭರತ್ ಸೌಂದರ್ಯ ಇದ್ದರು.

ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸ್ಪಷ್ಟನೆ ● ಸಚಿವ ಸಿ.ಪಿ. ಯೋಗೇಶ್ವರ್ ಹೇಳಿಕೆಗೆ ಆಕ್ಷೇಪ

‘ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನಾಯಕತ್ವದ ಬದಲಾವಣೆ ಪ್ರಶ್ನೆಯೇ ಇಲ್ಲ. ಬಿ.ಎಸ್. ಯಡಿಯೂರಪ್ಪ ಅವರು ಪೂರ್ಣಾವಧಿ ಪೂರೈಸಲಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ನೀಡಿರುವ ಹೇಳಿಕೆಗಳ ಕುರಿತು ವಿವರಣೆ ಪಡೆಯುವುದಾಗಿ ಹೇಳಿದ್ದಾರೆ.



ನಳಿನ್ ಕುಮಾರ್ ಕಟೀಲ್

ಯಶವಂತಪುರದ ವಿಧಾನ ಸಭಾ ಕ್ಷೇತ್ರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ₹1 ಲಕ್ಷ ಸಹಾಯಧನ ವಿತರಿಸುವ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜಕಾರಣದ ಬಗ್ಗೆ ಅನಗತ್ಯ ಮಾತುಗಳನ್ನು ಬಿಟ್ಟು ಕೋವಿಡ್ ಕೆಲಸದಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕು ಎಂದು ಸೂಚನೆ ನೀಡಿದ್ದೇನೆ.

‘ನಾಯಕತ್ವ ಬದಲಾವಣೆ ಬಗ್ಗೆ ಯಡಿಯೂರಪ್ಪ ಮುಖ್ಯಮಂತ್ರಿ ಆದ ದಿನದಿಂದಲೇ ಚರ್ಚೆ ನಡೆಯುತ್ತಲೇ ಬಂದಿದೆ. ಕೆಲವರು ಗೊಂದಲ ಮೂಡಿಸುವ ಯತ್ನ ನಡೆಸಿದ್ದಾರೆ. ಯಡಿಯೂರಪ್ಪ ಅವರೇ ನಮ್ಮ ನಾಯಕರು’ ಎಂದರು.


‘ಶಾಸಕಾಂಗ ಪಕ್ಷದ ಸಭೆಯನ್ನು ಸದ್ಯ ಕರೆಯುವ ಅಗತ್ಯವಿಲ್ಲ. ಕೋವಿಡ್ ಸಂಕಷ್ಟ ಮುಗಿಯುವವರೆಗೆ ಯಾವುದೇ ಸಭೆ ನಡೆಸುವ ಪ್ರಸ್ತಾಪವಿಲ್ಲ. ಯಡಿಯೂರಪ್ಪ ಅವರು ದಿನದ 24 ಗಂಟೆಗಳೂ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಬಡ ಜನರ ಸಂಕಷ್ಟಕ್ಕೆ ಮಿಡಿದು ವಿಶೇಷ ಆರ್ಥಿಕ ಪ್ಯಾಕೇಜ್ ನೀಡಿದ್ದಾರೆ’ ಎಂದು ಕಟೀಲ್ ಮೆಚ್ಚುಗೆ ವ್ಯಕ್ತಪಡಿಸಿದರು.

‘ಸಚಿವ ಸಿ.ಪಿ.ಯೋಗೇಶ್ವರ್ ಅವರು ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ರಾಜ್ಯದಲ್ಲಿ ಅಪ್ಪಟ ಬಿಜೆಪಿ ಸರ್ಕಾರವಿಲ್ಲ, ಮೂರು ಪಕ್ಷಗಳ ಹೊಂದಾಣಿಕೆ ಸರ್ಕಾರ ಇದೆ. ಮುಖ್ಯಮಂತ್ರಿ ಪುತ್ರ ವಿಜಯೇಂದ್ರ ಅವರಿಂದ ಅಧಿಕಾರ ಹಸ್ತಕ್ಷೇಪ ಆಗಿದೆ ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಅವರಿಂದ ತಕ್ಷಣವೇ ವಿವರಣೆ ಪಡೆಯುತ್ತೇನೆ’ ಎಂದು ಕಟೀಲ್ ತಿಳಿಸಿದರು.

ಸಿದ್ಧಗಂಗಾ ಸ್ವಾಮೀಜಿ ಜತೆ ಮುಖ್ಯಮಂತ್ರಿ ಚರ್ಚೆ

ತುಮಕೂರು: ಮುಖ್ಯಮಂತ್ರಿ ಬದಲಾವಣೆಗೆ ಬಿಜೆಪಿ ವಲಯದಲ್ಲೇ ಒತ್ತಡ ಹೆಚ್ಚುತ್ತಿರುವ ಸಮಯದಲ್ಲೇ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಅವರನ್ನು ಶುಕ್ರವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭೇಟಿಯಾಗಿ ಗೌಪ್ಯ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣ ಸಂಬಂಧ ಪ್ರಗತಿ ಪರಿಶೀಲನೆ ನಡೆಸಿದ ನಂತರ ಸ್ವಾಮೀಜಿ ಅವರ ಭೇಟಿಗೆ ಮಠಕ್ಕೆ ತೆರಳಿದರು. ತೆರಳುವ ಮುನ್ನ ಜತೆಯಲ್ಲಿ ಇದ್ದ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರನ್ನೂ ಕರೆದುಕೊಂಡು ಹೋಗಲಿಲ್ಲ. ಸ್ವಾಮೀಜಿ ಜೊತೆ ಸುಮಾರು 20 ನಿಮಿಷ ಚರ್ಚೆ ನಡೆಯಿತು.



ಬಿ.ಎಸ್. ಯಡಿಯೂರಪ್ಪ

ನಿಗದಿಯಂತೆ ಜಿಲ್ಲಾ ಪಂಚಾಯಿತಿಯಲ್ಲಿ ಪ್ರಗತಿ ಪರಿಶೀಲನೆ ಸಭೆ ಬಳಿಕ ಮಠಕ್ಕೆ ಭೇಟಿ ನೀಡಬೇಕಿತ್ತು. ಸಭೆ ನಡೆಯುವಾಗಲೇ ಮುಖ್ಯಮಂತ್ರಿ ಮಠಕ್ಕೆ ಹೋಗುವುದಿಲ್ಲ, ನೇರ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಮಾಧ್ಯಮದವರಿಗೆ ತಿಳಿಸಲಾಗಿತ್ತು.

ಮಾಧ್ಯಮದವರು ಮಠದ ಬಳಿ ಬರುವುದನ್ನು ತಪ್ಪಿಸಿ ಯಡಿಯೂರಪ್ಪ ಅವರೊಬ್ಬರೇ ಸ್ವಾಮೀಜಿಯನ್ನು ಭೇಟಿಯಾಗಿರುವುದು ಕುತೂಹಲ ಮೂಡಿಸಿದೆ. ಭೇಟಿಯ ಬಳಿಕ ಬೆಂಗಳೂರಿಗೆ ಹಿಂದಿರುಗಿದರು.

ರಾಜಕೀಯ ಕಾರಣಕ್ಕಾಗಿ ಆರೋಪ: ವಿಜಯೇಂದ್ರ

ಬೆಂಗಳೂರು: ‘ರಾಜಕೀಯ ಕಾರಣಗಳಿಗಾಗಿ ಕೆಲವರು ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಪಕ್ಷದ ಉಪಾಧ್ಯಕ್ಷನಾಗಿ ನನ್ನ ಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ’ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

ಯೋಗೇಶ್ವರ್ ಪರೋಕ್ಷ ಟೀಕೆಗೆ ಉತ್ತರಿಸುತ್ತಾ, ‘ನನ್ನ ವಿರುದ್ಧ ಮಾತನಾಡುವುದೇ ಕೆಲವರಿಗೆ ಚಟವಾಗಿದೆ ಎಂದು ಸಚಿವ ಅಶೋಕ ಹೇಳಿದ್ದಾರೆ. ನನ್ನ ಬಗ್ಗೆ ಕೆಲವರಿಗೆ ಪ್ರೀತಿ. ಅದಕ್ಕೆ ಮಾತನಾಡುತ್ತಾರೆ’ ಎಂದರು.



ವಿಜಯೇಂದ್ರ

‘ಯಡಿಯೂರಪ್ಪ ಅವರು 40 ವರ್ಷದ ಸುದೀರ್ಘ ಹೋರಾಟದಿಂದ ಮುಖ್ಯಮಂತ್ರಿ ಆದವರು. ಅವರ ಅನುಭವದ ಮುಂದೆ ನಮ್ಮದೇನೂ ಇಲ್ಲ. ಅವರು ಸಿ.ಎಂ ಆಗಲು ಕಾರ್ಯಕರ್ತರ ಶ್ರಮವೂ ಅಪಾರ’ ಎಂದು ಹೇಳಿದರು.

‘ಲೂಟಿ ಹೊಡೆಯುವ ಖಾತೆಗಾಗಿ ಬಿಜೆಪಿಯಲ್ಲಿ ಕಿತ್ತಾಟ: ಸಿದ್ದರಾಮಯ್ಯ

ಹುಬ್ಬಳ್ಳಿ: ‘ಲೂಟಿ ಮಾಡುವ ಖಾತೆ ಸಿಗಲಿಲ್ಲ ಎಂದು ಮುಖ್ಯಮಂತ್ರಿ ಬದಲಾವಣೆಗೆ ಸಚಿವ ಸಿ.ಪಿ. ಯೋಗೇಶ್ವರ್ ಮುಂದಾಗಿದ್ದಾರೆ ಎಂದು ಬಿಜೆಪಿ ಶಾಸಕ ರೇಣುಕಾಚಾರ್ಯ ಹೇಳಿದ್ದಾರೆ. ಲೂಟಿ ಹೊಡೆಯಲಿಕ್ಕಾಗಿ ಬಿಜೆಪಿಯಲ್ಲಿ ಪೈಪೋಟಿ ಆರಂಭವಾಗಿದೆ’ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕುಟುಕಿದರು.



ಸಿದ್ದರಾಮಯ್ಯ

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ‘ಯಡಿಯೂರಪ್ಪ ಅವರ ಮೇಲೆ ದ್ವೇಷವೂ ಇಲ್ಲ, ಪ್ರೀತಿಯೂ ಇಲ್ಲ. ಆದರೆ, ಸಿ.ಎಂ ಆಗಿ ಅವರು ವಿಫಲರಾಗಿದ್ದಾರೆ. ಆ ಹುದ್ದೆಗೆ ಬೇರೆ ಸಮರ್ಥರಿಲ್ಲ ಎಂದು ಅವರನ್ನೇ ಮುಂದುವರೆಸಲಾಗುತ್ತಿದೆ’ ಎಂದರು.

‘ರಾಜ್ಯದಲ್ಲಿ ಜನರು ಕೋವಿಡ್–19ನಿಂದ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಅವರ ಸಂಕಷ್ಟಕ್ಕೆ ಸ್ಪಂದಿಸಬೇಕಿದ್ದ ಬಿಜೆಪಿ ನಾಯಕರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಅತ್ಯಾಚಾರ ಪ್ರಕರಣದಲ್ಲಿ ಶಾಸಕ ರಮೇಶ ಜಾರಕಿಹೋಳಿಯನ್ನು ತಕ್ಷಣ ಬಂಧಿಸಬೇಕು. ಅವರ ರಕ್ಷಣೆಗೆ ನಿಂತಿರುವ ಸಚಿವ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಬೇಕು. ಹೇಳಿಕೆ ಕೊಟ್ಟ ಮೇಲೂ ಆರೋಪಿಯನ್ನು ಯಾಕೆ ಬಂಧಿಸಿಲ್ಲ. ಇಂತಹ ಬೆಳವಣಿಗೆ ಎಲ್ಲಿಯಾದರೂ ಸಾಧ್ಯವಾ?’ ಆರೋಪಿ ಗೃಹ ಸಚಿವರನ್ನು ನೇರ ಭೇಟಿಯಾಗುತ್ತಾರೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಮೇಟಿ ಪ್ರಕರಣ ಮುಚ್ಚಿ ಹಾಕಿದವರಿಂದ ನೈತಿಕ ಪಾಠ ಬೇಕಿಲ್ಲ’

ಬೆಂಗಳೂರು: ‘ಮಾಜಿ ಸಚಿವ ಎಚ್.ವೈ.ಮೇಟಿ ಸಿ.ಡಿ ಪ್ರಕರಣ ಮುಚ್ಚಿಹಾಕಿರುವ ಕಾಂಗ್ರೆಸ್‌ನವರಿಂದ ನೈತಿಕಪಾಠ ಅಗತ್ಯವಿಲ್ಲ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.

ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಮೇಲೆ ಪ್ರಭಾವ ಬೀರಲು ಕಾಂಗ್ರೆಸ್ ಮುಖಂಡರು ದುರುದ್ದೇಶದಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಇಷ್ಟು ದಿನ ಬಿಟ್ಟು ಕಾಂಗ್ರೆಸ್ ಮುಖಂಡರು ಈಗಲೇ ಯಾಕೆ ಈ ವಿಷಯ ಕೈಗೆತ್ತಿಕೊಂಡರು? ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಾಗಿರುವ ಕಾರಣವೇ? ಪ್ರಕರಣ ಕುರಿತು ತನಿಖಾಧಿಕಾರಿಗಳು ಹೈಕೋರ್ಟ್‌ಗೆ ವರದಿ ಸಲ್ಲಿಸುತ್ತಾರೆ. ಹೀಗಾಗಿ ಅವರ ಮೇಲೆ ಪ್ರಭಾವ ಬೀರುವ ದುರುದ್ದೇಶದಿಂದ ಈಗ ಹೇಳಿಕೆ ನೀಡುತ್ತಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

‘ಎಚ್.ವೈ.ಮೇಟಿ ಪ್ರಕರಣದಲ್ಲಿ ಸಂತ್ರಸ್ತೆ ದೂರು ನೀಡಿದ್ದೂ, ಮೇಟಿ ಹೆಸರನ್ನೇ ದಾಖಲಿಸಿಕೊಳ್ಳಲಿಲ್ಲ. ಮಾಜಿ ಸಚಿವರ ಹೆಸರು ಸೇರಿಸದೇ ಪ್ರಕರಣದ ತನಿಖೆ ನಡೆಸಿ ಮುಚ್ಚಿ ಹಾಕಿದರು’ ಎಂದು ಕಿಡಿಕಾರಿದರು.



ಪ್ರಕರಣದಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ನಡೆದಿದೆ. ಸರ್ಕಾರ ಹಸ್ತಕ್ಷೇಪ ಮಾಡಿಲ್ಲ ಎಂದು ಹೇಳಿದರು. ರಮೇಶ ಜಾರಕಿಹೊಳಿ ಅವರು ಬೊಮ್ಮಾಯಿ ಅವರನ್ನು ಭೇಟಿಯಾಗಿದ್ದು, ಪ್ರಕರಣ ಮುಚ್ಚಿಹಾಕುವ ಪ್ರಯತ್ನ ನಡೆದಿದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದರು.

ಪತ್ರಕ್ಕೆ ಸ್ಪಂದನೆ ಇಲ್ಲ: ಕಾಂಗ್ರೆಸ್ ನಾಯಕ ದೇಶಪಾಂಡೆ ಬೇಸರ

ಶಿರಸಿ: ‘ಕೋವಿಡ್ ಪರಿಸ್ಥಿತಿ ನಿಯಂತ್ರಣ ಸಲುವಾಗಿ ಸಲಹೆ, ಸಮಸ್ಯೆ ತಿಳಿಸಲು ಮುಖ್ಯಮಂತ್ರಿ ಸೇರಿದಂತೆ ಪ್ರಮುಖ ಸಚಿವರಿಗೆ 25ಕ್ಕೂ ಹೆಚ್ಚು ಬರೆದಿದ್ದೇನೆ. ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ. ಸಚಿವರು ಸಂಪರ್ಕಕ್ಕೂ ಸಿಗುತ್ತಿಲ್ಲ’ ಎಂದು ಕಾಂಗ್ರೆಸ್ ಹಿರಿಯ ನಾಯಕ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ ಶಿರಸಿಗೆ ಭೇಟಿ ನೀಡಿದ್ದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಜನರಿಂದ ದೂರ ಉಳಿದಿರುವ ಸರ್ಕಾರ ಜೀವಂತ ಇದೆಯೆ’ ಎಂದು ಪ್ರಶ್ನಿಸಿದರು.

‘ಸ್ಟಾಲಿನ್ ತಮಿಳುನಾಡಿನ ಮುಖ್ಯಮಂತ್ರಿಯಾದ ತಕ್ಷಣವೇ ಕೋವಿಡ್ ನಿಯಂತ್ರಣಕ್ಕೆ ಸರ್ವ ಪಕ್ಷ ಪ್ರಮುಖರ ಸಮಿತಿ ರಚಿಸಿದರು. ರಾಜ್ಯದಲ್ಲಿ ಅಂತಹ ಮಾದರಿ ಅನುಸರಿಸಬಹುದಿತ್ತು’ ಎಂದು ಹೇಳಿದರು.

‘ಕೃಷಿ, ತೋಟಗಾರಿಕಾ ಬೆಳೆಗಳಿಗೆ ಸರ್ಕಾರ ಈಗ ಘೋಷಿಸಿರುವ ಪರಿಹಾರ ಅತಿ ಕನಿಷ್ಠವಾಗಿದೆ. ಆದೇಶದ ಪುನರ್ ಪರಿಶೀಲನೆ ಮಾಡಲಿ ಎಂದು ಒತ್ತಾಯಿಸಿದರು.

ಯೋಗೇಶ್ವರ್ ಅಪಸ್ವರ: ಯಾರು, ಏನೆಂದರು?

‘ತೃಪ್ತಿ ಇಲ್ಲದಿದ್ದರೆ ರಾಜೀನಾಮೆ ನೀಡಲಿ’

ಶಿವಮೊಗ್ಗ: ‘ಸರ್ಕಾರದ ಕಾರ್ಯವೈಖರಿ ಕುರಿತು ತೃಪ್ತಿ ಇಲ್ಲದಿದ್ದರೆ ಸಚಿವ ಸಿ.ಪಿ.ಯೋಗೇಶ್ವರ್ ರಾಜೀನಾಮೆ ನೀಡಲಿ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಶುಕ್ರವಾರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡುತ್ತಾ, ‘ನಾಯಕತ್ವ ಬದಲಾವಣೆ ಪ್ರಶ್ನೆ ಇಲ್ಲ. ಎಲ್ಲ ಶಾಸಕರೂ ಒಟ್ಟಿಗಿದ್ದೇವೆ. ಪಕ್ಷದಲ್ಲಿ ಸಣ್ಣಪುಟ್ಟ ಗೊಂದಲಗಳಿವೆ. ಅದನ್ನು ಬಗೆಹರಿಸಿಕೊಳ್ಳುತ್ತೇವೆ. ಪಕ್ಷದ ನಾಯಕರ ತೀರ್ಮಾನಕ್ಕೆ ಎಲ್ಲರೂ ಬದ್ಧವಾಗಿರುತ್ತೇವೆ’ ಎಂದರು.

‘ಯೋಗೇಶ್ವರ್ ಅವರು ಬಿಜೆಪಿ ನೇತೃತ್ವದ ಸರ್ಕಾರವನ್ನು ಮೂರು ಪಕ್ಷಗಳ ಸರ್ಕಾರ ಎಂದು ಟೀಕಿಸಿದ್ದಾರೆ. ಇದು ಲಕ್ಷಾಂತರ ಕಾರ್ಯಕರ್ತರಿಗೆ ನೋವು ತಂದಿದೆ ’ ಎಂದರು.

‘ವಿಜಯೇಂದ್ರ ಅವರಿಂದ ಹಸ್ತಕ್ಷೇಪ ಇಲ್ಲ’

‘ಮೂರು ಪಕ್ಷ ಬದಲಾವಣೆ ಮಾಡಿ ಬಂದವರು ಮಾತ್ರ, ಮೂರು ಪಕ್ಷಗಳ ಹೊಂದಾಣಿಕೆ ಸರ್ಕಾರ ಎಂದು ಹೇಳಲು ಸಾಧ್ಯ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದರು.

ಸಿ.ಪಿ.ಯೋಗೇಶ್ವರ್ ಅವರ ಹೇಳಿಕೆ ಕುರಿತಂತೆ, ‘ನಮ್ಮ ಸರ್ಕಾರ ಯಾವುದೇ ಪಕ್ಷದ ಜತೆಗೂ ಹೊಂದಾಣಿಕೆ ಮಾಡಿಕೊಂಡಿಲ್ಲ’ ಎಂದರು.

‘ವಿಜಯೇಂದ್ರ ಅವರು ಆಡಳಿತದಲ್ಲಿ ಎಳ್ಳಷ್ಟೂ ಹಸ್ತಕ್ಷೇಪ ಮಾಡಿರುವ ನಿದರ್ಶನವಿಲ್ಲ. ನನ್ನ ಇಲಾಖೆಯನ್ನು ಮುಕ್ತವಾಗಿ ನಿರ್ವಹಿಸುತ್ತಿದ್ದೇನೆ. ಯಾರೂ ಹಸ್ತಕ್ಷೇಪ ಮಾಡುತ್ತಿಲ್ಲ’ ಎಂದು ಸೋಮಶೇಖರ್ ತಿಳಿಸಿದರು.

ಯೋಗೇಶ್ವರ್ ಹುಚ್ಚ –ಚಂದ್ರಪ್ಪ ಕಿಡಿ

ಚಿತ್ರದುರ್ಗ: ‘ಸಚಿವ ಸಿ.ಪಿ.ಯೋಗೇಶ್ವರ್ ಹುಚ್ಚ. ಆತನಿಗೆ ಎಲ್ಲೋ ತಲೆಕೆಟ್ಟಿರಬೇಕು. ಇದು ನಾಯಕತ್ವ ಬದಲಾವಣೆ ಮಾಡುವ ಸಮಯವೇ’ ಎಂದು ಕೆಎಸ್‌ಆರ್‌ಟಿಸಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ ಕಿಡಿಕಾರಿದರು.

‘ಯಾವ ಸ್ಥಾನಮಾನ ಇಲ್ಲದವನನ್ನು ಕರೆತಂದು ವಿಧಾನಪರಿಷತ್ ಸದಸ್ಯರಾಗಿ ಮಾಡಿ ಸಚಿವ ಸ್ಥಾನ ನೀಡಲಾಯಿತು. ರಾಜಕೀಯದಲ್ಲಿ ಆತ ಇನ್ನೂ ಬಚ್ಚಾ. ಅಧಿಕಾರದ ಅಮಲಿನಲ್ಲಿ ಮನಬಂದಂತೆ ವರ್ತನೆ ಸರಿಯಲ್ಲ’ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು. ‘ಯಡಿಯೂರಪ್ಪ ನಾಯಕತ್ವ ಬದಲಾವಣೆ ಕನಸಿನ ಮಾತು’ ಎಂದರು.

ಯಡಿಯೂರಪ್ಪ ಸ್ಥಾನ ಅಬಾಧಿತ: ಶಾಮನೂರು ವಿಶ್ವಾಸ

ದಾವಣಗೆರೆ: ‘ಮುಖ್ಯಮಂತ್ರಿ ಬದಲಾವಣೆ ಆಗುವುದಿಲ್ಲ. ಯಡಿಯೂರಪ್ಪ ಅವರೇ ನೂರಕ್ಕೆ ನೂರು ಆ ಸ್ಥಾನದಲ್ಲಿ ಮುಂದುವರಿಯುತ್ತಾರೆ’ ಎಂದು ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

‘ಮುಖ್ಯಮಂತ್ರಿ ಬದಲಾವಣೆಗೆ ಪ್ರಯತ್ನಿಸಲು ಹೋದವರು ಮೂರು ನಾಮ ಹಾಕಿಕೊಂಡು ಬಂದಿದ್ದಾರೆ. ಬಿಜೆಪಿಯವರು ಹೈಕಮಾಂಡ್ ಹೇಳಿದಂತೆ ಕೇಳುತ್ತಾರೆ’ ಎಂದು ಪರೋಕ್ಷವಾಗಿ ಸಚಿವ ಸಿ.ಪಿ. ಯೋಗೇಶ್ವರ್‌ಗೆ ಟಾಂಗ್ ಕೊಟ್ಟರು.

ಯಾರೋ ದೆಹಲಿಗೆ ಹೋದ ಕೂಡಲೇ ನಾಯಕತ್ವ ಬದಲಾದರೆ ದಿನಕ್ಕೊಬ್ಬರು ಸಿ.ಎಂ ಆಗಬೇಕಾಗುತ್ತದೆ. ಮೂರು ಗುಂಪುಗಳ ಸರ್ಕಾರ ಇಲ್ಲ. ವಿಜಯೇಂದ್ರ ಅವರ ಹಸ್ತಕ್ಷೇಪ ಇಲ್ಲ.


ಆರ್.ಶಂಕರ್, ಸಚಿವ

‘ನಮ್ಮ ಮುಂದೆ ಈಗ ಇರುವುದು ಕೋವಿಡ್ ನಿಯಂತ್ರಣದ ವಿಚಾರವೊಂದೇ. ನಾಯಕತ್ವ ಬದಲಾವಣೆ ಸೇರಿದಂತೆ ಬೇರೆ ಯಾವುದೇ ವಿಚಾರಗಳಿಲ್ಲ.

ಎಸ್.ಸುರೇಶ್ ಕುಮಾರ್, ಸಚಿವ

ಮುಂಗಾರಿನಲ್ಲಿ ಸಾಮಾನ್ಯ ಮಳೆ

ಬೆಂಗಳೂರು: ‘ಈ ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮುಂಗಾರು ಅವಧಿಯಲ್ಲಿ ಸಾಧಾರಣ ಮಳೆ ಸುರಿಯಲಿದೆ’ ಎಂದು ಹಿರಿಯ ಭೂವಿಜ್ಞಾನಿ ಡಾ.ಎಚ್.ಎಸ್.ಎಂ.ಪ್ರಕಾಶ್ ತಿಳಿಸಿದ್ದಾರೆ.



ಎಚ್.ಎಸ್. ಎಂ.ಪ್ರಕಾಶ್

‘ಈ ಮುಂಗಾರಿನಲ್ಲಿ ಸಾಧಾರಣ ಮಳೆ ನಿರೀಕ್ಷಿಸಬಹುದು. 2018 ಮತ್ತು 2019ರ ಅವಧಿಯಲ್ಲಿ ನಡೆದ ಕೆಲವು ವಿಶೇಷ ಅಪರೂಪದ ಭೂವೈಜ್ಞಾನಿಕ ಘಟನೆಗಳು ಮತ್ತು ಆವಿ ಮೂಲಗಳು ಈ ವರ್ಷ ಸಕ್ರಿಯವಾಗಿಲ್ಲ’.

‘ಕೊಡಗು ಮತ್ತು ಕೇರಳ ಪ್ರಾಂತ್ಯಗಳಿಗೆ ವಿಶೇಷ ಸಿದ್ಧತೆಗಳ ಅವಶ್ಯಕತೆ ಇರುವುದಿಲ್ಲ. ಹವಾಮಾನ ದುರಂತಗಳು ವಿರಳವಾಗಿರಲಿವೆ’ ಎಂದೂ ಹೇಳಿದ್ದಾರೆ.

ವಿಜಯಪುರ, ಬೆಳಗಾವಿಯಲ್ಲಿ ಮಳೆ: ವಿಜಾಪುರದ ಜಿಲ್ಲೆಯ ತಿಕೋಟಾ, ಕೊಲ್ಹಾರ, ದೇವರ ಹಿಪ್ಪರಗಿ, ಬಸವನ ಬಾಗೇವಾಡಿ, ತಾಳಿಕೋಟೆ ವ್ಯಾಪ್ತಿಯಲ್ಲಿ ಗುಡುಗು, ಗಾಳಿಯ ಅಬ್ಬರದೊಂದಿಗೆ ಶುಕ್ರವಾರ ಧಾರಾಕಾರ ಮಳೆಯಾಗಿದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳಿ, ಜಾಗನೂರು, ಗೋಕಾಕ ತಾಲ್ಲೂಕಿನ ವಿವಿಧೆಡೆ ಹಾಗೂ ಬಾಗಲಕೋಟೆ ನಗರದಲ್ಲಿ ಧಾರಾಕಾರ ಮಳೆಯಾಗಿದೆ.

‘ಪ್ಯಾಕೇಜ್ –ಕಣ್ಣೊರೆಸುವ ತಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನ ಎರಡನೇ ಅಲೆಯ ಲಾಕ್‌ಡೌನ್ ಅವಧಿಯಲ್ಲಿ ರಾಜ್ಯ ಸರ್ಕಾರ ಘೋಷಿಸಿರುವ ಆರ್ಥಿಕ ಪರಿಹಾರ ಪ್ಯಾಕೇಜ್ ಯಾವುದೇ ರೀತಿ ಜನೋಪಯೋಗಿಯಾಗಿಲ್ಲ. ಇದು ಕೇವಲ ಕಣ್ಣೊರೆಸುವ ತಂತ್ರ ಎಂದು ಕಾಂಗ್ರೆಸ್ ಟೀಕಿಸಿದೆ.

ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಸಕರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ ಮತ್ತು ರಿಜ್ವಾನ್ ಅರ್ಷದ್, ‘ಕಳೆದ ವರ್ಷ ಘೋಷಿಸಿದ ಪ್ಯಾಕೇಜ್ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿರಲಿಲ್ಲ. ಈಗ ಮತ್ತೆ ಪ್ಯಾಕೇಜ್ ಘೋಷಿಸಿ ಜನರನ್ನು ಮೋಸಗೊಳಿಸಲು ಹೊರಟಿದೆ’ ಎಂದು ದೂರಿದರು.

ಕಳೆದ ವರ್ಷ ವಿವಿಧ ವರ್ಗ ಮತ್ತು ವೃತ್ತಿಯ ಜನರಿಗೆ ಘೋಷಿಸಿದ್ದ ನೆರವಿನಲ್ಲಿ ಶೇಕಡ 50ರಷ್ಟೂ ಪಾವತಿಯಾಗಿಲ್ಲ. ಈ ವರ್ಷ ಪ್ಯಾಕೇಜ್ ಘೋಷಿಸುವಾಗ ಸರ್ಕಾರ, ರೈತರು, ಚಾಲಕರು ಸೇರಿದಂತೆ ದುಡಿಯುವ ವರ್ಗದ ಜನರ ಸಂಖ್ಯೆಯನ್ನು ತನ್ನ ಇಚ್ಛೆಗೆ ತಕ್ಕಂತೆ ನಿರ್ಧರಿಸಿದೆ. 3 ಕೋಟಿ ರೈತರಲ್ಲಿ 79 ಲಕ್ಷ ಜನರಿಗೆ ಮಾತ್ರ ಪರಿಹಾರ ನೀಡುವ ಘೋಷಣೆ ಮಾಡಲಾಗಿದೆ. 17 ಲಕ್ಷ ಆಟೊ ಚಾಲಕರಲ್ಲಿ 2.01 ಲಕ್ಷ ಮಂದಿಗೆ ಮಾತ್ರ ಪರಿಹಾರ ಘೋಷಿಸುವ ಮೂಲಕ ಸರ್ಕಾರ ತಾರತಮ್ಯ ಮಾಡಿದೆ ಎಂದು ಕೃಷ್ಣ ಬೈರೇಗೌಡ ದೂರಿದರು.

ಆಮ್ಲಜನಕದ ಕೊರತೆಯಿಂದ ಮೃತರಾದ ಕೋವಿಡ್ ರೋಗಿಗಳ ಕುಟುಂಬಗಳಿಗೆ ಆಂಧ್ರಪ್ರದೇಶ ಸರ್ಕಾರ ತಲಾ ₹ 10 ಲಕ್ಷ ಪರಿಹಾರ ನೀಡುತ್ತಿದೆ. ಇಲ್ಲಿ ಸಾವಿನ ಲೆಕ್ಕವನ್ನೇ ಮುಚ್ಚಿಡಲಾಗುತ್ತಿದೆ ಎಂದು ಟೀಕಿಸಿದರು.

ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಆರ್ಥಿಕ ಶಕ್ತಿ ಉತ್ತಮವಾಗಿದೆ. ಆದರೂ, ಜನರ ನೆರವಿಗೆ ಏಕೆ ಹಣ ವೆಚ್ಚ ಮಾಡುತ್ತಿಲ್ಲ? ಇದು ಹೃದಯಹೀನ ಸರ್ಕಾರ ಮಾತ್ರವಲ್ಲ, ಪ್ರಜ್ಞಾಹೀನ ಸರ್ಕಾರ ಎಂದು ವಾಗ್ದಾಳಿ ನಡೆಸಿದರು.

ಮೌಢ್ಯ ಬಿತ್ತುವ ಕೆಲಸ: ‘ಕೋವಿಡ್ ನಿಯಂತ್ರಣದಲ್ಲಿನ ವೈಫಲ್ಯ ಮುಚ್ಚಿಕೊಳ್ಳಲು ಬಿಜೆಪಿ ನಾಯಕರು ಮೌಢ್ಯ ಬಿತ್ತುವ ಕೆಲಸ ಮಾಡುತ್ತಿದ್ದಾರೆ ’ ಎಂದು ಪ್ರಿಯಾಂಕ್ ಖರ್ಗೆ ದೂರಿದರು.

₹ 20 ಲಕ್ಷ ಕೋಟಿ ಎಲ್ಲಿದೆ?: ‘ಪ್ರಧಾನಿ ನರೇಂದ್ರ ಮೋದಿ ಕಳೆದ ವರ್ಷ ₹ 20 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್ ಘೋಷಿಸಿದ್ದರು. ಆ ಮೊತ್ತ ಎಲ್ಲಿ ವೆಚ್ಚವಾಗಿದೆ ಎಂಬ ಮಾಹಿತಿಯೇ ಇಲ್ಲ’ ಎಂದು ರಿಜ್ವಾನ್ ಅರ್ಷದ್ ಹೇಳಿದರು.

ಮುಖ್ಯಾಂಶಗಳು

- ಕಳೆದ ವರ್ಷದ ಪ್ಯಾಕೇಜ್ ಅನುಷ್ಠಾನಕ್ಕೆ ಕ್ರಮ ಕೈಗೊಂಡಿರಲಿಲ್ಲ.
- 2.01 ಲಕ್ಷ ಮಂದಿಗೆ ಮಾತ್ರ ಪರಿಹಾರ ಘೋಷಿಸುವ ಮೂಲಕ ಸರ್ಕಾರ ತಾರತಮ್ಯ
- 3 ಕೋಟಿ ರೈತರಲ್ಲಿ 79 ಲಕ್ಷ ಜನರಿಗೆ ಮಾತ್ರ ಪರಿಹಾರ ನೀಡುವ ಘೋಷಣೆ

₹ 3.67 ಲಕ್ಷಕ್ಕೆ ಮೃತದೇಹ ಒತ್ತೆ : ಆಸ್ಪತ್ರೆ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

‘ವ್ಯಕ್ತಿಯ ಅಕ್ರಮ ಬಂಧನ (ಐಪಿಸಿ 342), ಅವಾಚ್ಯ ಶಬ್ದಗಳಿಂದ ನಿಂದನೆ (ಐಪಿಸಿ 504), ಜೀವ ಬೆದರಿಕೆ (ಐಪಿಸಿ 506), ಸರ್ಕಾರಿ ಅಧಿಕಾರಿ ಆದೇಶ ಪಾಲಿಸದಿರುವುದು (ಐಪಿಸಿ 188) ಹಾಗೂ ಅಪರಾಧ ಸಂಚು (ಐಪಿಸಿ 34) ಆರೋಪದಡಿ ಆಸ್ಪತ್ರೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದೂ ಹೇಳಿದರು.

₹ 4.50 ಲಕ್ಷ ಪಾವತಿಸಿದ್ದ ಕುಟುಂಬ: ‘ಲಕ್ಷ್ಮಿನಾರಾಯಣ ಅವರನ್ನು ಪಾಥ್‌ವೇ ಆಸ್ಪತ್ರೆಗೆ ಮೇ 17ರಂದು ದಾಖಲಿಸಲಾಗಿತ್ತು. ಅವರ ಚಿಕಿತ್ಸೆಗಾಗಿ ಕುಟುಂಬಸ್ಥರು ₹ 4.50 ಲಕ್ಷವನ್ನು ಆಸ್ಪತ್ರೆಗೆ ಪಾವತಿಸಿದ್ದರು’ ಎಂದು ಸಂಜೀವ್ ಪಾಟೀಲ ಹೇಳಿದರು.

‘ರೋಗಿ ಮೃತಪಡುತ್ತಿದ್ದಂತೆ ಆಸ್ಪತ್ರೆಯವರು, ಬಾಕಿ ₹ 3.67 ಲಕ್ಷ ಶುಲ್ಕ ಪಾವತಿಸುವಂತೆ ಸೂಚಿಸಿದ್ದರು. ಹಣವಿಲ್ಲವೆಂದು ಕುಟುಂಬಸ್ಥರು ಹೇಳಿದಾಗ, ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು. ಈ ವಿಷಯ ಗೊತ್ತಾದ ಗೀತಾ ಅವರು ಆಸ್ಪತ್ರೆಗೆ ಹೋಗಿ ವಿಚಾರಿಸಿದ್ದರು. ಅವರನ್ನೂ ಆಸ್ಪತ್ರೆಯವರು ನಿಂದಿಸಿದ್ದರು. ಗೀತಾ ಅವರು ಠಾಣೆಗೆ ಬಂದು ದೂರು ನೀಡಿದ್ದರು. ಪೊಲೀಸರೇ ಆಸ್ಪತ್ರೆಗೆ ಹೋಗಿ ಮೃತದೇಹ ಕೊಡಿಸಿದ್ದಾರೆ’ ಎಂದರು.

ನಿಧನ ವಾರ್ತೆ

ನಿರ್ದೇಶಕ ಅಭಿರಾಮ್

ಬೆಂಗಳೂರು: ‘ಸಂಯುಕ್ತ–2’ ಹಾಗೂ ‘0% ಲವ್’ ಚಿತ್ರದ ನಿರ್ದೇಶಕ ಅಭಿರಾಮ್ (34) ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಒಂದು ವಾರದಿಂದ ಕೋವಿಡ್ ಲಕ್ಷಣಗಳಾದ ಜ್ವರ, ಕೆಮ್ಮಿನಿಂದ ಬಳಲುತ್ತಿದ್ದು ಉಸಿರಾಟ ಸಮಸ್ಯೆ ಕಾಣಿಸಿಕೊಂಡಿತ್ತು. ಈ ಎರಡೂ ಚಿತ್ರದ ನಾಯಕ ಡಿ.ಎಸ್.ಮಂಜುನಾಥ್ ಕಳೆದ ಏಪ್ರಿಲ್‌ನಲ್ಲಿ ಕೋವಿಡ್‌ನಿಂದ ನಿಧನರಾಗಿದ್ದರು.



ಸಂಯುಕ್ತ-2 ಸಿನಿಮಾದ ಮೂಲಕ ನಿರ್ಮಾಪಕರಾಗಿ ಮತ್ತು ನಟನಾಗಿ ಡಿ.ಎಸ್. ಮಂಜುನಾಥ್ ಚಿತ್ರರಂಗಕ್ಕೆ ಬಂದಿದ್ದರು. ನಂತರ ಕೆಮಿಸ್ಟ್ರಿ ಆಫ್ ಕರಿಯಪ್ಪ ಸಿನಿಮಾ ನಿರ್ಮಿಸಿದ್ದರು. ‘0% ಲವ್’ ಚಿತ್ರದಲ್ಲಿ ಮಂಜುನಾಥ್ ನಾಯಕನಟ. ಕನಸಿಟ್ಟು ರೂಪಿಸಿದ ‘0% ಲವ್’ ಸಿನಿಮಾ ತೆರೆಕಾಣುವ ಮೊದಲೇ ಚಿತ್ರದ ನಿರ್ದೇಶಕ ಹಾಗೂ ನಾಯಕನಟ ಮೃತಪಟ್ಟಿದ್ದಾರೆ.

ಕೋವಿಡ್ ಪರೀಕ್ಷೆಗೆ ಹಿಂಜರಿಕೆ; ಲಸಿಕೆಗೂ ಹಿಂದೇಟು

ಗಿರಿಜನರ ಮನವೊಲಿಕೆಯೇ ಸವಾಲು

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯ ವಿವಿಧ ಹಾಡಿಗಳಲ್ಲಿ ಗಿರಿಜನರು ಕೋವಿಡ್ ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಅವರ ಮನವೊಲಿಸುವುದೇ ಸವಾಲಾಗಿದೆ.

ಮೈಸೂರು ಜಿಲ್ಲೆಯ ಹುಣಸೂರು, ಎಚ್.ಡಿ.ಕೋಟೆ, ಸರಗೂರು, ನಂಜನಗೂಡು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿನ 219 ಹಾಡಿಗಳಲ್ಲಿ 12,560 ಆದಿವಾಸಿ ಕುಟುಂಬಗಳಿದ್ದು, ಅಂದಾಜು 60 ಸಾವಿರ ಜನಸಂಖ್ಯೆ ಇದೆ.

ಹುಣಸೂರು ತಾಲ್ಲೂಕಿನಲ್ಲಿ 54 ಹಾಡಿಗಳಿದ್ದು, ನಾಲ್ಕೂವರೆ ಸಾವಿರ ಕುಟುಂಬಗಳಿವೆ. ಇಲ್ಲಿ ನಾಗಾಪುರ, ಶೆಟ್ಟಹಳ್ಳಿ ಹಾಡಿಗಳಲ್ಲಿರುವ ಕೆಲವರಷ್ಟೇ ಲಸಿಕೆ ಹಾಕಿಸಿಕೊಂಡಿದ್ದಾರೆ. ಶಾಸಕ ಎಚ್.ಪಿ. ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಮನವಿ ಮಾಡಿದರೂ ಯಾವುದೇ ಫಲ ಲಭಿಸಿಲ್ಲ.

ಎಚ್.ಡಿ.ಕೋಟೆ, ಸರಗೂರು ತಾಲ್ಲೂಕಿನಲ್ಲಿ 118 ಹಾಡಿಗಳಿದ್ದು, ಆರು ಸಾವಿರ ಕುಟುಂಬಗಳಿವೆ. ಇಬ್ಬರಿಗೆ ಸೋಂಕು ದೃಢಪಟ್ಟಿದ್ದು, ಮನೆಯಲ್ಲಿದ್ದುಕೊಂಡೇ ಗುಣಮುಖರಾಗಿದ್ದಾರೆ.

‘ಕೊರೊನಾ ಸೋಂಕಿನ ಲಕ್ಷಣ ಕೆಲವರಲ್ಲಿ ಕಂಡುಬಂದಿದೆ. ಅವರು ಪರೀಕ್ಷೆಗೆ ಒಪ್ಪುತ್ತಿಲ್ಲ‘ ಎಂದು ಎನ್.ಬೇಗೂರಿನ ಗಿರಿಜನ ಸಮುದಾಯದ ಮುಖಂಡ ಶೈಲೇಂದ್ರ ಆತಂಕ ವ್ಯಕ್ತಪಡಿಸಿದರು.

48 ಮಂದಿಗೆ ಕೋವಿಡ್: ಚಾಮರಾಜನಗರ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ 31,516 ಮಂದಿ ವಾಸಿಸುತ್ತಿದ್ದಾರೆ. ಇವರಲ್ಲಿ 48 ಮಂದಿಗೆ ಸೋಂಕು ತಗುಲಿದ್ದು, 47 ಮಂದಿ ಹೋಂ ಐಸೋಲೇಷನ್‌ನಲ್ಲೇ ಇದ್ದಾರೆ. ಒಬ್ಬರು ಮಾತ್ರ ವೀರನಪುರದ ಕೋವಿಡ್ ಕೇರ್‌ಗೆ ದಾಖಲಾಗಿದ್ದಾರೆ.

ಗುಂಡ್ಲುಪೇಟೆ ತಾಲ್ಲೂಕಿನ ಮೂಕಹಳ್ಳಿ ಕಾಲೊನಿ ಒಂದರಲ್ಲೇ 31 ಮಂದಿಗೆ ಸೋಂಕು ತಗುಲಿದೆ. ಬೆಂಗಳೂರಿನಿಂದ ಬಂದವರಲ್ಲಿ ಮೊದಲು ಸೋಂಕು ಕಾಣಿಸಿಕೊಂಡು, ಇತರರಿಗೆ ಹಬ್ಬಿದೆ. ಸದ್ಯ 450 ಮಂದಿ ಕೋವಿಡ್ ಲಸಿಕೆ ತೆಗೆದುಕೊಂಡಿದ್ದಾರೆ.

ಕೊಡಗಿನಲ್ಲೂ ಬುಡಕಟ್ಟು ಜನರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನ ಆರಂಭವಾಗಿದೆ. ಆದರೆ, ಅವರು ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಅಧಿಕಾರಿಗಳು ಮನ ಒಲಿಸುವ ಯತ್ನದಲ್ಲಿದ್ದಾರೆ.



ಎಚ್.ಡಿ.ಕೋಟೆ ತಾಲ್ಲೂಕಿನ ಮೇಟಿಕುಪ್ಪೆ ಹಾಡಿ _ಚಿತ್ರ: ಸವಿತಾ ಬಿ.ಆರ್

ಹುಣಸೂರು ತಾಲ್ಲೂಕಿನ ಗಿರಿಜನರಲ್ಲಿ ಈವರೆಗೆ ಸೋಂಕು ಕಾಣಿಸಿಲ್ಲ. 56 ಕುಟುಂಬದವರು ಲಸಿಕೆ ಪಡೆದಿದ್ದಾರೆ.

ರಾಜಪ್ಪ, ಹುಣಸೂರಿನ ಶೆಟ್ಟಹಳ್ಳಿ ಪುನರ್ವಸತಿ ಕೇಂದ್ರದ ಮುಖಂಡ

ನಮ್ಮ ಹಾಡಿಗಳಿಗೆ ಬರಬೇಡಿ ಎನ್ನೋರೆ ಹೆಚ್ಚಿದ್ದಾರೆ. ಆಹಾರ ಕಿಟ್ ಕೊಡುವಾಗ ಆರೋಗ್ಯ ಶಿಕ್ಷಣವನ್ನೂ ನೀಡಲಾಗುತ್ತಿದೆ

ಡಾ.ಟಿ.ರವಿಕುಮಾರ್, ತಾಲ್ಲೂಕು ಆರೋಗ್ಯಾಧಿಕಾರಿ, ಎಚ್.ಡಿ.ಕೋಟೆ

ಗಿಡಮೂಲಿಕೆ ಔಷಧಿ ಸೇವಿಸಿ ಬದುಕುವವರು ನಾವು. ಯಾವುದೇ ರೋಗ ಸುಳಿಯಲ್ಲ.

ಬಿ.ಕಾವೇರ, ಎಚ್.ಡಿ.ಕೋಟೆಯ ಬಸವನಗಿರಿ ಹಾಡಿ, ಸೋಲಿಗರ ಮುಖಂಡ



ಅವನಿಲ್ಲದಿದ್ದರೂ ಅವಳಿಗೊಂದು ಬದುಕಿದೆ..

ಪವಿತ್ರಾ ರಾಘವೇಂದ್ರ ಶೆಟ್ಟಿ

ಆಕೆ 28ರ ಯುವತಿ. ಮೂರು ತಿಂಗಳ ಗರ್ಭಿಣಿ. ಕೋವಿಡ್‌ನಿಂದ ಪತಿ ಸಾವನ್ನಪ್ಪಿದಾಗ ದುಃಖ ಸಹಿಸಲಾರದೇ ಆತ್ಮಹತ್ಯೆಗೆ ಶರಣಾದರು. ಪತಿಯ ಸಾವಿನಿಂದ ಮಾನಸಿಕವಾಗಿ ನೊಂದಿದ್ದ ಆಕೆ ದಿಢೀರ್ ಆಗಿ ಕೈಗೊಂಡ ಈ ನಿರ್ಧಾರ ಕುಟುಂಬದ ಇತರರನ್ನು ನೋವಿನ ಕಡಲಲ್ಲಿ ಮುಳುಗಿಸಿದೆ.

***

ಇನ್ನೊಬ್ಬಾಕೆ ಎರಡು ವರ್ಷಗಳ ಹಿಂದೆ ತಾನು ಮೆಚ್ಚಿದವನನ್ನು ಮದುವೆಯಾಗಿದ್ದರು. ಪತಿ ಕೊರೊನಾ ಸೋಂಕಿನಿಂದ ಮರಣ ಹೊಂದಿದರು. ಪತಿಯ ಅಂತ್ಯ ಸಂಸ್ಕಾರದ ಬಳಿಕ ಮನೆಗೆ ಮರಳಿದ ಆಕೆ ದುಃಖ ತಡೆಯಲಾರದೆ ಶರಣಾಗಿದ್ದು ನೇಣಿಗೆ.

– ಕೋವಿಡ್‌ನ ಈ ಎರಡನೆಯ ಅಲೆಯ ಸಂದರ್ಭದಲ್ಲಿ ಇಂತಹ ನಾಲ್ಕೈದು ಪ್ರಕರಣಗಳು ವರದಿಯಾಗಿವೆ. ಕೆಲವೊಂದಿಷ್ಟು ಸುದ್ದಿಯಾಗದೇ ಇರಲೂಬಹುದು. ಮಗನನ್ನೋ, ಅಳಿಯನನ್ನೋ ಕಳೆದುಕೊಂಡ ಮನೆಯವರ ದುಃಖದ ಕಣ್ಣೀರಿನ ಪಸೆ ಇನ್ನು ಹಸಿಯಾಗಿರುವಾಗಲೇ ಮಗಳೋ, ಸೊಸೆಯೋ ಸಾವಿನ ಮನೆಯತ್ತ ಹೆಜ್ಜೆ ಹಾಕಿದರೆ ಆ ಮನೆಯವರ ಪರಿಸ್ಥಿತಿ ಹೇಗಿರಬಹುದು?

ಮದುವೆಯಾಗಿ ಒಂದೋ, ಎರಡೋ ವರ್ಷಗಳಾಗಿರಬಹುದು. ಜೀವನದಲ್ಲಿ ನೋವು, ನಲಿವಿಗೆ ಜೊತೆಯಾಗಿ ನಿಲ್ಲುವ ಸಂಗಾತಿ ತೀರಿಕೊಂಡಾಗ ಆಘಾತವಾಗುವುದು ಸಹಜವೆ. ಆದರೆ ಇನ್ನೂ ಬಾಳಿ ಬದುಕಿ, ಜೀವನವನ್ನು ಅನುಭವಿಸಬೇಕಿದ್ದವರು ಸಂಗಾತಿ ಇಲ್ಲದ ಬದುಕು ಬೇಡವೆಂದೋ ಅಥವಾ ಭವಿಷ್ಯವನ್ನು ಎದುರಿಸುವುದು ಹೇಗೆ ಎಂಬ ಅಳುಕಿನಿಂದಲೋ ಆತ್ಮಹತ್ಯೆ ಎಂಬ ದುಡುಕಿನ ನಿರ್ಧಾರ ತೆಗೆದುಕೊಂಡು, ಮೊದಲೇ ನೊಂದ ಕುಟುಂಬದ ಇತರ ಸದಸ್ಯರಿಗೆ ಇನ್ನಷ್ಟು ನೋವು ಕೊಡುವುದು ಸಣ್ಣ ಅಘಾತವೇನೂ ಅಲ್ಲ! ಒಂದು ಕ್ಷಣದ ನಿರ್ಧಾರದಿಂದ ಕಂಡ ಕನಸುಗಳು, ಒಂದಷ್ಟು ಜವಾಬ್ದಾರಿಗಳನ್ನು ಮುಗಿಸದೇ ಬದುಕಿಗೆ ಬೆನ್ನು ತಿರುಗಿಸುವುದು ಎಷ್ಟು ಸರಿ ಎಂಬ ಪ್ರಶ್ನೆ ಏಳುವುದು ಸಹಜವೇ.

ಬದುಕು ಎದುರಿಸುವ ಛಾತಿ ಇರಲಿ..

ಗಂಡ ಸತ್ತ ಮೇಲೆ ಇನ್ನೆಲ್ಲಿಯ ಬದುಕು... ಎಂದು ಹೆಂಡತಿ ಸಾವಿನ ಮೊರೆ ಹೋಗುತ್ತಿರುವುದು ಇಂದು ನಿನ್ನೆಯ ಕತೆಯಲ್ಲ! ಇತಿಹಾಸದ ಪುಟಗಳನ್ನು ತಿರುಗಿಸಿದರೆ, ಯುದ್ಧದ ಸಂದರ್ಭದ ಘಟನೆಗಳನ್ನು ಅವಲೋಕಿಸಿದರೆ ಹೆಣ್ಣು ಇಂತಹುದೇ ಸಂದಿಗ್ಧಗಳನ್ನು ಎದುರಿಸಿಕೊಂಡೇ ಬಂದಿದ್ದಾಳೆ. ಯುದ್ಧದಲ್ಲಿ ಪತಿ ಮರಣ ಹೊಂದಿದ ಎಂದು ತಿಳಿಯುತ್ತಲೇ ಇಲ್ಲಿ ಹೆಣ್ಣು ತನ್ನ ಬದುಕಿಗೆ ಅಂತಿಮ ವಿದಾಯ ಹೇಳಿದಂತಹ ಹಲವು ಘಟನೆಗಳು ದಾಖಲಾಗಿವೆ. ಗಂಡನಿಲ್ಲದೇ ಹೆಂಡತಿ ಬದುಕುವುದು ದುರ್ಭರ ಎಂಬಂತಹ ಪರಿಸ್ಥಿತಿ ಆ ಕಾಲದಲ್ಲಿ ಇತ್ತೇನೋ ಅಂದುಕೊಂಡರೂ ಕೂಡ ಎಲ್ಲರೂ ಅಂತಹ ಕಠಿಣ ನಿರ್ಧಾರ ಕೈಗೊಂಡಿರಲಿಲ್ಲವಲ್ಲ. ಬದುಕನ್ನು ಒಂಟಿಯಾಗಿಯೋ, ಕುಟುಂಬದ ಇತರರ ನೆರವಿನಿಂದಲೋ ಎದುರಿಸುವ ಛಾತಿಯೂ ಹಲವರಲ್ಲಿತ್ತು.

ಆ ಕ್ಷಣಕ್ಕೆ ಅವರ ಮಾನಸಿಕ ಸ್ಥಿತಿ ಹಾಗಿರುತ್ತದೆ. ಇನ್ನು ಅವರ ಆರ್ಥಿಕ ಸ್ಥಿತಿ ಕೂಡ ಈ ದುಡುಕಿನ ನಿರ್ಧಾರಕ್ಕೆ ಕಾರಣವಾಗಿರಲೂ ಬಹುದು. ಗಂಡನನ್ನು ನಂಬಿಕೊಂಡೇ ಜೀವನ ನಡೆಸುವ ಹೆಣ್ಣಿಗೆ ಗಂಡನಿಲ್ಲದೇ ಮುಂದೇನು ಎಂಬ ಪ್ರಶ್ನೆ ಕಾಡುವುದು ಖಂಡಿತ. ಆ ಕ್ಷಣಕ್ಕೆ ಅವರಿಗೆ ಈ ಬದುಕು ಸಹ್ಯ ಅನಿಸದೇ ಇರಬಹುದು. ಮುಂದೆ ಜೀವನ ನಡೆಸುವುದು ಹೇಗೆ ಎಂಬ ಗೊಂದಲವೂ ಅವರನ್ನು ಕಾಡಿರಬಹುದು. ಇವೆಲ್ಲವೂ ಮಾನಸಿಕವಾಗಿ ಹೆಣ್ಣು ಕುಗ್ಗಲು ಕಾರಣವಾಗುತ್ತವೆ.

ಬದುಕಿಗೆ ಸ್ಫೂರ್ತಿಯಾದವರು..

ಜೀವನ ಹೇಗೆ ಸಾಗಿಸುವುದು ಎಂಬುದು ಆ ಕ್ಷಣಕ್ಕೆ ಅವಳಿಗೆ ಕಷ್ಟವಾಗಿ ಕಂಡರೂ ಇದನ್ನೆಲ್ಲಾ ಮೀರಿದ ಒಂದು ಜೀವನ ತನಗಾಗಿ ಕಾದಿದೆ, ತಾನು ತನಗಾಗಿ ಬದುಕಬೇಕು ಎಂಬ ಆಸೆ ಮೂಡಿದಾಗಲೇ ಈ ದುಃಖವನ್ನೆಲ್ಲಾ ಮೀರಿ ಬೆಳೆಯಲು ಸಾಧ್ಯ. ಜೀವನವೆಂದ ಮೇಲೆ ಪ್ರತಿಯೊಂದು ಬದಲಾವಣೆಗೆ ತನ್ನನ್ನು ಒಡ್ಡಿಕೊಂಡಾಗಲೇ ಗಟ್ಟಿಯಾಗಿ ನಿಲ್ಲುವುದಕ್ಕೆ ಸಾಧ್ಯ. ಸಾಕಷ್ಟು ಜನ ಸಂಗಾತಿಯ ಅಗಲಿಕೆಯ ನೋವನ್ನು ಅನುಭವಿಸಿ ಮತ್ತೆ ಹೊಸ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಅಂಥವರು ಬದುಕಿಗೆ ಸ್ಫೂರ್ತಿಯಾಗಿರಬೇಕು. ಆತ್ಮಹತ್ಯೆಯೊಂದೇ ಎಲ್ಲದಕ್ಕೂ ಪರಿಹಾರವಲ್ಲ ಎಂಬುದನ್ನು ಅರಿತಾಗಲೇ ಬದುಕನ್ನು ಮತ್ತೆ ಪ್ರೀತಿಸಲು ಸಾಧ್ಯ. ❖

‘ಕಲೆಯನ್ನೇ ಶಕ್ತಿಯನ್ನಾಗಿಸಿಕೊಂಡೆ’

ಒಂದು ತಿಂಗಳ ಹಿಂದೆಯಷ್ಟೇ ನಾನು ಕೊರೊನಾ ಕಾರಣದಿಂದ ನನ್ನ ಬದುಕಿನ ಎಲ್ಲವೂ ಆಗಿರುವ ಪತಿಯನ್ನು ಕಳೆದುಕೊಂಡೆ. ಒಮ್ಮೆ ದಿಕ್ಕೇ ತೋಚದ ಹಾಗೇ ಆಗಿತ್ತು. ಮುಂದೆ ಬದುಕು ಹೇಗೆ…? ಎಂಬ ಯೋಚನೆ.



ಇದರ ನಡುವೆ ಮಗಳಿಗಾಗಿ, ನಾನು ಅವರು ಒಟ್ಟಾಗಿ ಕಂಡ ಕನಸಿಗಾಗಿ ಬದುಕಬೇಕು ಅನಿಸಿತ್ತು. ಅವರೆಲ್ಲೂ ಹೋಗಿಲ್ಲ! ನನ್ನೊಂದಿಗೆ ನನ್ನ ಪ್ರತಿ ಹಜ್ಜೆಯೊಂದಿಗೆ ಇದ್ದಾರೆ ಅನ್ನುವ ಭಾವವೊಂದನ್ನು ಮನಸ್ಸಿನಲ್ಲಿ ಅಚಲವಾಗಿ ಮೂಡಿಸಿಕೊಂಡೆ. ಒಂದಷ್ಟು ಜವಾಬ್ದಾರಿ ನನ್ನ ಹೆಗಲ ಮೇಲಿತ್ತು. ಅದನ್ನೆಲ್ಲಾ ನಿಭಾಯಿಸಲು ನನಗೆ ಸಹಾಯಕವಾಗಿದ್ದು ನನ್ನಲ್ಲಿದ್ದ ಕೌಶಲ. ಮಣ್ಣಿನಿಂದ ಆಭರಣ ಮಾಡುವ ಕಲೆ ನನಗೊಲಿದಿತ್ತು. ಅದನ್ನೇ ನನ್ನ ಶಕ್ತಿಯನ್ನಾಗಿಸಿಕೊಂಡು ನನ್ನ ದುಃಖವನ್ನೆಲ್ಲಾ ಬದಿಗೊತ್ತಿ ಅದರಲ್ಲಿ ಬ್ಯುಸಿಯಾಗಿ ಬಿಟ್ಟೆ. ಸಂಗಾತಿ ಇಲ್ಲದಾಗ ಬದುಕೇ ಇಲ್ಲ ಅನಿಸಿ ಬಿಡುವುದು ಸಹಜ. ಆದರೆ ಅದೇ ನೋವಿನಲ್ಲಿ ಕೊರಗುವ ಬದಲು ಬದಲಾವಣೆಗೆ ನಮ್ಮನ್ನು ತೆರೆದುಕೊಂಡು ಮುಂದೆ ಸಾಗುವುದು ಬಹಳ ಮುಖ್ಯ.

-ನೀಲಿ ಲೋಹಿತ್

covidwidows.in

ಕೊರೊನಾ ಸೋಂಕಿನಿಂದ ಪತಿಯನ್ನು ಕಳೆದುಕೊಂಡ ವಿಧವೆಯರನ್ನು ಸ್ವಾವಲಂಬಿಗಳನ್ನಾಗಿಸಿ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವುದು ಹಾಗೂ ಅವರ ಎಳೆಯ ಮಕ್ಕಳ ಭವಿಷ್ಯಕ್ಕೆ ನೆರವು ನೀಡುವ ಸಲುವಾಗಿ coviwidows.in ಜಾಲತಾಣವನ್ನು ಆರಂಭಿಸಲಾಗಿದೆ. ಯುಧ್‌ವೀರ್ ಮೋರ್, ಕರಣ್ ಪ್ರವೇಶ್ ಸಿಂಗ್, ಅಂಜು ಜಯರಾಮ್ ಹಾಗೂ ಹಿಮಾಂಶಿ ಟಂಡನ್ ಈ ನಾಲ್ವರು ಜಾಲತಾಣದ ರೂವಾರಿಗಳು. ವಿಧವೆಯರಿಗೆ ಉದ್ಯೋಗ ಕೊಡಿಸಿ ಅವರ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಈ ಸಂಸ್ಥೆ ನೆರವಾಗುತ್ತದೆ. ವೃತ್ತಿಗೆ ಸಂಬಂಧಿಸಿ ಸಮಾಲೋಚನೆ, ಕೌಶಲಕ್ಕೆ ಹೊಂದುವಂತಹ ಉದ್ಯೋಗಾವಕಾಶ ಕಲ್ಪಿಸುವುದು, ಸಂದರ್ಶನ ತಯಾರಿಗೆ ತರಬೇತಿ ಮುಂತಾದವುಗಳನ್ನು ಈ ಜಾಲತಾಣ ಒಳಗೊಂಡಿದೆ. ಮೇ 17 ರಿಂದ ಈ ಜಾಲತಾಣ ಕಾರ್ಯನಿರ್ವಹಿಸುತ್ತಿದ್ದು ಸಂಜೆ 5 ರಿಂದ ರಾತ್ರಿ 10ರವರೆಗೆ ಝೂಮ್ ಕರೆಯ ಮೂಲಕ ಸಂಪರ್ಕ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ covidwomenhelp@riseagain.in ಸಂಪರ್ಕಿಸಬಹುದು.



ಕೋವಿಡ್‌ನಿಂದ ಸಂಗಾತಿಯನ್ನು ಕಳೆದುಕೊಂಡ ಯುವತಿಯರು ಆತ್ಮಹತ್ಯೆ ಮಾಡಿಕೊಂಡ ಕೆಲವು ಘಟನೆಗಳು ವರದಿಯಾಗಿವೆ. ಆದರೆ ನೋವನ್ನು ಮೆಟ್ಟಿ ನಿಂತು ಬದುಕನ್ನು ಎದುರಿಸುವ ಮಾನಸಿಕ ಸ್ಥೈರ್ಯ ಬೆಳೆಸಿಕೊಳ್ಳಲು ಮನೆಯವರು ಬೆಂಬಲವಾಗಿ ನಿಲ್ಲಬೇಕು ಎನ್ನುತ್ತಾರೆ ತಜ್ಞರು.



ಸಮಸ್ಯೆಯನ್ನು ಎದುರಿಸಿ ನಿಲ್ಲಿ!

ಈ ಕೋವಿಡ್ ಎನ್ನುವ ಅನಿಶ್ಚಿತತೆ ಎಲ್ಲರನ್ನೂ ಕಾಡುತ್ತಿರುತ್ತದೆ. ಎಲ್ಲರಲ್ಲೂ ಒಂದು ರೀತಿಯ ಭಯದ ಮನಸ್ಥಿತಿ ಇದ್ದೇ ಇರುತ್ತದೆ. ತಮ್ಮವರ ಹತ್ತಿರ ನಿಂತು ಅವರ ಆರೈಕೆ ಮಾಡುವುದಕ್ಕೂ ಆಗಿಲ್ಲ, ಅವರಿಗೊಂದು ವಿದಾಯ ಹೇಳುವುದಕ್ಕೂ ಆಗಿಲ್ಲ ಎಂಬ ನೋವಿನ ಜತೆ, ಮುಂದೆ ಅವರಿಲ್ಲದೇ ಜೀವನ ಹೇಗೆ ಎಂಬ ಅಘಾತ ತಡೆದುಕೊಳ್ಳುವುದಕ್ಕೆ ಆಗದೇ ಆತ್ಮಹತ್ಯೆಯಂತಹ ಪ್ರಯತ್ನಗಳನ್ನು ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಮನೆಯವರು ಅವರ ಜತೆ ನಾವಿದ್ದೇವೆ ಎಂದು ಬೆಂಬಲವಾಗಿ ನಿಲ್ಲಬೇಕು. ಈ ಸಮಸ್ಯೆ ನಿಮಗೊಬ್ಬರಿಗೇ ಅಲ್ಲ, ಎಲ್ಲರೂ ಒಂದಲ್ಲ ಒಂದು ರೀತಿಯ ನೋವು ಅನುಭವಿಸುತ್ತಿದ್ದಾರೆ ಎಂಬುದನ್ನು ಅವರಿಗೆ ಮನದಟ್ಟು ಮಾಡಬೇಕು. ಏನೇ ಸಮಸ್ಯೆ ಬಂದರೂ ಎದುರಿಸಬೇಕು ಎಂಬ ಧೈರ್ಯ ನೀಡಬೇಕು. ಇದರ ಜತೆಗೆ ಅವರನ್ನು 24 ಗಂಟೆಯೂ ನೋಡಿಕೊಳ್ಳಬೇಕು. ಅಗತ್ಯವಿದ್ದಾಗ ತಜ್ಞರ ಸಹಾಯ ತೆಗೆದುಕೊಳ್ಳಬೇಕು. ಆಗ ಮಾತ್ರ ಅವರನ್ನು ಆತ್ಮಹತ್ಯೆಯಂತಹ ಯೋಚನೆಗಳಿಂದ ಹೊರತರಲು ಸಾಧ್ಯ. ನೋವಿನಿಂದ ಚೇತರಿಸಿಕೊಳ್ಳಲು ಸಾಧ್ಯ.

-ಡಾ. ಶಿವಾನಂದ ಬಿ. ಹಿರೇಮಠ,
ಮನೋರೋಗ ತಜ್ಞ, ಹುಬ್ಬಳ್ಳಿ

ಮುಟ್ಟಿನ ಶೂಲೆಗೆ ಮನೆಮದ್ದು

ಅಮೃತ

ಮುಟ್ಟಾದಾಗ ಹೊಟ್ಟೆನೋವು ಅಥವಾ ಸೆಳೆತದ ಸಮಸ್ಯೆಯನ್ನು ಬಹುತೇಕ ಮಹಿಳೆಯರು ಅನುಭವಿಸಿರಬಹುದು. ಆರಂಭದಲ್ಲಿ ಅಂದರೆ ಪ್ರೌಢಾವಸ್ಥೆ ತಲುಪಿದ ಹುಡುಗಿಯರಲ್ಲಿ ಋತುಸ್ರಾವ ಶುರುವಾದಾಗಲಂತೂ ಈ ಸಮಸ್ಯೆ ಜಾಸ್ತಿಯೇ ಇರುತ್ತದೆ. ಶಾಲಾ– ಕಾಲೇಜಿಗೆ ಹೋಗುವಾಗ, ಪರೀಕ್ಷೆ ಸಂದರ್ಭದಲ್ಲಿ ಈ ಸೆಳೆತದ ನೋವು ತಡೆಯಲಾರದೆ ಹಲವರು ನೋವಿನ ಮಾತ್ರೆಯನ್ನು ಸೇವಿಸುವ ಅಭ್ಯಾಸಕ್ಕೆ ಮೊರೆ ಹೋಗುತ್ತಾರೆ. ಆದರೆ ನಮ್ಮ ಅಜ್ಜಿ, ಅಮ್ಮಂದಿರು ಈ ಸಮಸ್ಯೆಗೆ ಮನೆಯಲ್ಲೇ ಪರಿಹಾರ ಕಂಡುಕೊಳ್ಳುತ್ತಿದ್ದರು. ಒಟ್ಟಾರೆ ಆರೋಗ್ಯದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರದ, ಆದರೆ ಸಮಸ್ಯೆಗೆ ರಾಮಬಾಣದಂತಿರುವ ಕೆಲವು ಮನೆಮದ್ದುಗಳು ಇಲ್ಲಿವೆ.

ಓಂಕಾಳು: ಅಜ್ವಾನ್ ಎಂದೇ ಪರಿಚಿತವಾಗಿರುವ ಈ ಮಸಾಲೆ ಪದಾರ್ಥ ಎಲ್ಲರ ಅಡುಗೆ ಮನೆಯ ಡಬ್ಬಿಯಲ್ಲೂ ಸ್ಥಾನ ಪಡೆದಿರುತ್ತದೆ. ಸಾಮಾನ್ಯ ಹೊಟ್ಟೆನೋವು, ಅಜೀರ್ಣ, ಹೊಟ್ಟೆಯುಬ್ಬರಕ್ಕೆ ಹೇಳಿ ಮಾಡಿಸಿದಂತಹ ಓಂಕಾಳು ಮುಟ್ಟಿನ ಶೂಲೆಗೂ ಪರಿಹಾರ ಒದಗಿಸಬಲ್ಲದು. ಎರಡು ಕಪ್ ನೀರಿಗೆ ಅರ್ಧ ಟೀ ಚಮಚ ಓಂಕಾಳು ಸೇರಿಸಿ ಕುದಿಸಿ. ಇದು ಒಂದು ಕಪ್‌ಗೆ ಇಳಿದ ನಂತರ ಶೋಧಿಸಿ ಕುಡಿಯಿರಿ. ಬೇಕಿದ್ದರೆ ಈ ಕಷಾಯಕ್ಕೆ ಸ್ವಲ್ಪ ಬೆಲ್ಲ ಸೇರಿಸಿ ಕುಡಿಯಬಹುದು. ಹಾಗೆಯೇ ಓಂಕಾಳನ್ನು ನಿತ್ಯದ ಅಡುಗೆಯಲ್ಲಿ ಕೂಡ ಬಳಸುವುದು ಆರೋಗ್ಯಕರ. ವಾಯು ಸಮಸ್ಯೆಗೆ ಕಾರಣವಾಗುವಂತಹ ಆಲೂಗೆಡ್ಡೆ, ಗೆಣಸು, ಬಾಳೆಕಾಯಿ, ಹಲಸಿನಕಾಯಿ, ತೊಗರಿಬೇಳೆ ಮೊದಲಾದವುಗಳನ್ನು ಬಳಸಿ ಮಾಡುವ ಅಡುಗೆಗೆ ಓಂಕಾಳು ಹಾಕಿದರೆ ಹೊಟ್ಟೆಯುಬ್ಬರ ಸಮಸ್ಯೆಯಿಂದ ಪಾರಾಗಬಹುದು.

ಇದೇ ರೀತಿ ಜೀರಿಗೆ ನೀರನ್ನೂ ಕುಡಿಯಬಹುದು. ಆದರೆ ಯಾವುದೇ ಕಷಾಯವಿರಲಿ, ಬಿಸಿ ಇರುವಾಗ ಸೇವಿಸುವುದನ್ನು ಮರೆಯಬೇಡಿ.

ಎಳ್ಳು: ಮೊದಲ ಮುಟ್ಟು ಕಾಣಿಸಿದಾಗ ಹುಡುಗಿಯರಿಗೆ ಎಳ್ಳಿನ ಚಿಗಳಿ ಉಂಡೆ ತಿನ್ನಿಸುವ ರೂಢಿ ಈಗಲೂ ಹಳ್ಳಿಗಳಲ್ಲಿದೆ. ಇಂತಹ ಎಳ್ಳಿನ ಎಣ್ಣೆ ಮುಟ್ಟಿನ ಸೆಳೆತಕ್ಕೆ ದಿವ್ಯ ಔಷಧ. ಸ್ವಲ್ಪ ಎಳ್ಳೆಣ್ಣೆ ಬಿಸಿ ಮಾಡಿಕೊಂಡು ಕಿಬ್ಬೊಟ್ಟೆಯ ಭಾಗಕ್ಕೆ ನೀವಿಕೊಳ್ಳಿ. ಅರ್ಧ ತಾಸು ಬಿಟ್ಟು ಬಿಸಿ ನೀರಿನಿಂದ ಸ್ನಾನ ಮಾಡಿ. ಕಿಬ್ಬೊಟ್ಟೆಗೆ ಬಿಸಿ ನೀರಿನ ಶಾಖವನ್ನೂ ಕೊಡಬಹುದು.

ಇಂಗು: ಸಾಮಾನ್ಯ ಹೊಟ್ಟೆಯುಬ್ಬರಕ್ಕೂ ಇದನ್ನು ಮನೆಮದ್ದಾಗಿ ಬಳಸುವ ರೂಢಿಯಿದೆ. ಮಜ್ಜಿಗೆಗೆ ಚಿಟಿಕೆ ಇಂಗು, ಸೈಂಧವ ಲವಣ ಸೇರಿಸಿ ಕುಡಿದರೆ ವಾಯು ಪ್ರಕೋಪ ಶಮನವಾಗುತ್ತದೆ. ಇದರಲ್ಲಿರುವ ಉರಿಯೂತ ಶಮನ ಮಾಡುವ ಗುಣ ಮುಟ್ಟಿನ ಸೆಳೆತಕ್ಕೂ ಪರಿಹಾರ ಒದಗಿಸುತ್ತದೆ. ದಿನಕ್ಕೆ 1–2 ಸಲ ಇಂಗನ್ನು ಮಜ್ಜಿಗೆಗೆ ಅಥವಾ ಉಗುರು ಬೆಚ್ಚಗಿನ ನೀರಿಗೆ ಸೇರಿಸಿ ಕುಡಿಯಬಹುದು. ಇದರಿಂದ ಅನಿಯಮಿತ ಮುಟ್ಟಿಗೂ ಪರಿಹಾರ ಕಂಡುಕೊಳ್ಳಬಹುದು. ನಿತ್ಯದ ಅಡುಗೆ ಪದಾರ್ಥಗಳಲ್ಲೂ ಇದನ್ನು ಬಳಸಿದರೆ ಸಾಮಾನ್ಯ ಅಜೀರ್ಣ ಸಮಸ್ಯೆಗೂ ಒಳ್ಳೆಯದು.



ಮೆಂತ್ಯೆ: ಕೆಲವರಾದರೂ ಗಮನಿಸಿರಬಹುದು, ಮನೆಯಲ್ಲಿ ಅಮ್ಮಂದಿರು ಕೆಲವೊಮ್ಮೆ ರಾತ್ರಿ ಒಂದು ಲೋಟಕ್ಕೆ ಚಮಚ ಮೆಂತ್ಯೆ ನೆನೆಹಾಕಿ, ಮರುದಿನ ಆ ನೀರನ್ನು ಕುಡಿಯುವುದನ್ನು. ಇದು ಮುಟ್ಟಿನ ನೋವಿಗೆ ಒಳ್ಳೆಯ ಔಷಧ.

ಲೋಳೆಸರ: ಕೂದಲು, ಚರ್ಮದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಈ ಸಸ್ಯ ಮುಟ್ಟಿನ ಶೂಲೆಗೂ ಒಳ್ಳೆಯ ಮದ್ದು. ಮನೆಯಲ್ಲೇ ಕುಂಡದಲ್ಲಿ ಕೂಡ ಇದನ್ನು ಬೆಳೆಸಬಹುದು. ತಾಜಾ ಎಲೆಯನ್ನು ಮುರಿದಾಗ ಬರುವ ಜೆಲ್ ಬಳಸಬೇಕು. ಒಂದು ಚಮಚ ಜೆಲ್ ಅನ್ನು ಒಂದು ಲೋಟ ನೀರಿಗೆ ಹಾಕಿ ಚೆನ್ನಾಗಿ ಕದಡಿ. ಇದನ್ನು ನಿತ್ಯ ಸೇವಿಸುವುದರಿಂದ ಮುಟ್ಟಿನ ನೋವು ಕಡಿಮೆಯಾಗುತ್ತದೆ. ❖

ವಾಸ್ತು, ಜಾತಕದಂಥ ದ್ವಂದ್ವದಿಂದ ಹೊರ ಬರುವುದು ಹೇಗೆ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ವಿವಾಹಿತೆ. ಕೆಲವು ವರ್ಷಗಳ ಹಿಂದೆ ನನ್ನ ಪತಿಗೆ ದೊಡ್ಡ ಅಪಘಾತವಾಗಿ 9 ತಿಂಗಳು ಬಹಳ ಕಷ್ಟವಾಗಿತ್ತು. ಪತಿ ಹುಷಾರಾದರೆ ಸಾಕು ಎಂದು ಹಿತೈಷಿಗಳು ಹೇಳಿದಂತೆ ಪೂಜೆ, ಹೋಮ, ವಾಸ್ತು, ಜಾತಕ ಎಲ್ಲದರ ಮೊರೆಹೋದೆ. ಈಗ ಪತಿ ಗುಣವಾಗಿದ್ದಾರೆ. ನನ್ನ ಭಯ, ಹತಾಶೆಯ ದಿನಗಳಲ್ಲಿ ಇತರರ ನಂಬಿಕೆಗಳು ಮೇಲುಗೈ ಸಾಧಿಸಲು ಸುಲಭವಾಯಿತು. ವಾಸ್ತು, ಜಾತಕ ಮತ್ತಿತರ ವಿಚಾರಗಳ ದ್ವಂದ್ವದಿಂದ ಹೊರಬರಲು ಇಚ್ಛಿಸುತ್ತೇನೆ. ಎಂತಹ ಹತಾಶೆಯ ಸ್ಥಿತಿಯಲ್ಲಿಯೂ ಇತರರ ನಂಬಿಕೆಗಳು ನನ್ನ ಮೇಲೆ ದಾಳಿ ಮಾಡದಂತೆ ಇರುವುದು ಹೇಗೆ?**

ಹೆಸರು ತಿಳಿಸಿಲ್ಲ, ಬೆಂಗಳೂರು.

ಧಾರ್ಮಿಕ ನಂಬಿಕೆಗಳು ಜೀವನದ ಆದರ್ಶಗಳಾಗಲಿ, ಗುರಿಯಾಗಲಿ ಅಥವಾ ನಮ್ಮ ವ್ಯಕ್ತಿತ್ವದ ಗುರುತುಗಳಾಗಲಿ ಆಗಬೇಕಾಗಿಲ್ಲ. ಅವುಗಳು ಇರುವುದು ನಮ್ಮ ಅಂತರಂಗದ ಸಮಾಧಾನವನ್ನು ಕಂಡುಕೊಳ್ಳಲು ಮಾತ್ರ. ನಂಬಿಕೆಗಳು ವೈಯುಕ್ತಿಕವಾದದ್ದು. ನಮ್ಮ ನಂಬಿಕೆಗಳು ಅನ್ಯಾಯ, ಶೋಷಣೆ, ಅಸಮಾನತೆಗಳಿಗೆ ಕಾರಣವಾಗದಂತೆ ಎಚ್ಚರವಹಿಸಬೇಕು. ಬೇರೆಯವರ ಒತ್ತಡಕ್ಕೊಳಗಾಗಿ ನಿಮಗಿಷ್ಟವಿರದ ಸಂಪ್ರದಾಯಗಳನ್ನು ಆಚರಿಸುವ ಮೂಲಕ ನಿಮ್ಮ ಸ್ವಂತಿಕೆಯನ್ನು ಕಳೆದುಕೊಂಡ ನೋವಿರಬೇಕಲ್ಲವೇ? ನಿಮ್ಮದೇ ನಂಬಿಕೆಗಳಿಗೆ ಅಂಟಿಕೊಂಡರೆ ಸಂಬಂಧಗಳನ್ನು ಕಳೆದುಕೊಳ್ಳುವ ಭಯವೂ ಕಾಡುತ್ತಿರಬೇಕಲ್ಲವೇ? ನಿಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವುದು ಎಷ್ಟು ಅಗತ್ಯವೋ ಕೌಟುಂಬಿಕ ಸ್ನೇಹ ಸಂಬಂಧಗಳನ್ನು ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಈ ಎಲ್ಲಾ ವಿಚಾರಗಳಿಗೆ ನಿಮ್ಮ ಪತಿಯ ಸಹಕಾರವೂ ಅಗತ್ಯವಲ್ಲವೇ? ಹಾಗಾಗಿ ನಿಮ್ಮ ನಂಬಿಕೆಗಳು, ಹಿಂಜರಿಕೆಗಳು, ಸ್ವಂತಿಕೆಯನ್ನು ಕಳೆದುಕೊಳ್ಳುವ ಭಯ ಮುಂತಾದ ಎಲ್ಲಾ ವಿಚಾರಗಳನ್ನು ಪತಿಯ ಜೊತೆ ಮುಕ್ತವಾಗಿ ಚರ್ಚೆಮಾಡಿ. ಇತರರ ನಂಬಿಕೆಗಳನ್ನು ಗೌರವಿಸುತ್ತಲೇ ನಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳದೆ ಬದುಕುವ ದಾರಿಗಳನ್ನು ಇಬ್ಬರೂ ಒಟ್ಟಾಗಿ ಹುಡುಕಿಕೊಳ್ಳಲು ಸಾಧ್ಯವಿದೆ. ಇತರರ ನಂಬಿಕೆಗಳು ನಿಮ್ಮ ಮೇಲೆ ದಾಳಿ ಮಾಡಬಾರದೆಂದು ನಿರೀಕ್ಷಿಸುವುದಾದರೆ ನಿಮ್ಮ ಹತಾಶೆ, ನೋವುಗಳನ್ನು ನಿಮ್ಮೊಳಗೇ ನಿಭಾಯಿಸುವುದನ್ನು ಕಲಿಯಬೇಕು. ಇದೊಂದು ರೀತಿಯ ಆಧ್ಯಾತ್ಮಿಕ ಸಾಧನೆ. ಒಬ್ಬ ಗುರು ಅಥವಾ ಮನೋಚಿಕಿತ್ಸಕನ ಸಹಾಯವನ್ನು ಪಡೆಯಬೇಕಾಗುತ್ತದೆ.

- **25ರ ಯುವಕ. ತೊದಲಿನ ಸಮಸ್ಯೆಯಿದೆ. ಪರಿಚಿತರೊಡನೆ, ಮಕ್ಕಳೊಡನೆ ಮಾತನಾಡುವಾಗ ಆಗಾಗ ತೊದಲು ಕಾಣಿಸಿಕೊಂಡರೂ ನಿರಾತಂಕವಾಗಿ ಮಾತನಾಡುತ್ತೇನೆ. ಅಪರಿಚಿತರೊಡನೆ ಅಥವಾ ನನಗಿಂತ ದೊಡ್ಡಮಟ್ಟದಲ್ಲಿರುವವರೊಡನೆ ಮಾತನಾಡುವಾಗ ಭಯ, ಹಿಂಜರಿಕೆ ಕಾಡುತ್ತದೆ. ಇದರಿಂದಾಗಿ ಎಷ್ಟೋ ಅವಕಾಶಗಳು ಕಳೆದು ಹೋಗಿವೆ. ಇದಕ್ಕೆ ಪರಿಹಾರವಿದೆಯೇ?**

ಹೆಸರು, ಊರು ತಿಳಿಸಿಲ್ಲ.

ತೊದಲಿನ ತೊಂದರೆಯ ಕುರಿತು ನಿಮಗಿರುವ ಸ್ಪಷ್ಟತೆಯು ನನಗೆ ಮೆಚ್ಚುಗೆಯಾಯಿತು. ನಿಮಗಿರುವುದು ತೊದಲಿನ ಸಮಸ್ಯೆಯಲ್ಲ. ನಿಮ್ಮನ್ನು ಕಾಡುತ್ತಿರುರವ ಭಯ, ಹಿಂಜರಿಕೆಗಳನ್ನು ಮುಚ್ಚಿಕೊಳ್ಳಲು ತೊದಲನ್ನು ರಕ್ಷಣಾಕವಚವಾಗಿ ಬಳಸುತ್ತಿದ್ದೀರಲ್ಲವೇ? ಹೀಗೆ ರಕ್ಷಿಸಿಕೊಳ್ಳುವ ಬದಲು ‘ನನ್ನ ಭಯ, ಹಿಂಜರಿಕೆಗಳು ನನ್ನ ಬಗೆಗೆ ಏನು ಹೇಳುತ್ತಿವೆ?’ ಎಂದು ಯೋಚಿಸಿ. ನಿನಗೆ ಯೋಗ್ಯತೆಯಿಲ್ಲ, ನೀನು ಜನರ ಜೊತೆ ಬೆರೆಯುವಾಗ ಅವಮಾನಿತನಾಗುತ್ತೀಯಾ, ನೀನು ಕೆಲವು ವಿಚಾರಗಳಲ್ಲಿ ದುರ್ಬಲ-ಹೀಗೆ ಬಾಲ್ಯದಿಂದ ಮನದಾಳದಲ್ಲಿ ಕೊರೆಯುತ್ತಿರುವ ಹಲವಾರು ಅಂಶಗಳು ನಿಮ್ಮ ಗಮನಕ್ಕೆ ಬರುತ್ತವೆ. ಅವುಗಳ ಹಿನ್ನೆಲೆ, ಸತ್ಯಾಸತ್ಯತೆಗಳನ್ನು ಪರೀಕ್ಷಿಸಿ. ನಿಮ್ಮ ಆತ್ಮಗೌರವ ಹೆಚ್ಚಿದರೆ ತೊದಲು ತನ್ನಿಂದತಾನೇ ಮಾಯವಾಗತ್ತದೆ. ಅಗತ್ಯವಿದ್ದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ.

- **ನೀವು ಕೊಡುವ ಸಲಹೆಗಳು ತುಂಬಾ ಚೆನ್ನಾಗಿವೆ. ಪ್ರತಿಯೊಬ್ಬರ ಮಾನಸಿಕ ಒತ್ತಡವನ್ನು ಸರಳವಾಗಿ ಬಗೆಹರಿಸುತ್ತೀರಿ. ತಾಳ್ಮೆ ಹಾಗೂ ಯೋಚನಾಶಕ್ತಿಯನ್ನು ಪಡೆಯುವ ಒಂದೆರೆಡು ಸಲಹೆಗಳನ್ನು ನೀಡುತ್ತೀರಾ?**

ಪ್ರಸಾದ್, ಊರಿನ ಹೆಸರಿಲ್ಲ.

ನಿಮ್ಮ ಪ್ರಶಂಸೆಗೆ ಧನ್ಯವಾದಗಳು. ಮಾನಸಿಕ ಸಮಸ್ಯೆಗಳು ದೈಹಿಕ ಸಮಸ್ಯೆಗಳಂತಲ್ಲ. ಹೊರಗೆ ಕಾಣಿಸುವ ಲಕ್ಷಣಗಳು ಒಂದೇ ರೀತಿಯಲ್ಲಿದ್ದರೂ ಮಾನಸಿಕ ಹೋರಾಟಗಳ ಮೂಲ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ತಾಳ್ಮೆ ಮತ್ತು ಯೋಚನಾಶಕ್ತಿ ಎಂದು ಹೇಳುವಾಗ ನಿಮ್ಮ ಮನದಾಳದಲ್ಲಿ ಕೆಲವು ವಿಚಾರಗಳಿರುತ್ತವೆ. ಅದೇನಿರಬಹುದು? ನೀವು ಯಾವ ವಿಚಾರಗಳಲ್ಲಿ ತಾಳ್ಮೆಯನ್ನು ಕಳೆದುಕೊಳ್ಳುತ್ತೀರಿ? ತಕ್ಷಣ ಕೋಪ ಬರುತ್ತದೆ ಎಂದೇ? ಇದರಿಂದ ಸ್ನೇಹ, ಸಂಬಂಧಗಳು ಹಾಳಾಗುತ್ತಿವೆಯೇ? ಯೋಚನೆ ಮಾಡದೆ ತಪ್ಪುನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರಿ ಎಂದೇ? ಹೀಗೆ ನಿಮ್ಮ ಮಾನಸಿಕ ತೊಳಲಾಟಗಳ ಕುರಿತು ಸ್ಪಷ್ಟವಾಗಿ ಹೇಳಿದಾಗ ಮಾತ್ರ ಸಹಾಯ ಮಾಡುವುದು ಸಾಧ್ಯ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ನಳಪಾಕ

ಅಣಬೆ ತವಾ ಗ್ರಿಲ್ ಗೋಲ್ಡನ್ ಫ್ರೈಡ್ ಬೇಬಿಕಾರ್ನ್

ನಿತ್ಯಾ ಅಶೋಕ್

ಅಣಬೆ ತವಾ ಗ್ರಿಲ್

ಬೇಕಾಗುವ ಸಾಮಗ್ರಿಗಳು: ಬಟನ್ ಅಣಬೆ - ಕಾಲು ಕೆ.ಜಿ., ಗಟ್ಟಿ ಮೊಸರು – 1 ಬಟ್ಟಲು, ಖಾರದಪುಡಿ – 1 ಚಮಚ, ಸಾಸಿವೆ ಪುಡಿ – 1 ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಕಾಳುಮೆಣಸಿನ ಪುಡಿ – ಅರ್ಧ ಚಮಚ

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ಮೊಸರು, ಖಾರದ ಪುಡಿ, ಉಪ್ಪು, ಮೆಣಸು ಮತ್ತು ಸಾಸಿವೆ ಪುಡಿ ಇವೆಲ್ಲವನ್ನು ಕಲೆಸಿಕೊಳ್ಳಿ. ಇದಕ್ಕೆ ಅಣಬೆಯನ್ನು ಹಾಕಿ ಚೆನ್ನಾಗಿ ಬೆರೆಸಿಕೊಳ್ಳಿ. ಈ ಮಿಶ್ರಣವನ್ನು 20 ನಿಮಿಷಗಳ ಕಾಲ ಹಾಗೇ ಇಡಿ. ನಂತರ ಅಣಬೆಗಳನ್ನು ಕಾವಲಿಯ ಮೇಲೆ ಇಟ್ಟು, ಅಣಬೆಯಲ್ಲಿರುವ ನೀರಿನ ಅಂಶ ಹೋಗುವ ತನಕ ಕಾಯಿಸಬೇಕು. ಈಗ ಅಣಬೆ ತವಾ ಗ್ರಿಲ್ ಸವಿಯಲು ಸಿದ್ಧ. ಇದು ಸಂಜೆ ವೇಳೆ ತಿನ್ನಲು ಚೆನ್ನಾಗಿರುತ್ತದೆ. ಬಿಸಿಯಾಗಿದ್ದಾಗಲೇ ತಿನ್ನುವುದು ಸೂಕ್ತ.



ಗೋಲ್ಡನ್ ಫ್ರೈಡ್ ಬೇಬಿಕಾರ್ನ್

ಬೇಕಾಗುವ ಸಾಮಗ್ರಿಗಳು: ಎಳೆ ಬೇಬಿಕಾರ್ನ್ – ಕಾಲು ಕೆ.ಜಿ., ಬಿಳಿ ಎಳ್ಳು – 1 ಚಮಚ, ಖಾರದ ಪುಡಿ – 1 ಚಮಚ, ಧನಿಯಾ ಪುಡಿ – ಅರ್ಧ ಚಮಚ, ಜೀರಿಗೆ ಪುಡಿ – ಅರ್ಧ ಚಮಚ, ಹಸಿಮೆಣಸಿನಕಾಯಿ ಪೇಸ್ಟ್ – ಅರ್ಧ ಚಮಚ, ಮೆಣಸಿನ ಪುಡಿ – ಅರ್ಧ ಚಮಚ, ಕಾರ್ನ್ ಫ್ಲೋರ್ – ಒಂದೂವರೆ ಚಮಚ, ಕಡಲೆಹಿಟ್ಟು – 1 ಕಪ್, ಅಕ್ಕಿಹಿಟ್ಟು – ಕಾಲು ಕಪ್, ಅರಿಸಿನ ಪುಡಿ – 1/4 ಚಮಚ, ಕೊತ್ತಂಬರಿ ಸೊಪ್ಪು – 1 ಚಮಚ (ಸಣ್ಣಗೆ ಹೆಚ್ಚಿದ್ದು), ಕರಿಬೇವು – 1 ಚಮಚ (ಸಣ್ಣಗೆ ಹೆಚ್ಚಿದ್ದು), ಉಪ್ಪು – ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ಬೇಬಿಕಾರ್ನ್, ಉಪ್ಪು, ಕಾರ್ನ್ ಫ್ಲೋರ್, ಖಾರದ ಪುಡಿ ಹಾಕಿ ಚೆನ್ನಾಗಿ ಕಲೆಸಿಕೊಂಡು ಪಕ್ಕಕ್ಕೆ ಇಡಿ. ಮತ್ತೊಂದು ಪಾತ್ರೆಯಲ್ಲಿ ಕಡಲೆಹಿಟ್ಟು, ಅಕ್ಕಿಹಿಟ್ಟು, ಧನಿಯಾಪುಡಿ, ಹಸಿಮೆಣಸಿನಕಾಯಿ ಪೇಸ್ಟ್, ಖಾರದ ಪುಡಿ, ಬಿಳಿಎಳ್ಳು, ಜೀರಿಗೆ ಪುಡಿ, ಕಾಳುಮೆಣಸಿನ ಪುಡಿ, ಕೊತ್ತಂಬರಿ ಸೊಪ್ಪು, ಕರಿಬೇವು, ಉಪ್ಪು, ಅರಿಸಿನ ಪುಡಿ ಎಲ್ಲವನ್ನೂ ಸೇರಿಸಿ ಬಜ್ಜಿ ಹಿಟ್ಟಿನಂತೆ ತಯಾರಿಸಿಕೊಳ್ಳಿ. ಒಂದು ಬಾಣಲೆಯಲ್ಲಿ ಎಣ್ಣೆ ಹಾಕಿ ಬಿಸಿಯಾದ ಮೇಲೆ ಒಂದೊಂದೇ ಬೇಬಿ ಕಾರ್ನ್‌ಗಳನ್ನು ಹಿಟ್ಟಿನ ಮಿಶ್ರಣದಲ್ಲಿ ಮುಳುಗಿಸಿ ಎಣ್ಣೆಯಲ್ಲಿ ಬಣ್ಣ ಬದಲಾಗುವವರೆಗೂ ಸಣ್ಣ ಉರಿಯಲ್ಲಿ ಕರಿಯಿರಿ. ಈಗ ನಿಮ್ಮ ಮುಂದೆ ಬಿಸಿ ಬಿಸಿ ಫ್ರೈಡ್ ಬೇಬಿಕಾರ್ನ್ ತಿನ್ನಲು ಸಿದ್ಧ.



ಚೀಸ್ ಸ್ಟಫ್ಡ್ ಮಶ್ರೂಮ್



ಬೇಕಾಗುವ ಸಾಮಗ್ರಿಗಳು: ಅಣಬೆ – ಕಾಲು ಕೆ.ಜಿ., ಈರುಳ್ಳಿ – 1 ಬಟ್ಟಲು (ಸಣ್ಣಗೆ ಹೆಚ್ಚಿದ್ದು), ಶುಂಠಿ – 1 ಚಮಚ (ಸಣ್ಣಗೆ ಹೆಚ್ಚಿದ್ದು), ಬೆಳ್ಳುಳ್ಳಿ – 1 ಚಮಚ ಸಣ್ಣಗೆ ಹೆಚ್ಚಿದ್ದು, ಬೆಳ್ಳುಳ್ಳಿ – 1 ಚಮಚ ಸಣ್ಣಗೆ ಹೆಚ್ಚಿದ್ದು, ಹಸಿಮೆಣಸಿನ ಕಾಯಿ – 1 ಚಮಚ (ಹೆಚ್ಚಿದ್ದು), ಟೊಮೆಟೊ – 1 ಕಪ್ (ಹೆಚ್ಚಿದ್ದು), ಅಣಬೆ ಕಾಂಡ – ಸಣ್ಣಗೆ ಹೆಚ್ಚಿದ್ದು, ದೊಣ್ಣೆ ಮೆಣಸಿನ ಕಾಯಿ – ಅರ್ಧ ಕಪ್ ಸಣ್ಣಗೆ ಹೆಚ್ಚಿದ್ದು, ಜೀರಿಗೆ ಪುಡಿ – 1/4 ಚಮಚ, ಅರಿಸಿನ ಪುಡಿ – 1/4 ಚಮಚ, ಚೀಸ್ – 1 ಬಟ್ಟಲು, ಉಪ್ಪು – ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಒಂದು ಬಾಣಲೆಯಲ್ಲಿ ಬೆಣ್ಣೆಯ ಜೊತೆಗೆ ಎಣ್ಣೆಯನ್ನು ಹಾಕಿ ಅದರಲ್ಲಿ ಬೆಳ್ಳುಳ್ಳಿ, ಶುಂಠಿ, ಹಸಿ ಮೆಣಸಿನಕಾಯಿ ಹಾಕಿ 30 ಸೆಕೆಂಡ್‌ಗಳ ಕಾಲ ಬಾಡಿಸಿಕೊಳ್ಳಬೇಕು. ನಂತರ ಅದರಲ್ಲಿ ಸಣ್ಣಗೆ ಹೆಚ್ಚಿರುವ ಈರುಳ್ಳಿ, ಟೊಮೆಟೊ, ದೊಣ್ಣೆ ಮೆಣಸಿನ ಕಾಯಿ, ಅಣಬೆಯ ಕಾಂಡಗಳನ್ನು ಹಾಕಿ 2 ನಿಮಿಷಗಳ ಕಾಲ ಬಾಡಿಸಿಕೊಳ್ಳಬೇಕು. ಅದಾದ ನಂತರ ಅರಿಸಿನ ಪುಡಿ, ಜೀರಿಗೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಬೆರೆಸಿಕೊಳ್ಳಬೇಕು. ಈಗ ಗ್ಯಾಸ್ ಆರಿಸಿ. ಕಾಲು ಭಾಗ ತುರಿದಿರುವ ಚೀಸ್ ಹಾಕಿ ಬೆರೆಸಿಕೊಳ್ಳಬೇಕು. ಈ ಮಿಶ್ರಣವನ್ನು ಅಣಬೆಯ ಒಳ ಭಾಗದಲ್ಲಿ ತುಂಬಿಸಿ ಅದರ ಮೇಲೆ ಚೀಸ್ ಹಾಕಿ ತವಾದ ಮೇಲೆ ಅಣಬೆ ಬೇಯುವ ತನಕ ಸಣ್ಣ ಉರಿಯಲ್ಲಿ ಹುರಿದುಕೊಳ್ಳಬೇಕು. ಹುರಿದ ಮೇಲೆ ಈ ಚೀಸ್ ಸ್ಟಫ್ಡ್ ಮಶ್ರೂಮ್ ಸವಿಯಲು ಸಿದ್ಧ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸಾವು ಬಂದಾಗ ಇರುವುದೆಲ್ಲವನ್ನೂ ಬಿಟ್ಟು ತೆರಳಲೇಬೇಕು. ಹಾಗಾಗಿ, ಅದಕ್ಕೆ ಮೊದಲೇ ಎಷ್ಟು ಸಾಧ್ಯವೋ ಅಷ್ಟನ್ನೆಲ್ಲ ಕೊಟ್ಟುಬಿಡಿ.

-ರೂಮಿ

ರಾಜೀವ್ ಹಂತಕರ ಕ್ಷಮಾದಾನ ಇನ್ನಾದರೂ ತೀರ್ಮಾನ ಕೈಗೊಳ್ಳಿ

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆಯಾಗಿ 30 ವರ್ಷಗಳೇ ಕಳೆದಿವೆ. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಏಳು ಮಂದಿಗೂ ಕ್ಷಮಾದಾನ ನೀಡಬೇಕೆಂಬ ತಮಿಳುನಾಡು ಸರ್ಕಾರದ ಮನವಿಗೆ ರಾಜ್ಯಪಾಲರು ಇನ್ನೂ ಸಮ್ಮತಿಯನ್ನು ವ್ಯಕ್ತಪಡಿಸಿಲ್ಲ. 30 ವರ್ಷಗಳಿಂದ ಜೈಲಿನಲ್ಲಿರುವವರ ಕ್ಷಮಾದಾನ ಅರ್ಜಿಯು ಕೋರ್ಟ್, ರಾಷ್ಟ್ರಪತಿ ಕಚೇರಿ ಮತ್ತು ರಾಜ್ಯಪಾಲರ ಕಚೇರಿಯ ಮಧ್ಯೆ ಅಲೆದಾಡುತ್ತಲೇ ದೀರ್ಘ ಅವಧಿ ದಾಟಿ ಹೋಗಿದೆ. ಹತ್ಯೆಯ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದ ನಳಿನಿ, ಆಕೆಯ ಗಂಡ ಮುರುಗನ್, ಪೇರ್‌ಅರಿವಳನ್ ಮತ್ತು ಇತರ ನಾಲ್ವರಿಗೆ ಕ್ಷಮಾದಾನ ನೀಡಬೇಕೆಂದು ರಾಜ್ಯಪಾಲರಿಗೆ ತಮಿಳುನಾಡು ಸರ್ಕಾರ ಶಿಫಾರಸು ಮಾಡಿ ಎರಡೂವರೆ ವರ್ಷಗಳು ದಾಟಿವೆ. ಇವರಲ್ಲಿ ಪೇರ್‌ಅರಿವಳನ್ ಸಲ್ಲಿಸಿದ ಕ್ಷಮಾದಾನ ಅರ್ಜಿಯು ಸುಪ್ರೀಂ ಕೋರ್ಟ್‌ನ ಮುಂದೆ ಈ ವರ್ಷದ ಆರಂಭದಲ್ಲಿ ವಿಚಾರಣೆಗೆ ಬಂದಿತ್ತು. ಕ್ಷಮಾದಾನದ ವಿಷಯದಲ್ಲಿ ರಾಜ್ಯಪಾಲರು ನಿರ್ಧಾರ ಪ್ರಕಟಿಸಲು ತೀರಾ ವಿಳಂಬ ಮಾಡುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳೂ ಅಭಿಪ್ರಾಯಪಟ್ಟಿದ್ದರು. ರಾಜ್ಯಪಾಲರು ಈ ವಿಷಯದಲ್ಲಿ ನಿರ್ಧಾರವೊಂದನ್ನು ಕೈಗೊಳ್ಳಬೇಕೆಂದು ಸುಪ್ರೀಂ ಕೋರ್ಟ್ 2018ರಲ್ಲೇ ಸೂಚಿಸಿತ್ತು. ಆದರೆ ಕೇಂದ್ರ ಸರ್ಕಾರಕ್ಕೆ ಮುಜುಗರವಾಗುತ್ತದೆ ಎಂಬ ಕಾರಣದಿಂದಲೋ ಏನೋ ರಾಜ್ಯಪಾಲರು ಇನ್ನೂ ನಿರ್ಧಾರ ಕೈಗೊಂಡಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯಪಾಲರ ಕಚೇರಿಯು ಅರ್ಜಿ ಕುರಿತ ತೀರ್ಮಾನವನ್ನು ಮುಂದೂಡುತ್ತಲೇ ಇವೆ. 2015ರಲ್ಲಿ ಕ್ಷಮಾದಾನ ಕುರಿತ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಾಗ, 'ಕ್ಷಮಾದಾನ ನೀಡುವ ಅಧಿಕಾರ ರಾಷ್ಟ್ರಪತಿ ಮತ್ತು ರಾಜ್ಯಪಾಲ ಇಬ್ಬರಿಗೂ ಇದೆ. ಇವರಲ್ಲಿ ಯಾರಾದರೂ ಒಬ್ಬರು ತೀರ್ಮಾನ ತೆಗೆದುಕೊಂಡರೂ ಆಗುತ್ತದೆ' ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು. ಆದರೆ ಈ ಸಂಬಂಧ ಹಲವೆಡೆ, ಹಲವು ರೀತಿಯ ಕಾನೂನು ತಕರಾರುಗಳನ್ನು ಎತ್ತಲಾಯಿತು. ಜನವರಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ನೀಡಿದ ಉತ್ತರದಲ್ಲಿ 'ಕ್ಷಮಾದಾನದ ಕುರಿತು ರಾಜ್ಯಪಾಲರು ನಾಲ್ಕೇ ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದಿತ್ತು. ಆದರೆ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಗಳ ಕ್ಷಮಾದಾನದ ಅರ್ಜಿ ಇತ್ಯರ್ಥ ಆಗಲೇ ಇಲ್ಲ.



ರಾಜೀವ್ ಗಾಂಧಿಯವರ ಕುಟುಂಬದ ಸದಸ್ಯರೇ ಅಪರಾಧಿಗಳನ್ನು ಕ್ಷಮಿಸಿದ್ದಾರೆ. ಹಾಗಿರುವಾಗ ರಾಜ್ಯಪಾಲರು ಕ್ಷಮೆಯ ಕುರಿತ ತೀರ್ಮಾನವನ್ನು ಮುಂದೂಡುವುದರಲ್ಲಿ ಅರ್ಥವಿಲ್ಲ

ಕಾನೂನಿನ ಅಡ್ಡಿ ಆತಂಕಗಳನ್ನು ಮುಂದೊಡ್ಡಿ ಈ ಅಪರಾಧಿಗಳ ಜೈಲುವಾಸದ ಅವಧಿಯನ್ನು ಮುಂದೂಡುವುದರಲ್ಲಿ ಅರ್ಥವಿಲ್ಲ. ಕಳೆದ 30 ವರ್ಷಗಳಿಂದ ಅಪರಾಧಿಗಳು ಜೈಲಿನಲ್ಲೇ ಇರುವುದರಿಂದ ಅವರು ಎಸಗಿದ ಕೃತ್ಯಕ್ಕೆ ತಕ್ಕ ಶಿಕ್ಷೆಯಾಗಿದೆ. ಮಾತ್ರವಲ್ಲ, ಈ ಸುದೀರ್ಘ ಅವಧಿಯಲ್ಲಿ ಅವರೆಲ್ಲ ಬಹಳಷ್ಟು ಮಾನಸಿಕ ಕ್ಷೋಭೆಯನ್ನೂ ಅನುಭವಿಸಿದ್ದಾರೆ. ಕ್ಷಮಾದಾನ ನೀಡಲು ಕೇಂದ್ರ ಸರ್ಕಾರಕ್ಕೆ ಮನಸ್ಸಿಲ್ಲ ಎನ್ನುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿದೆ. ಆ ಕಾರಣದಿಂದಲೇ ರಾಜ್ಯಪಾಲರು ಅರ್ಜಿಯ ವಿಲೇವಾರಿಗೆ ಸಂಬಂಧಿಸಿದಂತೆ ವಿಳಂಬ ಧೋರಣೆ ಅನುಸರಿಸುತ್ತಿರಬಹುದು ಎಂಬ ಅನುಮಾನ ಮೂಡುತ್ತದೆ. ಈಗ ರಾಷ್ಟ್ರಪತಿಯವರು ಈ ಅರ್ಜಿಯನ್ನು ಕೈಗೆತ್ತಿಕೊಂಡು ರಾಜ್ಯ ಸರ್ಕಾರದ ಶಿಫಾರಸನ್ನು ಒಪ್ಪಿಕೊಳ್ಳಬೇಕು. ತಮಗಿರುವ ಸಂವಿಧಾನದತ್ತ ವಿವೇಚನಾ ಅಧಿಕಾರ ಬಳಸಿ ಅಪರಾಧಿಗಳಿಗೆ ಬಿಡುಗಡೆಯ ಭಾಗ್ಯ ಒದಗಿಸಬೇಕು. ಸ್ವತಃ ರಾಜೀವ್ ಗಾಂಧಿಯವರ ಕುಟುಂಬದ ಸದಸ್ಯರೇ ಆ ಅಪರಾಧಿಗಳನ್ನು ಕ್ಷಮಿಸಿದ್ದಾರೆ. ಹಾಗಿರುವಾಗ ರಾಜ್ಯಪಾಲರು ಕ್ಷಮೆಯ ಕುರಿತ ತೀರ್ಮಾನವನ್ನು ಮುಂದೂಡುವುದರಲ್ಲಿ ಅರ್ಥವಿಲ್ಲ. ನ್ಯಾಯದಾನದ ಉದ್ದೇಶ ಪ್ರತೀಕಾರ ತೀರಿಸುವುದಲ್ಲ. ನ್ಯಾಯದಾನಕ್ಕೊಂದು ಮಾನವೀಯ ಮುಖವೂ ಇದೆ. ಶಿಕ್ಷೆ ವಿಧಿಸುವುದು ಮನುಷ್ಯನ ಮಾನಸಿಕ ಪರಿವರ್ತನೆಗೇ ಹೊರತು ಆತನನ್ನು ಮಾನಸಿಕವಾಗಿ ಕುಗ್ಗಿಸುವುದಕ್ಕಲ್ಲ. ಈ ರೀತಿಯ ವಿಳಂಬದಿಂದಾಗಿ ಸರ್ಕಾರಕ್ಕಷ್ಟೇ ಕೆಟ್ಟ ಹೆಸರು ಬರುವುದಿಲ್ಲ, ಒಟ್ಟು ಸಮಾಜದ ಮಾನವೀಯ ಮತ್ತು ನೈತಿಕ ನಿಲುವಿನ ಸ್ವಭಾವಕ್ಕೂ ಕಳಂಕ ಮೆತ್ತಿದಂತಾಗುತ್ತದೆ.

ದಿನದ ಟ್ವೀಟ್

ಕೌಶಲದ ಕೊರತೆ



ಮಾವಿನ ಹಣ್ಣು ಆ್ಯಂಟಿಆಕ್ಸಿಡೆಂಟ್‌ಗಳು, ಫೈಬರ್ ಮತ್ತು ವಿಟಮಿನ್ 'ಸಿ'ಯಿಂದ ಸಮೃದ್ಧವಾಗಿದೆ. ಆದರೆ ನೀವು ಇದೇ ಪೋಷಕಾಂಶಗಳನ್ನು ಪಡೆಯಲು ಗ್ರೀನ್ ಟೀ, ಓಟ್ಸ್, ಮಾತ್ರೆಗಳ ಮೊರೆ ಹೋಗುವ ಸಾಧ್ಯತೆಯೇ ಹೆಚ್ಚು. ಇವು ಮಾವಿನ ಹಣ್ಣಿಗಿಂತ ಉತ್ತಮ ಎಂಬ ಕಾರಣಕ್ಕಲ್ಲ. ಏಕೆಂದರೆ, ಲಾಭಕ್ಕಾಗಿ ಉತ್ಪನ್ನಗಳನ್ನು ಹೇಗೆ ಪ್ಯಾಕ್ ಮಾಡಿ, ಬೆಲೆ ನಿಗದಿಗೊಳಿಸಿ ಮಾರಾಟ ಮಾಡಬೇಕು ಎಂಬುದು ಆಹಾರ ಉದ್ಯಮಕ್ಕೆ ತಿಳಿದಿದೆ. ಈ 'ಕೌಶಲ'ದ ಕೊರತೆಯೇ ರೈತರಿಗೆ ಇರುವುದು.

ರುಜುತಾ ದಿವೇಕರ್, ಪೌಷ್ಟಿಕಾಂಶ ತಜ್ಞೆ

25 ವರ್ಷಗಳ ಹಿಂದೆ

ಬುಧವಾರ, 29-5-1996

● **ವಿಶ್ವಾಸಮತಕ್ಕೆ ಮುನ್ನ 13 ದಿನಗಳ ಬಿಜೆಪಿ ನೇತೃತ್ವದ ಸರ್ಕಾರ ಪತನ**

ನವದೆಹಲಿ, ಮೇ 28 (ಪಿಟಿಐ)– ಲೋಕಸಭೆಯಲ್ಲಿ ವಿಶ್ವಾಸ ನಿರ್ಣಯದ ಮೇಲೆ ಮತದಾನಕ್ಕೆ ಮೊದಲೇ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ರಾಜೀನಾಮೆ ನೀಡುವುದರೊಂದಿಗೆ, 13 ದಿನಗಳ ಹಿಂದೆ ಅಧಿಕಾರಕ್ಕೆ ಬಂದಿದ್ದ ಬಿಜೆಪಿ ನೇತೃತ್ವದ ಮೊದಲ ಸರ್ಕಾರ ಪತನವಾಯಿತು.

ವಿಶ್ವಾಸಮತದ ಮೇಲೆ ಎರಡು ದಿನ ನಡೆದ ಚರ್ಚೆಗೆ ನೀಡಿದ ಉತ್ತರದ ಕೊನೆಯಲ್ಲಿ ವಾಜಪೇಯಿ ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸಿ, ರಾಷ್ಟ್ರಪತಿ ಭವನಕ್ಕೆ ತೆರಳಿ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರಿಗೆ ತಮ್ಮ 13 ದಿನಗಳ ಹಳೆಯ ಬಿಜೆಪಿ-ಶಿವಸೇನೆ ಸಂಪುಟದ ರಾಜೀನಾಮೆ ಸಲ್ಲಿಸಿದರು.

ಇದಕ್ಕೂ ಮುನ್ನ ಇಂದು ಮಧ್ಯಾಹ್ನ ಸದನದಲ್ಲಿ ಚರ್ಚೆ ಮುಕ್ತಾಯಗೊಳಿಸುತ್ತಾ ಮಾತನಾಡಿದ ವಾಜಪೇಯಿ, 'ನಾನು ಹಿಂದೆ ಪ್ರತಿಪಕ್ಷದಲ್ಲಿದ್ದೆ. ಈಗ ಪ್ರಧಾನಿಯಾಗಿದ್ದೇನೆ. ಕೆಲವೇ ಹೊತ್ತಿನಲ್ಲಿ ಈ ಹುದ್ದೆಯಲ್ಲಿ ಇರಲಿಕ್ಕಿಲ್ಲ' ಎನ್ನುತ್ತ ಭಾಷಣದ ಕೊನೆಯಲ್ಲಿ 'ನಮಗೆ ಜನಾದೇಶ ಇದ್ದರೂ ಸದನದಲ್ಲಿ ಸಂಖ್ಯಾಬಲದ ಬಹುಮತ ಇಲ್ಲದ ಕಾರಣ ರಾಷ್ಟ್ರಪತಿ ಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸುತ್ತಿದ್ದೇನೆ' ಎಂದು ಪ್ರಕಟಿಸಿದರು.

● **ಪ್ರಧಾನಿಯಾಗಿ ದೇವೇಗೌಡ ಶನಿವಾರ ಪ್ರಮಾಣವಚನ**

ನವದೆಹಲಿ, ಮೇ 28– ಸಂಯುಕ್ತ ರಂಗದ ಸಂಸದೀಯ ನಾಯಕ ಎಚ್.ಡಿ.ದೇವೇಗೌಡ ಅವರನ್ನು ರಾಷ್ಟ್ರಪತಿ ಅವರು ಸರ್ಕಾರ ರಚಿಸಲು ಇಂದು ರಾತ್ರಿ ಆಮಂತ್ರಿಸಿದರು. ದೇವೇಗೌಡ ಅವರು ಶನಿವಾರ 12.30ಕ್ಕೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುವರು. ಇದರೊಂದಿಗೆ ಕರ್ನಾಟಕದಿಂದ ಮೊದಲ ಪ್ರಧಾನಿ ಆಗುತ್ತಿರುವ ಕೀರ್ತಿ ಇವರದಾಯಿತು.

50 ವರ್ಷಗಳ ಹಿಂದೆ

ಶನಿವಾರ, 29-5-1971

● **ಸಿಗರೇಟ್, ಪೆಟ್ರೋಲ್, ಬಟ್ಟೆ, ಬ್ರೆಡ್ ತುಟ್ಟಿ: ಭೋಗ ವಸ್ತುಗಳ ಮೇಲೆ ಹೆಚ್ಚು ಹೊರೆ**

ನವದೆಹಲಿ, ಮೇ 28– ಕೇಂದ್ರ ವಿತ್ತ ಮಂತ್ರಿ ಶ್ರೀ ಯಶವಂತರಾವ್ ಚವಾಣ್ ಅವರು ಇಂದು ಸಂಸತ್ತಿನಲ್ಲಿ ಮಂಡಿಸಿದ 1971–72ನೇ ಸಾಲಿನ ಮುಂಗಡಪತ್ರದಲ್ಲಿ 177 ಕೋಟಿ ರೂ.ಗಳ ಹೆಚ್ಚುವರಿ ತೆರಿಗೆಯನ್ನು ವಿಧಿಸಲಾಗಿದೆ.

ಇದರ ಪರಿಣಾಮವಾಗಿ ಸಿಗರೇಟು, ಪೆಟ್ರೋಲ್, ಸಾಬೂನು, ಬಟ್ಟೆ, ಸಿದ್ಧಪಡಿಸಿದ ಉಡುಪು, ಬ್ರೆಡ್, ಡಬ್ಬಿಯಲ್ಲಿ ತುಂಬಿದ ಆಹಾರ ಮೊದಲಾದವುಗಳಿಗೆ ಜನಸಾಮಾನ್ಯರು ಇನ್ನು ಮುಂದೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

ಚವಾಣ್‌ರ ಈ ನೂತನ ತೆರಿಗೆಗಳ ಪರಿಣಾಮವಾಗಿ, ಮುಂಗಡಪತ್ರದಲ್ಲಿ ಸೂಚಿಸಲಾಗಿದ್ದ 397 ಕೋಟಿ ರೂಪಾಯಿಗಳಷ್ಟು ಖೋತಾ 220 ಕೋಟಿ ರೂಪಾಯಿಗಳಿಗೆ ಇಳಿದಿದೆ.

● **ಬ್ಯಾಂಕುಗಳ ರಾಷ್ಟ್ರೀಕರಣ ಫಲಿತಾಂಶ ಅತೃಪ್ತಿಕರ**

ನವದೆಹಲಿ, ಮೇ 28– ಬ್ಯಾಂಕುಗಳ ರಾಷ್ಟ್ರೀಕರಣದಿಂದ ಬಂದಿರುವ ಫಲಿತಾಂಶಗಳ ಬಗ್ಗೆ ತಮಗೆ 'ಸಂಪೂರ್ಣ ತೃಪ್ತಿ' ಉಂಟಾಗಿಲ್ಲ ಎಂದು ಲೋಕಸಭೆಯಲ್ಲಿ ಹಣಕಾಸಿನ ಸಚಿವ ವೈ.ಬಿ. ಚವಾಣರು ಇಂದು ತಿಳಿಸಿದರು.

ಬಿಭೂತಿ ಮಿಶ್ರರ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಿದ್ದ ಚವಾಣರು, 'ತೃಪ್ತಿಕರ ಫಲಿತಾಂಶಕ್ಕೆ ಸತತ ಯತ್ನ ಅಗತ್ಯ' ಎಂದು ಹೇಳಿದರು.

ಆಸ್ಪತ್ರೆಗಳಲ್ಲಿ ನಡೆಯುವ ದುರ್ಘಟನೆಗಳಿಗೆ ಪ್ರಾಥಮಿಕ ಹೊಣೆಯನ್ನು ಹೊರಬೇಕಿರುವುದು ರಾಜ್ಯ ಸರ್ಕಾರಗಳು

ಕೋವಿಡ್: ರಾಜ್ಯಗಳ ಉತ್ತರದಾಯಿತ್ವ ಏನು?



ಸೂರ್ಯ–ನಮಸ್ಕಾರ

ಎ.ಸೂರ್ಯ ಪ್ರಕಾಶ್

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಆಗಿದೆ. ಹೀಗಿದ್ದರೂ, ದೆಹಲಿ ಮತ್ತು ಹಲವು ರಾಜ್ಯಗಳ ಆಸ್ಪತ್ರೆಗಳಲ್ಲಿ ಕಳೆದ ಕೆಲವು ವಾರಗಳಲ್ಲಿ ಆಮ್ಲಜನಕದ ಕೊರತೆಯಿಂದಾಗಿ, ಹಾಸಿಗೆಗಳು ಇಲ್ಲದೆ, ಕೋವಿಡ್ ಚಿಕಿತ್ಸೆಗೆ ಅಗತ್ಯವಾದ ಔಷಧಗಳು ಸಿಗದೆ ರೋಗಿಗಳು ಮೃತಪಟ್ಟಿದ್ದು ದೇಶದ ಅಂತಃಸಾಕ್ಷಿಯನ್ನು ಕಲಕಿದೆ. ಸಿಬ್ಬಂದಿಯ ಅಕ್ಷಮ್ಯ ನಿರ್ಲಕ್ಷ್ಯದಿಂದಾಗಿ ಕೋವಿಡ್ ರೋಗಿಗಳಿಗೆ ಆಮ್ಲಜನಕ ಸರಿಯಾಗಿ ಸಿಗದೆ ಅವರು ಮೃತಪಟ್ಟ ಭಯಾನಕ ಘಟನೆಗಳು ದೇಶದ ಬೇರೆ ಬೇರೆ ಕಡೆಗಳಿಂದ ವರದಿಯಾಗಿವೆ.

ಕರ್ನಾಟಕದ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಮೇ 2 ಮತ್ತು 3ರಂದು ಆಮ್ಲಜನಕ ಸಿಗದ ಕಾರಣ ಒಟ್ಟು 23 ಜನ ಪ್ರಾಣ ಕಳೆದುಕೊಂಡರು. ಈ ದುರಂತದ ಬಗ್ಗೆ ತನಿಖೆ ನಡೆಸಲು ಕರ್ನಾಟಕ ಹೈಕೋರ್ಟ್ ನೇಮಿಸಿದ್ದ ಮೂವರು ಸದಸ್ಯರ ಸಮಿತಿಯು ಜಿಲ್ಲಾ ಆಡಳಿತದ ಮೇಲೆ, ಆಸ್ಪತ್ರೆಯ ಅಧಿಕಾರಿಗಳ ಮೇಲೆ ದೋಷ ಹೊರಿಸಿದೆ. ಇವರು ಬಿಕ್ಕಟ್ಟಿನ ಮೇಲೆ ನಿಗಾ ಇರಿಸದೆ, ಬೇರೆ ಬೇರೆ ಹಂತಗಳಲ್ಲಿ ಉಡಾಫೆಯ ಧೋರಣೆ ಪ್ರದರ್ಶಿಸಿದ ಕಾರಣದಿಂದಾಗಿ ಹೀಗಾಗಿದೆ ಎಂದು ಹೇಳಿದೆ.

ಆಮ್ಲಜನಕ ಲಭ್ಯವಾಗದ ಕಾರಣ ಗೋವಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ 80ಕ್ಕೂ ಹೆಚ್ಚು ರೋಗಿಗಳು ಜೀವ ಕಳೆದುಕೊಂಡಿದ್ದಾರೆ ಎಂಬ ವರದಿಗಳಿವೆ. ಈ ಎಲ್ಲ ಸಾವುಗಳಿಗೆ ಕಾರಣ ಆಮ್ಲಜನಕದ ಕೊರತೆ ಅಲ್ಲ ಎಂದು ಆಸ್ಪತ್ರೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಈ ಸಂಸ್ಥೆಯಲ್ಲಿನ ಆಮ್ಲಜನಕ ಪೂರೈಕೆ ವ್ಯವಸ್ಥೆ ತೀರಾ ಹಳತಾಗಿತ್ತು, ಅಗತ್ಯ ಪ್ರಮಾಣದಲ್ಲಿ ಆಮ್ಲಜನಕ ಸಂಗ್ರಹಕ್ಕೆ ಕೂಡ ವ್ಯವಸ್ಥೆ ಇರಲಿಲ್ಲ ಎಂಬ ಮಾತುಗಳಿವೆ. ಈ ಪ್ರಕರಣದಲ್ಲಿ, ಬಾಂಬೆ ಹೈಕೋರ್ಟ್‌ನ ಗೋವಾ ಪೀಠವು ನಾಗರಿಕರ ಪರವಾಗಿ ಮಧ್ಯಪ್ರವೇಶ ಮಾಡಬೇಕಾಯಿತು.

ಮಹಾರಾಷ್ಟ್ರ ಮತ್ತು ಹರಿಯಾಣದ ಹಲವು ಸಣ್ಣ ನಗರಗಳಿಂದ, ಆಸ್ಪತ್ರೆಗಳಲ್ಲಿ ರೋಗಿಗಳು ಇದೇ ರೀತಿ ಮೃತಪಟ್ಟ ಬಗ್ಗೆ ವರದಿಗಳು ಬಂದಿವೆ.

ಆಮ್ಲಜನಕದ ಕೊರತೆಯಿಂದ ರೋಗಿಗಳು ಮೃತಪಟ್ಟ ಘಟನೆಗಳು ದೆಹಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಉತ್ತರಾಖಂಡ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಗೋವಾ ರಾಜ್ಯಗಳಿಂದ ವರದಿಯಾಗಿವೆ. 14 ರಾಜ್ಯಗಳಲ್ಲಿ, ಅಂದರೆ, ದೇಶದ ಅರ್ಧದಷ್ಟು ರಾಜ್ಯಗಳಲ್ಲಿ ಹೀಗಾಗಿದೆ. ಈ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವುದು ಬಿಜೆಪಿ, ಕಾಂಗ್ರೆಸ್, ಎಎಪಿ, ಶಿವಸೇನೆ, ವೈಎಸ್‌ಆರ್ ಕಾಂಗ್ರೆಸ್, ಟಿಆರ್‌ಎಸ್, ಡಿಎಂಕೆ ಪಕ್ಷಗಳು. ಮಹಾರಾಷ್ಟ್ರ ಸರ್ಕಾರವನ್ನು ನಡೆಸುತ್ತಿರುವುದು ಶಿವಸೇನಾ, ಕಾಂಗ್ರೆಸ್, ಎನ್‌ಸಿಪಿ, ಸಮಾಜವಾದಿ ಪಕ್ಷ ಸೇರಿ ಒಟ್ಟು ಎಂಟು ಪಕ್ಷಗಳು ಇರುವ ಮೈತ್ರಿಕೂಟ. ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಿರುವ ಡಿಎಂಕೆ ನೇತೃತ್ವದ ಮೈತ್ರಿಕೂಟವು ಕಾಂಗ್ರೆಸ್, ಸಿಪಿಐ, ಸಿಪಿಎಂ, ಎಂಡಿಎಂಕೆ ಹಾಗೂ ಇತರ ಕೆಲವು ಪಕ್ಷಗಳನ್ನು ಒಳಗೊಂಡಿದೆ. ಹಾಗಾಗಿ, ದೇಶದ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ಈ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿವೆ.

ಈಗ ಎಲ್ಲರೂ ಕೆಸರೆರಚಾಟದಲ್ಲಿ ತೊಡಗಿದ್ದಾರೆ. ಆದರೆ, ಸಂವಿಧಾನದ ಪ್ರಕಾರ ಆಸ್ಪತ್ರೆಗಳು ಹಾಗೂ ಅಲ್ಲಿ ನಡೆಯುವ ದುರ್ಘಟನೆಗಳಿಗೆ ಪ್ರಾಥಮಿಕ ಹೊಣೆಯನ್ನು ಹೊರಬೇಕಿರುವುದು ರಾಜ್ಯ ಸರ್ಕಾರಗಳು ಎಂಬುದನ್ನು ಗಮನಿಸಬೇಕು. ಕೇಂದ್ರ ಹಾಗೂ ರಾಜ್ಯಗಳ ನಡುವಿನ ಅಧಿಕಾರ ಹಂಚಿಕೆಯು ಸಂವಿಧಾನದ ಏಳನೆಯ ಪರಿಚ್ಛೇದದಲ್ಲಿ ಉಲ್ಲೇಖವಾಗಿದೆ. ರಾಜ್ಯಗಳ ಹಾಗೂ ಕೇಂದ್ರದ ಅಧಿಕಾರ ವ್ಯಾಪ್ತಿಯಲ್ಲಿ ಯಾವ ವಿಷಯಗಳು ಬರುತ್ತವೆ ಎಂಬುದನ್ನು ಅದರಲ್ಲಿ ಹೇಳಲಾಗಿದೆ.

ಈ ಪರಿಚ್ಛೇದದಲ್ಲಿನ ರಾಜ್ಯಗಳ ಪಟ್ಟಿಯಲ್ಲಿನ ಆರನೆಯ ಅಂಶವು, 'ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಆಸ್ಪತ್ರೆಗಳು ಮತ್ತು ಔಷಧಾಲಯಗಳು' ಎಂದು ಹೇಳುತ್ತದೆ. ಅಂದರೆ, ಸಾರ್ವಜನಿಕರ ಆರೋಗ್ಯ, ಆಸ್ಪತ್ರೆಗಳು ಹಾಗೂ ಔಷಧಾಲಯಗಳ ನಿರ್ವಹಣೆಯು ಸಂಪೂರ್ಣವಾಗಿ ರಾಜ್ಯಗಳ ಹೊಣೆಗಾರಿಕೆ. ರಾಜ್ಯಗಳು ಇನ್ನೊಬ್ಬರ ಕಡೆ ಬೆರಳು ತೋರಿಸಿ ತಮ್ಮ ಹೊಣೆಯಿಂದ ಜಾರಿಕೊಳ್ಳುವಂತೆ ಇಲ್ಲ. ಒಬ್ಬರಿಂದ ಒಬ್ಬರಿಗೆ ಅಂಟಿಕೊಳ್ಳುವ ರೋಗದ ಹರಡುವಿಕೆಯನ್ನು ತಡೆಯುವ ಹೊಣೆ ರಾಜ್ಯಗಳ ಮೇಲೆಯೂ ಇದೆ (ಸಮವರ್ತಿ ಪಟ್ಟಿಯ 29ನೇ ಅಂಶ). ಹಾಗಾಗಿ, ಈ ವಿಚಾರಗಳಲ್ಲಿ ತಾನು ನಿಸ್ಸಹಾಯಕ, ತನ್ನಲ್ಲಿ ಅಧಿಕಾರ ಇಲ್ಲ ಎಂದು ಯಾವ ರಾಜ್ಯವೂ ಇಂದು ಹೇಳುವಂತಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಕಳೆದ ತಿಂಗಳಿನಿಂದ ಆರೋಪಗಳನ್ನು ತಪ್ಪಾಗಿ, ಉದ್ದೇಶಪೂರ್ವಕವಾಗಿ ಹೊರಿಸಲಾಗುತ್ತಿದೆ. ಆದರೆ, ಈ ಬಿಕ್ಕಟ್ಟಿನಿಂದ ಹೊರಬಂದ ನಂತರ ನಾವು, ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ ಇತರರೆಲ್ಲರೂ ಏನು ಮಾಡಿದರು ಅಥವಾ ಏನು ಮಾಡಲಿಲ್ಲ ಎಂಬ ಬಗ್ಗೆ ಅವಲೋಕನ ನಡೆಸಬೇಕು. ಕೇಂದ್ರ ಸರ್ಕಾರ, ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ಕೇಂದ್ರ ಆರೋಗ್ಯ ಕಾರ್ಯದರ್ಶಿ ಮಾತ್ರವೇ ಅಲ್ಲದೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ರಾಜ್ಯಗಳ ಆರೋಗ್ಯ ಸಚಿವರು, ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ರಾಜ್ಯಗಳ ಆರೋಗ್ಯ ಕಾರ್ಯದರ್ಶಿಗಳು, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು, ಎಲ್ಲ ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಆಡಳಿತ ನೋಡಿಕೊಳ್ಳುವವರು ಏನು ಮಾಡಿದರು ಎಂಬುದನ್ನು ಗಮನಿಸಬೇಕು. ಕೋವಿಡ್ ರೋಗಿಗಳಿಗೆ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ಉಂಟಾಗುತ್ತಿವೆ ಎಂಬುದು ಇಡೀ ವಿಶ್ವಕ್ಕೆ ಗೊತ್ತಿತ್ತು. ಖಾಸಗಿ ಆಸ್ಪತ್ರೆಗಳ ಆಡಳಿತಗಾರರು ಈಗ ಎಲ್ಲರ ಮೇಲೆಯೂ ದೋಷ ಹೊರಿಸುತ್ತ ಒಂದು ಟಿ.ವಿ. ಸ್ಟುಡಿಯೊದಿಂದ ಇನ್ನೊಂದು ಟಿ.ವಿ. ಸ್ಟುಡಿಯೊಗೆ ಓಡಾಡುತ್ತಿದ್ದಾರೆ. ಅವರು ಆಮ್ಲಜನಕದ ಸಂಗ್ರಹ ಹಾಗೂ ಪೂರೈಕೆ ವ್ಯವಸ್ಥೆಯನ್ನು ಒಂದು ವರ್ಷದಲ್ಲಿ ಉತ್ತಮಪಡಿಸಿದರೇ?

ಆದರೆ, ಈ ಮೊದಲೇ ಹೇಳಿದಂತೆ ಹೀಗೆ ಕೇಳುವ ಸಮಯ ಇದಲ್ಲ. ದಿನಪತ್ರಿಕೆಯೊಂದಕ್ಕೆ ಬರೆದಿರುವ ಲೇಖನವೊಂದರಲ್ಲಿ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಹೇಳಿರುವಂತೆ, 'ನಾವು ಈ ಕಠಿಣ ಸಮರದಲ್ಲಿ ಒಟ್ಟಾಗಿ ಹೋರಾಡಬೇಕಿದೆ. ಎಲ್ಲ ಕೈಗಳೂ ಕೆಲಸಕ್ಕೆ ಸನ್ನದ್ಧವಾಗಿ ಇರಬೇಕು'.

ಕೇಂದ್ರ ಸರ್ಕಾರವು ಈ ವಿಕೋಪ ಎದುರಿಸಲು ಮೊದಲೇ ಸನ್ನದ್ಧವಾಗಿ ಇರಬೇಕಿತ್ತು ಎಂಬುದು ನಿಜ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇದನ್ನು ಒಂದೇ ಮಾತಿನಲ್ಲಿ, 'ಕೋವಿಡ್‌ನ ಮೊದಲ ಅಲೆಯ ನಂತರ ಸರ್ಕಾರ, ಆಡಳಿತ ಮತ್ತು ಸಾರ್ವಜನಿಕರು ಮೈಮರೆತಿದ್ದು ಈ ಪರಿಸ್ಥಿತಿಯನ್ನು ತಂದಿದೆ' ಎಂದು ಹೇಳಿದ್ದಾರೆ. ಅದೇನೇ ಇದ್ದರೂ, ಇದು ಇನ್ನೊಬ್ಬರ ಮೇಲೆ ಬೆರಳು ತೋರಿಸಬೇಕಾದ ಸಮಯ ಅಲ್ಲ. 'ಕೋವಿಡ್ ನಮ್ಮಿಂದ ದೂರ ಇರಬೇಕು ಎಂದಾದಲ್ಲಿ ನಾವು ಸಕಾರಾತ್ಮಕವಾಗಿರಬೇಕು' ಎಂದು ಭಾಗವತ್ ಅವರು ಹೇಳಿದ್ದಾರೆ. ಜನ ಸಕಾರಾತ್ಮಕ ಚಿಂತನೆಗಳನ್ನು ಹೊಂದಿರಬೇಕು ಎಂಬುದನ್ನು ಒತ್ತಿಹೇಳಲು ಭಾಗವತ್ ಅವರು, ಎರಡನೆಯ ವಿಶ್ವಯುದ್ಧದ ಸಂದರ್ಭದ ಪರಿಸ್ಥಿತಿಯೊಂದನ್ನು ವಿವರಿಸಿದ್ದಾರೆ. ಇಂಗ್ಲೆಂಡ್ ಸೋಲಿನತ್ತ ಸಾಗುತ್ತಿದೆ ಎಂದು ಅನ್ನಿಸುತ್ತಿದ್ದಾಗಲೂ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರ ಮೇಜಿನ ಮೇಲೆ, 'ಇಲ್ಲಿ ನಿರಾಶಾವಾದಕ್ಕೆ ಜಾಗವಿಲ್ಲ. ಸೋಲಿನ ಸಾಧ್ಯತೆಗಳಲ್ಲಿ ನಮಗೆ ಆಸಕ್ತಿ ಇಲ್ಲ. ಅಂಥದ್ದೊಂದು ಸಾಧ್ಯತೆ ಅಸ್ತಿತ್ವದಲ್ಲೇ ಇಲ್ಲ' ಎಂಬ ಮಾತನ್ನು ಬರೆಯಲಾಗಿತ್ತು. ಇದನ್ನು ಉಲ್ಲೇಖಿಸಿ ಭಾಗವತ್ ಅವರು, ಭಾರತವು ಕೋವಿಡ್ ಕಾಯಿಲೆಯನ್ನು ಸೋಲಿಸಬೇಕು ಎಂದಾದರೆ ಈ ಬಗೆಯ ಧೈರ್ಯ ಬೇಕು ಎಂದಿದ್ದಾರೆ.

ಭಾಗವತ್ ಹೇಳಿದ್ದು ಸರಿ. ಕೋವಿಡ್ ಕಾಯಿಲೆ ಅಥವಾ ಪ್ರೀತಿಪಾತ್ರರನ್ನು ಕಳೆದುಕೊಂಡ ನೋವಿನಿಂದ ಯಾವ ಕುಟುಂಬವೂ ಹೊರತಾಗಿಲ್ಲ. ಹೀಗಿದ್ದರೂ ಈ ಪೀಡೆಯನ್ನು ನಿವಾರಿಸಲು ನಾವು ಅಸಾಧಾರಣ ಧೈರ್ಯ, ಸಕಾರಾತ್ಮಕತೆ, ದೃಢ ನಿಶ್ಚಯ ಪ್ರದರ್ಶಿಸಬೇಕಿದೆ.



ಚುರುಮುರಿ



ಶ್ವಾನೋಪಾಖ್ಯಾನ!

● ಎಸ್.ಬಿ.ರಂಗನಾಥ್

'ಪತ್ರಿಕೆ ನೋಡಿದೆಯೇನಯ್ಯಾ?', ಬೆಳಿಗ್ಗೆ ಹಾಲಿನ ಬೂತ್ ಬಳಿ ದೋಸ್ತನನ್ನ ಕೇಳಿದೆ.

'ನೋಡಿದೆನಪ್ಪ, ನಮ್ಗೆಲ್ಲಾ ಹೊಗೆ ಹಾಕಿಸೋ ಕೊರೊನಾವನ್ನು ನಮ್ಮ ನಾಯಕರು ರಸ್ತೇಲಿ ಹೊಗೆ ಹಾಕಿ ಓಡಿಸ್ತಿರೋ ಸುದ್ದಿ' ಎಂದ.

'ಅದಲ್ಲಯ್ಯಾ'.

'ವಿಮಾನದಲ್ಲಿ ಹಾರಾಡ್ತಾ ದೇವಸ್ಥಾನದ ಮೇಲೆ ತಾಳಿ ಕಟ್ಟಿದ ವರ ಮಹಾಶಯನ ವಿಷಯವೇ?'

'ಊ ಹ್ಞೂಂ'.

'ಹಾಗಾದ್ರೆ ಬ್ಲ್ಯಾಕ್ ಫಂಗಸ್‌ಗೆ ವ್ಯಾಕ್ಸಿನ್ ಕಂಡುಹಿಡಿದಿರೋ ಕನ್ನಡಿಗ ಶ್ರೀಕಾಂತ್ ಪೈಯವರ ಸುದ್ದಿಯೇ?'

'ಅಲ್ಲ ಕಣೋ, ವಾಸನೆಯಿಂದ್ಲೇ ಕೊರೊನಾ ಪತ್ತೆ ಮಾಡೋ ಶ್ವಾನಗಳ ವಿಚಾರ. ಲಂಡನ್ನಿನಲ್ಲಿ ಸಂಶೋಧನೆ ಮಾಡಿದಾರೆ. ಜನರ ಮಾಸ್ಕ್, ಕಾಲುಚೀಲ, ಟಿ-ಶರ್ಟ್‌ಗಳಿಂದ್ಲೇ ಕೊರೊನಾ ಪತ್ತೆ ಮಾಡುತ್ತವೆಯಂತೆ. ಎರಡು ನಾಯಿಗಳು ಅರ್ಧಗಂಟೇಲಿ ಮುನ್ನೂರು ಮಂದೀನ ಪರೀಕ್ಷಿಸುತ್ತವಂತೆ'.

'ಭಾಳಾ ಒಳ್ಳೇದಾಯ್ತಲ್ಲೋ. ಇದುವರೆಗೆ ಕಳ್ಳರನ್ನು, ಕೊಲೆಗಡುಕರನ್ನು ಹಿಡಿಯೋ, ಚಂದ್ರಲೋಕಕ್ಕೆ ಹೋಗೋ ನಾಯಿಗಳನ್ನು ನೋಡಿದ್ದೊ. ಈಗ ಅವು ಈ ಭಯಂಕರ ಪಿಡುಗನ್ನೂ ಪತ್ತೆ ಮಾಡುತ್ತವೆಂದ್ರೆ ರಿಯಲೀ ಗ್ರೇಟ್... ನಮ್ಮ ನಮೋಗೆ ಗೊತ್ತಾದ್ರೆ ಬೋರಿಸ್ ಜಾನ್ಸನ್‌ಗೆ ಹಾಟ್‌ಲೈನಲ್ಲಿ ಮಾತಾಡಿ ನಮ್ಮ ದೇಶಕ್ಕೆ ಅಂಥ ನಾಯಿಗಳನ್ನ ಕೂಡ್ಲೇ ತರಿಸ್ತಾರೆ ಬಿಡು... ಆಗ ನನ್ನ ಸ್ಪೆಷಲ್ ಡಾಗೀಗೂ ಆ ಟ್ರೈನಿಂಗ್ ಕೊಡಿಸ್ತೀನಪ್ಪಾ'.

'ಏನಯ್ಯ ನಿನ್ನ ನಾಯಿಯ ಸ್ಪೆಷಾಲಿಟಿ?'

'ಅದು ನನ್ನ ಶತ್ರುಗಳಾರು, ಮಿತ್ರರಾರೂಂತ ದೂರದಿಂದ್ಲೇ ಗೊತ್ತು ಹಿಡಿಯುತ್ತೆ. ಲಗ್ನಪತ್ರಿಕೆ ಕೊಡೋಕೆ, ಊಟಕ್ಕೆ ಹೇಳೋಕೆ ಬರೋರಿಗೆ ಏನೂ ಮಾಡಲ್ಲ. ಸಾಲ ವಸೂಲಿಗೆ ಬರೋರನ್ನ ಗುರ್ತಿಸಿ ಅಟ್ಟಿಸಿಕೊಂಡು ಹೋಗಿ ಕಚ್ಚುತ್ತೆ'.

'ಅದನ್ನು ದಯವಿಟ್ಟು ನಂಗೆ ಒಂದು ವಾರದಮಟ್ಟಿಗೆ ಕೊಟ್ಟಿರಯ್ಯಾ, ಪ್ಲೀಸ್'.

'ಆರು ತಿಂಗಳ ನಂತರ ನೋಡೋಣ. ಅಲ್ಲೀವರೆಗೆ ಅದಕ್ಕೆ ಅಡ್ವಾನ್ಸ್ಡ್ ಬುಕಿಂಗ್ ಆಗಿದೆ'.

ನಾನು ಕುಸಿದು ಕುಳಿತೆ!

ಸಂಗತ

ಬಗೆ ಬಗೆ ರೂಪಾಂತರ, ಮೌಢ್ಯಾವತಾರ

ಕೋವಿಡ್ ಗಂಭೀರ ಸ್ಥಿತಿ ತಲುಪಿರುವುದರಲ್ಲಿ ಮೂಢನಂಬಿಕೆಗಳ ಪಾತ್ರವೂ ದೊಡ್ಡದಿದೆ

● ಡಾ. ಕೆ.ಆರ್.ಶ್ರೀಧರ್

ನಂಬಿಕೆಗಳು ಮಾನವನ ದೈನಂದಿನ ಜೀವನದ ಬುನಾದಿ. ದಿನನಿತ್ಯದ ವ್ಯವಹಾರಗಳಲ್ಲಿ, ಧರ್ಮಾಚರಣೆಗಳಲ್ಲಿ ನಾವು ಕಾಣುವ ನಂಬಿಕೆಗಳು ನಮ್ಮ ವಿಶ್ವಾಸ ಹೆಚ್ಚಿಸಲು, ಧೈರ್ಯ ಕೊಡಲು ಮತ್ತು ವ್ಯವಹಾರವನ್ನು ಸುಗಮವಾಗಿ ಸಾಗಿಸಲು ಪೂರಕ. ಆದರೆ ಆರೋಗ್ಯದ ವಿಷಯದಲ್ಲಿ ಇರುವ ನಂಬಿಕೆಗಳಿಗೆ ವೈಜ್ಞಾನಿಕ ತಳಹದಿ ಇಲ್ಲದಿದ್ದಾಗ ಅವು ಮೂಢನಂಬಿಕೆಗಳಾಗಿ ವ್ಯಕ್ತಿಯ ಆರೋಗ್ಯಕ್ಕೆ ಕುತ್ತು ತರಬಹುದು. ಕೆಲವೊಮ್ಮೆ ಪ್ರಾಣಹಾನಿಯೂ ಆಗಬಹುದು.


ವೈರಾಣು ಸೋಂಕಿನ ಬಗ್ಗೆ ಇದ್ದ ಮೂಢನಂಬಿಕೆಗಳಿಗೆ ಒಂದು ಉದಾಹರಣೆಯನ್ನು ತಿಳಿಯೋಣ. ಒಂದು ಕಾಲದಲ್ಲಿ, ಸಿಡುಬು ರೋಗವು ದೇವಿಯ ಶಾಪದಿಂದ ಉಂಟಾಗುತ್ತದೆ ಎಂದು ಜನ ತಪ್ಪಾಗಿ ಭಾವಿಸಿದ್ದರು. ಮರದ ತುಂಡಿನಲ್ಲಿ ದೇವಿಯ ಪ್ರತಿಮೆಯನ್ನು ಮಾಡಿ, ಅರಿಸಿನ ಕುಂಕುಮ ಲೇಪಿಸಿ, ಪೂಜಿಸಿ ಊರ ಹೊರಗೆ ಸಾಗಿಸಿದರೆ ದೇವಿ ಊರು ಬಿಟ್ಟು ಹೋಗುತ್ತಾಳೆ, ಅದರಿಂದ ಆ ಊರಿನ ಜನರು ಸಿಡುಬು ರೋಗದಿಂದ ಮುಕ್ತರಾಗುತ್ತಾರೆ ಎಂದುಕೊಂಡಿದ್ದರು. ಬಳಿಕ, ಸಿಡುಬು ಕಾಯಿಲೆಗೆ ಒಂದು ವೈರಾಣುವಿನ ಸೋಂಕೇ ಕಾರಣ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿ, ಅದನ್ನು ನಿವಾರಿಸಲು ಲಸಿಕೆಯನ್ನು ಕಂಡುಹಿಡಿದರು. ಇಂದು ಇಡೀ ವಿಶ್ವವೇ ಸಿಡುಬು ರೋಗದಿಂದ ಮುಕ್ತವಾಗಿದೆ.

ಕುಷ್ಠರೋಗದ ಬಗ್ಗೆಯೂ ಮೂಢನಂಬಿಕೆ ಇತ್ತು. ನಾನು ಸುಮಾರು ಹತ್ತು ವರ್ಷದವನಿದ್ದಾಗ ದೇವಾಲಯದಲ್ಲಿ ನಡೆದ ಪೂಜಾ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. ಬಹಳ ಜನ ಸೇರಿದ್ದರು. ಜ್ಯೋತಿಷಿಯೊಬ್ಬರ ಮುಂದೆ ಹೇಳಿಕೆ ನಡೆಯುತ್ತಿತ್ತು. ಆಗ ಒಬ್ಬ ಕುಷ್ಠರೋಗಿಯನ್ನು ಕರೆತಂದು ಜ್ಯೋತಿಷಿಯ ಮುಂದೆ ನಿಲ್ಲಿಸಿದರು. ಆ ರೋಗಿಗೆ ಮೇಲಿನಿಂದ ತೀರ್ಥ ಹಾಕಿದ ಅವರು, 'ಇವನು 14 ದಿನ ಇಲ್ಲಿ ಊಟ ಮಾಡಿದವರ ಎಂಜಲು ಬಾಳೆ ಎತ್ತಬೇಕು. ಆಗ ಶಾಪಮುಕ್ತನಾಗಿ ಕುಷ್ಠರೋಗ ನಿವಾರಣೆಯಾಗುತ್ತದೆ' ಎಂದರು. ಅದನ್ನು ಕೇಳಿದ ನನಗೆ ಇದೆಂಥಾ ಮೂಢನಂಬಿಕೆ ಎನಿಸಿತ್ತು.

ಈಗ ಕೊರೊನಾ ಸೋಂಕಿನ ಕತೆಯೂ ಇದೇ ಆಗಿದೆ. ಕೋವಿಡ್‌ಗೆ ವಿಜ್ಞಾನಿಗಳು ಔಷಧವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿದ್ದಾಗಲೇ ಹಲವಾರು ಸುಳ್ಳು ಸುದ್ದಿಗಳು ಜಾಲತಾಣಗಳ ಮೂಲಕ ಹರಡಲು ಪ್ರಾರಂಭವಾದವು. ಜನ ಭಯಭೀತರಾದರು. ಸೋಂಕು ಹರಡದಂತೆ ಇರಲು ಪಾಲಿಸಬೇಕಾದ ವೈಜ್ಞಾನಿಕ ಸಲಹೆಗಳನ್ನು ಮರೆತರು. ಕೊರೊನಾ ಎಂಬುದು ಏನು ಎಂದು ಗೊತ್ತಿಲ್ಲದವರೂ ಕೊರೊನಾ ಸೋಂಕಿನಿಂದ ಮುಕ್ತರಾಗುವುದು ಹೇಗೆ ಎಂದು ಸಲಹೆಗಳನ್ನು ನೀಡಲು ಪ್ರಾರಂಭಿಸಿದರು. ಮುಗ್ಧ ಜನರು ಇವುಗಳ ಸತ್ಯಾಸತ್ಯತೆಯನ್ನು ಅರಿಯದೆ ಮೌಢ್ಯಾಚರಣೆಗಳಿಗೆ ಮಾರುಹೋದರು.

ವಿಜ್ಞಾನಿಗಳ ಅವಿರತ ಶ್ರಮದಿಂದ ಕೋವಿಡ್‌ಗೆ ಲಸಿಕೆ ಕಂಡುಹಿಡಿಯಲಾಯಿತು. ಆದರೆ ಆರಂಭದಲ್ಲಿ ಆದದ್ದೇನು? ಲಸಿಕೆಯು ಹಲವಾರು ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬ ಸುಳ್ಳು ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಇದರಿಂದ ಹೆಚ್ಚಿನ ಜನ ಲಸಿಕೆ ತೆಗೆದುಕೊಳ್ಳಲಿಲ್ಲ.

ಮೊನ್ನೆ ಯಾವುದೋ ಮಠದ ಕುದುರೆಯನ್ನು ಆ ಹಳ್ಳಿಯಲ್ಲಿ ಮಧ್ಯರಾತ್ರಿ ಊರ ತುಂಬಾ ಓಡಾಡಲು ಬಿಟ್ಟರೆ ಕೊರೊನಾ ಓಡಿ ಹೋಗುತ್ತದೆಂದು ಭಾವಿಸಿ ಹಾಗೆ ಮಾಡಿದರು. ಏಕೋಏನೋ ಕುದುರೆ ಅಸುನೀಗಿತು. ಅದರಿಂದ ಜನ ಇನ್ನಷ್ಟು ಭಯಭೀತರಾಗಿದ್ದಾರೆಂದು ಪತ್ರಿಕೆಯೊಂದರಲ್ಲಿ ಸುದ್ದಿ ಪ್ರಕಟವಾಗಿತ್ತು. ಇನ್ನೊಂದು ಉದಾಹರಣೆಯಲ್ಲಿ, ಮೂವತ್ತು ಹೋತಗಳನ್ನು ಊರ ದೇವರಿಗೆ ಬಲಿ ಕೊಟ್ಟರೆ ಆ ಹಳ್ಳಿ ಕೊರೊನಾ ಮುಕ್ತವಾಗುತ್ತದೆಂದು ಜ್ಯೋತಿಷಿಯೊಬ್ಬರು ಹೇಳಿದ್ದನ್ನು ನಂಬಿ ಅಷ್ಟೂ ಹೋತಗಳನ್ನು ಬಲಿ ಕೊಡಲು ಆ ಊರ ಜನ ಕಟ್ಟಿ ಹಾಕಿದ್ದಾರೆಂಬ ಸುದ್ದಿ ಓದಿದೆ. ಬೆಳಗಾವಿಯ ಶಾಸಕರೊಬ್ಬರು ಜ್ಯೋತಿಷಿ ಹೇಳಿದರೆಂದು ಬೀದಿ ಬೀದಿಗಳಲ್ಲಿ ಹೋಮ ಮಾಡಿಸಿ ಕೊರೊನಾ ಓಡಿಸುತ್ತಿದ್ದಾರಂತೆ! ಅದೇ ರೀತಿ ಬಳ್ಳಾರಿಯಲ್ಲಿ ಜ್ಯೋತಿಷಿಗಳ ಸಲಹೆಯಂತೆ ಟನ್‌ಗಟ್ಟಲೇ ಅನ್ನವನ್ನು ದೇವರಿಗೆ ನೈವೇದ್ಯ ಮಾಡಿ ಊರ ಸುತ್ತಲೂ ಚೆಲ್ಲಿದ್ದು ವರದಿಯಾಗಿತ್ತು.



ಸುಮಾರು ಹದಿನೈದು ದಿನಗಳ ಹಿಂದೆ ನಮ್ಮಲ್ಲಿಗೆ ಬಂದ ಒಬ್ಬ ರೋಗಿಗೆ, 'ಕೋವಿಡ್ ಲಸಿಕೆ ತೆಗೆದುಕೊಂಡಿದ್ದೀರಾ?' ಎಂದು ಕೇಳಿದೆ. ಅದಕ್ಕೆ ಅವರು 'ಸಾರ್, ಮೊನ್ನೆ ಮೂಗಿಗೆ ಲಿಂಬೆ ಹಣ್ಣಿನ ರಸ ಬಿಟ್ಟುಕೊಂಡಿದ್ದೇನೆ, ಹಾಗಾಗಿ ಲಸಿಕೆಯ ಅಗತ್ಯವಿಲ್ಲ' ಎಂದು ಹೇಳಿದ್ದರು. ಮೊನ್ನೆ ಅವರ ಮಗ ಬಂದು, 'ಸಾರ್, ನನ್ನ ತಂದೆ ಕೋವಿಡ್ ಆಸ್ಪತ್ರೇಲಿದ್ದಾರೆ. ಅವರಿಗೆ ನೀವು ಕೊಟ್ಟ ಔಷಧ ಕೊಡಬಹುದಾ' ಎಂದು ಕೇಳಿದ.

ಇನ್ನೊಂದು ಕಡೆ, ಕೊರೊನಾವನ್ನು ಓಡಿಸಬೇಕೆಂದು ಊರ ಜನರೆಲ್ಲ ಗುಂಪುಗೂಡಿ, ಜ್ಯೋತಿಷಿ ಹೇಳಿದಂತೆ 'ಅಮ್ಮನ ಜಾತ್ರೆ' ನಡೆಸುತ್ತಿದ್ದ ದೃಶ್ಯವನ್ನು ಟಿ.ವಿ. ಚಾನೆಲ್‌ನಲ್ಲಿ ನೋಡಿದೆ.

ಕೋವಿಡ್ ಗಂಭೀರ ಸ್ಥಿತಿ ತಲುಪಿರುವುದರಲ್ಲಿ ಇಂತಹ ಮೂಢನಂಬಿಕೆಗಳ ಪಾತ್ರವೂ ದೊಡ್ಡದಿದೆ. ಹೀಗಾಗಿ ಕೋವಿಡ್ ಮಾರ್ಗಸೂಚಿ ಪಾಲನೆ ಅನುಸರಿಸುವುದು ಅತ್ಯವಶ್ಯಕ. ಮೌಢ್ಯಾಚರಣೆಗಳಿಗೆ ಮರುಳಾಗಿ ಲಸಿಕೆ ತೆಗೆದುಕೊಳ್ಳಲು ಹಿಂಜರಿಯಬಾರದು. ಸರಿಯಾಗಿ ಮಾಸ್ಕ್ ಧರಿಸಿ. ಅಂತರ ಕಾಪಾಡಿಕೊಳ್ಳಿ. ಸ್ವಚ್ಛತೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಕೊಡಿ. ಧೈರ್ಯ ಮತ್ತು ಸಮಾಧಾನದಿಂದಿರಿ. ಆಗ ಕೊರೊನಾವನ್ನು ಹಾಗೆಯೇ ಮೌಢ್ಯಾವತಾರವನ್ನೂ ಹೊಡೆದೋಡಿಸಲು ಸಾಧ್ಯ.

ಲೇಖಕ: ಹಿರಿಯ ಮನೋವೈದ್ಯ, ಶಿವಮೊಗ್ಗ

ವಾಚಕರ ವಾಣಿ

ಸಮಯೋಚಿತ ಚಿಕಿತ್ಸೆಯೇ ಮದ್ದು

ಕೋವಿಡ್– 19 ಎರಡನೇ ಅಲೆಯಲ್ಲಿ ಜನರನ್ನು ಹೆಚ್ಚಾಗಿ ಬಾಧಿಸುತ್ತಿರುವುದು ಕೊರೊನಾ ವೈರಸ್‌ನ ರೂಪಾಂತರಿ ತಳಿ. ಇದು ಅತ್ಯಂತ ಅಪಾಯಕಾರಿಯಾಗಿದ್ದು, ಹೆಚ್ಚು ಸಾವು-ನೋವುಗಳಿಗೆ ಕಾರಣವಾಗಿದೆ. ಜನರು ಸೋಂಕಿನ ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸುತ್ತಿದ್ದಾರೆ. ಮನೆಯಲ್ಲಿಯೇ ನೋವು ನಿವಾರಕ ಮಾತ್ರೆಗಳನ್ನು ತೆಗೆದುಕೊಂಡು ಅಮೂಲ್ಯ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಆರೋಗ್ಯ ಗಂಭೀರ ಹಂತ ತಲುಪಿದಾಗ ಆಸ್ಪತ್ರೆಗೆ ಬರುತ್ತಿದ್ದಾರೆ.

ಗ್ರಾಮೀಣ ಭಾಗದಲ್ಲಿ ಸ್ಥಳೀಯ ವೈದ್ಯರು ಇಂತಹ ಸೋಂಕಿತರನ್ನು ತಕ್ಷಣಕ್ಕೆ ಮೇಲ್ದರ್ಜೆಯ ಆಸ್ಪತ್ರೆ ಅಥವಾ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕಳಿಸದೆ ತಮ್ಮ ಹಂತದಲ್ಲಿಯೇ ಲಭ್ಯವಿರುವ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಸೋಂಕಿನ ಆರಂಭಿಕ ಹಂತದಲ್ಲಿಯೇ ಸ್ಟೆರಾಯ್ಡ್‌ಗಳನ್ನು ನೀಡುತ್ತಿರುವುದರಿಂದ ಆರಂಭದಲ್ಲಿ ರೋಗಿಯು ಗುಣಮುಖನಾದಂತೆ ಕಂಡರೂ ನಂತರದ ದಿನಗಳಲ್ಲಿ ಸೋಂಕು ಉಲ್ಬಣಗೊಳ್ಳುತ್ತಿದೆ. ಇದರಿಂದ ಸೋಂಕಿತರು ಬಹಳ ದಿನಗಳವರೆಗೆ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯಬೇಕಾದ ಹಾಗೂ ಲಕ್ಷಗಟ್ಟಲೇ ಹಣವನ್ನು ವ್ಯಯಿಸಬೇಕಾದ ಅನಿವಾರ್ಯ ಸ್ಥಿತಿ ಬರುತ್ತಿದೆ. ಹೀಗಾಗಿ ಕೋವಿಡ್ ಸೋಂಕಿಗೆ ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಪಡೆಯುವ ಬಗ್ಗೆ ಆರೋಗ್ಯ ಕಾರ್ಯಕರ್ತರು, ವೈದ್ಯಾಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಯು ಜನರಲ್ಲಿ ಸೂಕ್ತ ಅರಿವು ಮೂಡಿಸಬೇಕಾಗಿದೆ.

ಡಾ. ಎಸ್.ಎಂ.ತಿಮ್ಮಾಪೂರ, ವಿಜಯಪುರ

ಇದು ಲಾಕ್‌ಡೌನ್ ಮನರಂಜನೆ!

ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ಗಮನಿಸಿದಾಗ, ರಾಜಕೀಯ ಇಷ್ಟು ಕೀಳುಮಟ್ಟಕ್ಕೆ ತಲುಪಿತೇ ಎನಿಸುತ್ತದೆ. ಸರ್ಕಾರದ ಭಾಗವಾಗಿರುವ ಒಬ್ಬ ಹಾಲಿ ಸಚಿವರನ್ನು, ಅದೇ ಪಕ್ಷದ ಹಾಲಿ ಶಾಸಕರೊಬ್ಬರು 'ಅವನೊಬ್ಬ ಕಳ್ಳ, 420. ಆತ ಭೂ ಹಗರಣದಲ್ಲಿ ಜೈಲಿಗೆ ಹೋಗಬೇಕಿತ್ತು, ನಮ್ಮ ಪಕ್ಷಕ್ಕೆ ಬಂದು ಬಚಾವ್ ಆಗಿದ್ದಾನೆ' ಎನ್ನುತ್ತಾರೆ. ಮತ್ತೊಬ್ಬ ಶಾಸಕರು 'ಇವನು ಪಕ್ಷದಿಂದ ಪಕ್ಷಕ್ಕೆ ಹಾರುವ ಕಪ್ಪೆ' ಎಂದು ಜರೆಯುತ್ತಾರೆ. ಹೀಗೆಲ್ಲಾ ಬಾಯಿಗೆ ಬಂದಂತೆ ಮಾತನಾಡುವ ಇವರಿಗೆ, ತಾವು ಹೀಗಳೆಯುತ್ತಿರುವವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಅವರ ಹಿನ್ನೆಲೆ ಗೊತ್ತಿರಲಿಲ್ಲವೇ? ಅಧಿಕಾರಕ್ಕಾಗಿ ನಡೆಯುತ್ತಿರುವ ಈ ಎಲ್ಲಾ ಆಟಗಳು ಸಾರ್ವಜನಿಕರಿಗಾಗಿ ನಡೆಯುತ್ತಿರುವ 'ಲಾಕ್‌ಡೌನ್ ಮನರಂಜನೆ'.

ಬೂಕನಕೆರೆ ವಿಜೇಂದ್ರ, ಮೈಸೂರು

ಹೈನುಗಾರಿಕೆಗೆ ಕೊಡಲಿ ಪೆಟ್ಟು ಬೀಳದಿರಲಿ

ರೈತರಿಂದ ಹಾಲು ಖರೀದಿಯನ್ನು ವಾರಕ್ಕೆ ಎರಡು ದಿನ ಸ್ಥಗಿತಗೊಳಿಸಲು ಕೆಎಂಎಫ್ ಚಿಂತನೆ ನಡೆಸಿರುವುದನ್ನು ತಿಳಿದು ದುಃಖವಾಯಿತು. ಲಾಕ್‌ಡೌನ್‌ನಿಂದಾಗಿ ಮೊದಲೇ ಕೆಲಸವಿಲ್ಲದೆ ಜನರು ಪರಿತಪಿಸುತ್ತಿರುವಾಗ, ಇರುವ ಕೆಲವೇ ಉದ್ಯೋಗಾವಕಾಶಗಳಲ್ಲಿ ಒಂದಾದ ಹೈನುಗಾರಿಕೆಗೆ ಕೊಡಲಿ ಏಟು ಹಾಕುವುದು ಸರಿಯಲ್ಲ.

ಸ್ವತಃ ಕೆಎಂಎಫ್ ಸೂಚಿಸಿರುವಂತೆ, ಸರ್ಕಾರ ತನ್ನ ಕ್ಷೀರಭಾಗ್ಯ, ಬಿಸಿಯೂಟದಂತಹ ಯೋಜನೆಗಳಿಗೆ ಮೀಸಲಿಟ್ಟ ಹಣದಿಂದ ಹಾಲಿನ ಪುಡಿಯನ್ನು ಖರೀದಿಸಿ ಎಲ್ಲಾ ಮಕ್ಕಳಿಗೆ ಹಾಗೂ ಪಡೆಯಲಿಚ್ಛಿಸುವ ಕುಟುಂಬಗಳಿಗೆ ಉಚಿತವಾಗಿ ಹಂಚಲು ಮುಂದಾಗಬೇಕು. ಇದರಿಂದ ರೈತರಿಗೂ ಅನುಕೂಲ, ಹಾಲು ಕೂಡ ಸದ್ಬಳಕೆಯಾಗುವುದು. ಅದೂ ಅಲ್ಲದೆ ಕೊರೊನಾ ಮೂರನೇ ಅಲೆಯ ಹೊಡೆತವನ್ನು ಎದುರಿಸಲು ಮುಖ್ಯವಾಗಿ ಮಕ್ಕಳಿಗೆ ಶಕ್ತಿ ಬರುವುದು.

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಮಾನವೀಯ ಜೀವಕೇಂದ್ರಗಳ ವಿಸರ್ಜನೆ ಸಲ್ಲದು

ರಾಜ್ಯದ ಎಲ್ಲ ಅಕಾಡೆಮಿ, ಪ್ರಾಧಿಕಾರ, ನಿಗಮ ಮತ್ತು ಮಂಡಳಿಗಳನ್ನು ಕೂಡಲೇ ವಿಸರ್ಜಿಸಬೇಕೆಂದು ಕೆಲವರು ಸರ್ಕಾರಕ್ಕೆ ಮನವಿ ಮಾಡಿರುವುದು (ವಾ.ವಾ., ಮೇ 28) ಒಳ್ಳೆಯ ಬೆಳವಣಿಗೆ ಅಲ್ಲ. ಇದು ಅನೇಕರನ್ನು ನಿರುದ್ಯೋಗಿಗಳನ್ನಾಗಿಸುತ್ತದೆ. ಕೋವಿಡ್ ಸಮಸ್ಯೆ ಅಂತರರಾಷ್ಟ್ರೀಯವಾದುದು. ಇಂದು ಬಂದಿದೆ, ನಾಳೆ ಹೋಗುತ್ತದೆ. ಅದಕ್ಕಾಗಿ ಇಂತಹ ಕ್ರಮಕ್ಕೆ ಮುಂದಾದರೆ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದರು' ಎಂಬಂತೆ ಆಗುತ್ತದೆ.

ಸದಾ ಸ್ವಸ್ಥ ಸಮಾಜ, ಸ್ವಸ್ಥ ಪರಿಸರ ನಿರ್ಮಿಸಿ, ಅರಿವು- ಜಾಗೃತಿ ಮೂಡಿಸುವ, ಯುವಪೀಳಿಗೆಗೆ ಶಿಕ್ಷಣದ ಶಕ್ತಿಕೇಂದ್ರಗಳಾಗಿರುವ ಈ ಬೌದ್ಧಿಕ ವಲಯವು ಬಡಪಾಯಿ ಸಾಹಿತಿ, ಕಲಾವಿದರನ್ನು ಒಳಗೊಂಡಿದೆ ಮತ್ತು ಇವರನ್ನು ಪೋಷಿಸುವ ಅರೆಕಾಸಿನ ಅಕಾಡೆಮಿ, ಪ್ರಾಧಿಕಾರ, ನಿಗಮಗಳು ಆರ್ಥಿಕ ನೆರವೂ ಇಲ್ಲದೆ ಇತ್ತೀಚೆಗೆ ಸೊರಗುತ್ತಿವೆ. ಇಂತಹ ಸಂದರ್ಭದಲ್ಲಿಯೇ ಮಾನವೀಯ ಜೀವಕೇಂದ್ರಗಳು, ಕಲಾವಿದರು- ಸಾಹಿತಿಗಳ ಏಕೈಕ ಸಂಪರ್ಕ ಕೇಂದ್ರಗಳನ್ನೇ ವಿಸರ್ಜಿಸಿದರೆ, 'ಸಾಹಿತ್ಯ, ಸಂಸ್ಕೃತಿ ಇಲ್ಲದ ಸಮಾಜ ಪ್ರಾಣಿಗಳ ಸಮಾಜದಂತೆ' ಆಗುತ್ತದೆ. ಇವುಗಳನ್ನು ಹಾಳುಮಾಡುವುದು ಸುಲಭ- ಕಟ್ಟಲು ಸಾವಿರಾರು ಜನರ ಪರಿಕಲ್ಪನೆ, ಪರಿಶ್ರಮ ಇರುತ್ತದೆ. ಕೋವಿಡ್ ವಿಷಮ ಸ್ಥಿತಿಯಲ್ಲಿ ಸವಾಲುಗಳನ್ನು ಎದುರಿಸಲು, ಪರಿವರ್ತಿಸಲು, ಜಾಗೃತಿ ಮೂಡಿಸಲು ಸಾಹಿತ್ಯಿಕ, ಸಾಂಸ್ಕೃತಿಕ ಬಲ ತುಂಬಿ ಇವುಗಳನ್ನೇ ಬಳಸಿಕೊಳ್ಳಬೇಕು.

ಈ ಹಿಂದೆ ಬರಗಾಲದ ಸಂದರ್ಭದಲ್ಲಿ ಮೈಸೂರಿನಲ್ಲಿ ಆಯೋಜನೆಯಾಗಿದ್ದ ವಿಶ್ವಕನ್ನಡ ಸಮ್ಮೇಳನವನ್ನು ನಿಲ್ಲಿಸುವಂತೆ ಕೆಲವರು ಆಗ್ರಹಿಸಿದಾಗ, ಸಾಹಿತಿ ಶಿವರಾಮ ಕಾರಂತರು 'ಬರ ಎಂದು ಮಸಾಲೆದೋಸೆ ತಿನ್ನುವುದನ್ನು ಬಿಟ್ಟಿದ್ದೀರಾ? ನಡೆಯಲಿ' ಎಂದದ್ದು ಇಂತಹವರಿಗೆ ಒಂದು ಪಾಠ.

ನಮ್ಮ ಶ್ರೀಮಂತ ಭಾರತೀಯ ಆಡಳಿತಾಧಿಕಾರಿಗಳು, ಕೋಟ್ಯಧೀಶರಾದ ಜನಪ್ರತಿನಿಧಿಗಳ ದುಂದುವೆಚ್ಚ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕೋವಿಡ್ ಪರಿಹಾರ ನಿಧಿಗಳು, ಶಾಸಕರು, ಸಂಸದರು, ಮುಖ್ಯಮಂತ್ರಿ, ಪ್ರಧಾನಿಯವರ ಫಂಡ್‌ಗಳು ಇರುವಾಗ, ಬಡತನದಲ್ಲಿಯೇ ಸೊರಗುತ್ತಿರುವ ಕಲಾವಿದರು, ಸಾಹಿತಿಗಳ ಮೇಲೆ ಯಾರ ವಕ್ರದೃಷ್ಟಿಯೂ ಬೀಳದಿರಲಿ. ಸಮಾಜವಾದಿ ಚಳವಳಿಯ ಹಿನ್ನೆಲೆಯವರಾಗಿ ಇದರ ಮಹತ್ವ ತಿಳಿದವರಾದ ಮುಖ್ಯಮಂತ್ರಿ ಇಂತಹ ಮಾತಿಗೆ ಕಿವಿಯಾಗಬಾರದು.

ಮಂಜಮ್ಮ ಜೋಗತಿ, ಗುಡಿಹಳ್ಳಿ ನಾಗರಾಜ, ಡಾ. ಎ.ಆರ್.ಗೋವಿಂದಸ್ವಾಮಿ, ಗೋಪಾಲಕೃಷ್ಣ ನಾಯರಿ, ಜೋಗಿಲ ಸಿದ್ಧರಾಜು, ಬಿ.ಸುರೇಶ, ಸಿ.ಕೆ.ಗುಂಡಣ್ಣ, ಡಿ.ಎಸ್.ಚೌಗಲೆ, ಸುರೇಶ ಶೆಟ್ಟಿ, ಜಿ.ರಾಜಣ್ಣ, ಬಸವಲಿಂಗಯ್ಯ ಹಿರೇಮಠ, ಬಿ.ಪರಶುರಾಂ, ವರಲಕ್ಷ್ಮಿ ಎನ್., ಚಂದ್ರಕಲಾ ಬಿದರಿ, ವೆಂಕಟರಾಜು, ದೇವರಾಜ

ರಾಜ್ಯ ಸಾಹಿತಿ, ಕಲಾವಿದರ ಕ್ಷೇಮಾಭಿವೃದ್ಧಿ ವೇದಿಕೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

10 ಮತ್ತು 12ನೇ ತರಗತಿಗೆ ಅಂತಿಮ ಪರೀಕ್ಷೆಗಳನ್ನು ನಡೆಸುವುದು ಅನಿವಾರ್ಯವೇ?

ಮಕ್ಕಳ ಸಾಮರ್ಥ್ಯ ಅಳತೆಗೆ ಪರೀಕ್ಷೆಗಳು ಅನಿವಾರ್ಯ

• ಡಾ.ಎಚ್.ಬಿ.ಚಂದ್ರಶೇಖರ್



ಕೋವಿಡ್–19 ತಂದೊಡ್ಡಿರುವ ಸವಾಲಿನ ಜೊತೆಯಲ್ಲೇ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತರಗತಿಗಳಿಗೆ ಪರೀಕ್ಷೆಗಳನ್ನು ನಡೆಸಬೇಕೇ ಬೇಡವೇ ಎಂಬ ಚರ್ಚೆಯೂ ಶುರುವಾಗಿದೆ. 'ಯಾವ ಪರೀಕ್ಷೆಯೂ ಮಕ್ಕಳ ಜೀವಕ್ಕಿಂತ ಮುಖ್ಯವಲ್ಲ' ಎಂಬ ವಾಸ್ತವವನ್ನು ಮುಂದಿಟ್ಟುಕೊಂಡೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ.

ವಿದ್ಯಾರ್ಥಿಗಳ ಜ್ಞಾನ, ತಿಳಿವಳಿಕೆಯ ಮಟ್ಟ ಹಾಗೂ ಕೌಶಲಗಳನ್ನು ಅಳೆಯಲು ಪರೀಕ್ಷಾ ಮಂಡಳಿಗಳು ಪರೀಕ್ಷೆಗಳನ್ನು ನಡೆಸುತ್ತವೆ. ಕೋವಿಡ್ ಬಿಕ್ಕಟ್ಟಿನ ಕಾರಣಕ್ಕೆ ಪರೀಕ್ಷೆಗಳನ್ನು ರದ್ದುಗೊಳಿಸಿದರೆ ಅದಕ್ಕೆ ಪರ್ಯಾಯವೇನು?

ಒಂದು ಸಾಧ್ಯತೆ ಎಂದರೆ, ಶೈಕ್ಷಣಿಕ ವರ್ಷದುದ್ದಕ್ಕೂ ಶಿಕ್ಷಕರು ನೀಡುವ ನಿಯೋಜಿತ ಕಾರ್ಯದ ಮೂಲಕ ವಿದ್ಯಾರ್ಥಿಗಳು ಅಭಿವ್ಯಕ್ತಿಸುವ ವಿಭಿನ್ನ, ವಿಶಿಷ್ಟ ಸಾಮರ್ಥ್ಯ ಹಾಗೂ ಅನುಭವಗಳನ್ನು ಅಳೆದು, ಅವರ ಮೌಲ್ಯಮಾಪನ ಮಾಡುವುದು. ಆದರೆ, ಕೋವಿಡ್ ಕಾರಣದಿಂದಾಗಿ ರಾಜ್ಯದ ವಿವಿಧೆಡೆ ಶಾಲಾ, ಕಾಲೇಜುಗಳಲ್ಲಿ ನಡೆದಿರುವ ತರಗತಿಗಳು ಹಾಗೂ ಶಿಕ್ಷಕರು ನೀಡಿರಬಹುದಾದ ನಿಯೋಜಿತ ಕಾರ್ಯಗಳ ಸಂಖ್ಯೆಯು ಸೀಮಿತವಾಗಿದ್ದು ಅದು ಏಕಪ್ರಕಾರವಾಗಿಲ್ಲ. ಆದ್ದರಿಂದ ಈ ವಿಧಾನದಿಂದ ಮಾಡುವ ಮೌಲ್ಯಮಾಪನವು ವಸ್ತುನಿಷ್ಠ ಎನಿಸಲಾರದು. ತಮ್ಮದೇ ಶಾಲೆ ಅಥವಾ ಕಾಲೇಜಿನ ವಿದ್ಯಾರ್ಥಿಗಳಿಗೆ ಶಿಕ್ಷಕರು ಉದಾರವಾಗಿ ಅಂಕಗಳನ್ನು ನೀಡುವ ಪರಿಪಾಟ ಹೊಸದೇನಲ್ಲ.

ಇನ್ನೊಂದೆಡೆ, ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ವ್ಯವಸ್ಥೆಯನ್ನು ಆಧರಿಸಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳನ್ನು ಮುಂದಿನ ಹಂತಕ್ಕೆ ತೇರ್ಗಡೆ ಮಾಡಲು ಅವಶ್ಯಕವಾದ ಪಾರದರ್ಶಕ ವ್ಯವಸ್ಥೆಯನ್ನು ಕಟ್ಟಿಕೊಳ್ಳುವಷ್ಟು ನಮ್ಮ ಶೈಕ್ಷಣಿಕ ವ್ಯವಸ್ಥೆಯು ಇನ್ನೂ ಪಕ್ವವಾಗಿಲ್ಲ.

> ಪಿಯುಸಿ ನಂತರ ವಿದ್ಯಾರ್ಥಿಗಳಿಗೆ ಅನೇಕ ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳಿವೆ. ಎಂಜಿನಿಯರಿಂಗ್, ವೈದ್ಯ, ಕಾನೂನು ಇತ್ಯಾದಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಮಂಡಳಿಗಳು ನಡೆಸುವ ಪರೀಕ್ಷೆಗಳು ಅನಿವಾರ್ಯ. ಪ್ರಸಕ್ತ ಲಭ್ಯವಿರುವ ಸೀಮಿತ ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳ ಆಯ್ಕೆಗೆ ಹಲವಾರು ವರ್ಷಗಳಿಂದ ಚಾಲ್ತಿಯಲ್ಲಿರುವ ಪರೀಕ್ಷೆಗಳು, ಇರುವುದರಲ್ಲಿಯೇ ಅತ್ಯುತ್ತಮ ಮತ್ತು ಅನಿವಾರ್ಯ ಆಯ್ಕೆಯಾಗಿವೆ

ಪಿಯುಸಿ ನಂತರ ವಿದ್ಯಾರ್ಥಿಗಳಿಗೆ ಅನೇಕ ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳಿವೆ. ಎಂಜಿನಿಯರಿಂಗ್, ವೈದ್ಯ, ಕಾನೂನು ಇತ್ಯಾದಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಮಂಡಳಿಗಳು ನಡೆಸುವ ಪರೀಕ್ಷೆಗಳು ಅನಿವಾರ್ಯ. ಪ್ರಸಕ್ತ ಲಭ್ಯವಿರುವ ಸೀಮಿತ ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳ ಆಯ್ಕೆಗೆ ಹಲವಾರು ವರ್ಷಗಳಿಂದ ಚಾಲ್ತಿಯಲ್ಲಿರುವ ಪರೀಕ್ಷೆಗಳು, ಇರುವುದರಲ್ಲಿಯೇ ಅತ್ಯುತ್ತಮ ಮತ್ತು ಅನಿವಾರ್ಯ ಆಯ್ಕೆಯಾಗಿವೆ. ಈ ಪರೀಕ್ಷೆಗಳಲ್ಲಿ ಸುಧಾರಣೆಗಳನ್ನು ತರಲು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರತಿಪಾದಿಸಿರುವ ಕ್ರಮಗಳು ಜಾರಿಯಾಗುವವರೆಗೆ, ಮಂಡಳಿಗಳು ನಡೆಸುವ ಪರೀಕ್ಷೆಗಳು ಈಗಿರುವ ರೀತಿಯಲ್ಲಿಯೇ ಈ ವರ್ಷವೂ ನಡೆಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನಿವಾರ್ಯ ಎನ್ನಬಹುದು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ವಿದ್ಯಾರ್ಥಿಯು ಗಳಿಸುವ ಅಂಕಗಳು ಮುಂದಿನ ಕನಿಷ್ಠ 5ರಿಂದ 10 ವರ್ಷಗಳವರೆಗೆ ಪ್ರಸ್ತುತವಾಗುತ್ತವೆ. ಒಂದುವೇಳೆ ಪರೀಕ್ಷೆಗಳನ್ನು ರದ್ದುಗೊಳಿಸಿದಲ್ಲಿ ಈ ಸಾಲಿನಲ್ಲಿ ಉತ್ತೀರ್ಣರೆಂದು ಭಾವಿಸುವ ವಿದ್ಯಾರ್ಥಿಗಳನ್ನು ಇತರೆ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳೊಂದಿಗೆ ಹೋಲಿಸುವುದು ಹೇಗೆ? ಕೆಲವು ಶೈಕ್ಷಣಿಕ ಹಾಗೂ ವೃತ್ತಿ ಅವಕಾಶಗಳಿಗೆ ವಿದ್ಯಾರ್ಥಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಇಂತಹ ಹೋಲಿಕೆಯು ಅಗತ್ಯ ಹಾಗೂ ಅನಿವಾರ್ಯವಾಗಿದೆ.

ಪರೀಕ್ಷಾ ಮಂಡಳಿಯ ಪರೀಕ್ಷೆಗಳಿಗೆ ಪರ್ಯಾಯವಾಗಿ ಆನ್‌ಲೈನ್ ಮೂಲಕ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಮಾಡಲು ಅಗತ್ಯವಾದ ತಾಂತ್ರಿಕ ಸಾಧನಗಳ ಲಭ್ಯತೆ ಹಾಗೂ ಅನುಕೂಲ ಹೆಚ್ಚಿನ ಕುಟುಂಬಗಳಿಗೆ ಇಲ್ಲ. ಜೊತೆಗೆ, ಪ್ರಾಯೋಗಿಕವಾಗಿಯೂ ಈ ವಿಧಾನದಲ್ಲಿ ಪರೀಕ್ಷೆಗಳನ್ನು ಈವರೆಗೆ ನಡೆಸಿಲ್ಲವಾದ್ದರಿಂದ, 'ಆನ್‌ಲೈನ್‌ನಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ನಕಲು ಹಾಗೂ ಇನ್ನಿತರ ಪರೀಕ್ಷಾ ಅಕ್ರಮಗಳು ನಡೆಯಲಾರವು' ಎಂದು ಖಚಿತವಾಗಿ ಹೇಳಲೂ ಸಾಧ್ಯವಿಲ್ಲ. ಅಂದಮೇಲೆ, ಈಗಿನ ಸ್ಥಿತಿಯಲ್ಲಿ ಆನ್‌ಲೈನ್ ಮೂಲಕವೂ ಪರೀಕ್ಷೆ ನಡೆಸಲು ಸಾಧ್ಯವಿಲ್ಲ ಎಂದಾಯಿತು.

ಇರುವ ಏಕೈಕ ಸಾಧ್ಯತೆಯೆಂದರೆ, ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳೊಂದಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವುದು. ಇಂಥದ್ದೇ ಸನ್ನಿವೇಶದಲ್ಲಿ ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ನಡೆಸಲಾಗಿತ್ತು. ಪ್ರಸಕ್ತ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿರುವ ಆಶಾದಾಯಕ ಬೆಳವಣಿಗೆ ಕಂಡುಬರುತ್ತಿದ್ದು, ಪರಿಸ್ಥಿತಿಯನ್ನು ನೋಡಿಕೊಂಡು, ವೈದ್ಯಕೀಯ ತಜ್ಞರ ಅಭಿಪ್ರಾಯ ಪಡೆದು ಜೂನ್ ಕೊನೆಯ ವಾರ ಅಥವಾ ಜುಲೈ ಮೊದಲ ವಾರದಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲು ಕ್ರಮ ಕೈಗೊಳ್ಳಬಹುದು.

ಪ್ರತಿ ವಿದ್ಯಾರ್ಥಿಯೂ ಅನನ್ಯ ಹಾಗೂ ವಿಶಿಷ್ಟ. ವಿಭಿನ್ನ ಕ್ಷೇತ್ರಗಳಲ್ಲಿ ಅವರದೇ ಆದ ಮಟ್ಟದಲ್ಲಿ ಪ್ರತಿಭೆ, ಸಾಮರ್ಥ್ಯ ಇರುತ್ತದೆ. ವರ್ಷಕ್ಕೆ ಒಮ್ಮೆ ನಡೆಸುವ ಅಂತಿಮ ಪರೀಕ್ಷೆಯ ಅಂಕಗಳಿಂದ ವಿದ್ಯಾರ್ಥಿಯ ಇಂತಹ ವಿಶಿಷ್ಟ ಪ್ರತಿಭೆಯನ್ನು ಗುರುತಿಸಲಾಗದು. ಪರೀಕ್ಷೆಗಳಿಗೂ ಅದರದ್ದೇ ಆದ ಮಿತಿಗಳಿವೆ. ವಿದ್ಯಾರ್ಥಿಗಳ ಸಾಮರ್ಥ್ಯ ಗುರುತಿಸಿ, ಅವರ ಪ್ರತಿಭೆಯ ಮಾಪನ ಮಾಡಿ, ಒಂದು ಸಂಯುಕ್ತ ಸೂಚ್ಯಂಕವನ್ನು ಪಾರದರ್ಶಕವಾಗಿ ನಿರ್ಧರಿಸುವಷ್ಟು ಶಾಲೆ, ಕಾಲೇಜುಗಳು ಸಶಕ್ತಗೊಳ್ಳಬೇಕು.


ವಿದ್ಯಾರ್ಥಿಯು ತನ್ನ ಪೋಷಕರು ಹಾಗೂ ಪರಿಸರದ ಪ್ರಭಾವ ಹಾಗೂ ಬೆಂಬಲದಿಂದ ಕಟ್ಟಿಕೊಳ್ಳುವ ಅನುಭವಗಳನ್ನೂ ಕಲಿಕೆಯ ವಿಶಾಲ ವ್ಯಾಪ್ತಿಗೆ ತರುವಂಥ ವ್ಯವಸ್ಥೆ ಬರಬೇಕು. ವಿವಿಧ ರೀತಿಯ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ವಿದ್ಯಾರ್ಥಿಯು ಹೆಚ್ಚು ಹೆಚ್ಚು ಶೈಕ್ಷಣಿಕ ಅನುಭವಗಳನ್ನು ದಕ್ಕಿಸಿಕೊಳ್ಳಲು ನೆರವಾಗುವಂತೆ ಕುಟುಂಬ ಹಾಗೂ ಸಮಾಜದ ಘಟಕಗಳಿಗೆ ಶಾಲೆಯು ಅಗತ್ಯ ಬೆಂಬಲ ನೀಡುವಂತೆ ಸಜ್ಜುಗೊಳಿಸಬೇಕು. ಹೀಗಾದಲ್ಲಿ ಕೋವಿಡ್‌ನಂತಹ ಸಾಂಕ್ರಾಮಿಕದ ಸಂದರ್ಭದಲ್ಲಿ ಉದ್ಭವಿಸುವ ಶೈಕ್ಷಣಿಕ ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯವಿದೆ.

ಲೇಖಕ: ಹಿರಿಯ ಸಹಾಯಕ ನಿರ್ದೇಶಕ, ಡಿ.ಎಸ್.ಇ.ಆರ್.ಟಿ., ಬೆಂಗಳೂರು

ಪ್ರಜಾವಾಣಿ ಚರ್ಚೆ

ಪರೀಕ್ಷೆ ಪದ್ಧತಿ ಕೈಬಿಟ್ಟರೆ ಶಿಕ್ಷಣ ಗುಣಮಟ್ಟ ಏರಿಕೆ

• ಹೃಷಿಕೇಶ್ ಬಿ.ಎಸ್.



12ನೇ ತರಗತಿಯ ಪರೀಕ್ಷೆಗಳನ್ನು ನಡೆಸಲು ಬಯಸುತ್ತೇವೆ ಎಂದು ಬಹುತೇಕ ರಾಜ್ಯಗಳು ಕೇಂದ್ರದ ಶಿಕ್ಷಣ ಸಚಿವಾಲಯಕ್ಕೆ ಹೇಳಿರುವುದು ಪರೀಕ್ಷಾ ಕೇಂದ್ರಿತ ಭಾರತ ಸಮಾಜದ ಈ ವಾರದ ಪ್ರಮುಖ ಸುದ್ದಿ. ಈ ಪರೀಕ್ಷೆಗಳ ಉದ್ದೇಶ ಏನು, 10 ಅಥವಾ 12ನೇ ತರಗತಿ ಪರೀಕ್ಷೆಗಳನ್ನು ನಡೆಸುವುದಕ್ಕೆ ನಾವು ಇಷ್ಟೊಂದು ಉತ್ಸುಕರಾಗಿರುವುದು ಏಕೆ ಎಂಬ ಪ್ರಶ್ನೆಗಳನ್ನು ಯಾರೊಬ್ಬರೂ ಕೇಳುತ್ತಿಲ್ಲ. ಪರೀಕ್ಷಾ ಮಂಡಳಿಯು ನಡೆಸುವ ಪರೀಕ್ಷೆಗಳ ನಿರರ್ಥಕತೆಯನ್ನು ಸಾಂಕ್ರಾಮಿಕವು ಬಯಲಿಗೆ ತಂದಿದೆ. ಹತ್ತನೇ ತರಗತಿಯ ಅಂತಿಮ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ ಮತ್ತು ಅದರಿಂದಾಗಿ ಗಣನೀಯವಾದ ಯಾವ ಪರಿಣಾಮವೂ ಗೋಚರಿಸಿಲ್ಲ. 12ನೇ ತರಗತಿ ಪರೀಕ್ಷೆಗಳ ವಿಚಾರದಲ್ಲಿಯೂ ಇದುವೇ ನಿಜ. ಅಧಿಕಾರಶಾಹಿ, ಕೋಚಿಂಗ್ ಉದ್ಯಮ, ಪರೀಕ್ಷಾ ಸಿದ್ಧತೆಯ ಪುಸ್ತಕ ಪ್ರಕಟಿಸುವ ಪ್ರಕಾಶಕರು, ಹೆತ್ತವರ ನಿರೀಕ್ಷೆ ಮತ್ತು ಅಸುರಕ್ಷತೆಯನ್ನು ಬಳಸಿಕೊಂಡು ತ್ವರಿತವಾಗಿ ಹಣ ಮಾಡಲು ಬಯಸುವ ನಿರ್ಲಜ್ಜ ಉದ್ಯಮಿಗಳನ್ನು ಒಳಗೊಂಡ ಸ್ಥಾಪಿತ ಹಿತಾಸಕ್ತಿಗಳ ಹಿತಾಸಕ್ತಿಯನ್ನು ಮಾತ್ರ ಪರೀಕ್ಷೆಗಳು ಈಡೇರಿಸುತ್ತವೆ.

ಅಂತಿಮ ಪರೀಕ್ಷೆಗಳನ್ನು ನಡೆಸುವ ಪದ್ಧತಿಯನ್ನು ಭಾರತದಲ್ಲಿ ಟೀಕಿಸಲು ಆರಂಭಿಸಿ ಒಂದು ಶತಮಾನಕ್ಕೂ ಹೆಚ್ಚಿನ ಅವಧಿ ಸಂದಿದೆ. 'ನಮ್ಮ ದೇಶದಲ್ಲಿ ಚಾಲ್ತಿಯಲ್ಲಿರುವ ಪರೀಕ್ಷಾ ಪದ್ಧತಿಯು ಶಿಕ್ಷಣಕ್ಕೆ ಶಾಪವಾಗಿ ಪರಿಣಮಿಸಿದೆ' ಎಂದು ಝಾಕಿರ್ ಹುಸೇನ್ ವರದಿಯು 80 ವರ್ಷಕ್ಕೂ ಹಿಂದೆಯೇ ಹೇಳಿತ್ತು. ಅದಕ್ಕೂ 25 ವರ್ಷ ಹಿಂದೆ, ಲಾರ್ಡ್ ಕರ್ಜನ್ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಪರೀಕ್ಷೆಯ ಪ್ರಭಾವವು ಎಷ್ಟು ಅತಿಯಾಗಿದೆ ಎಂದರೆ, ಇಡೀ ಶಿಕ್ಷಣ ವ್ಯವಸ್ಥೆಯು ಪರೀಕ್ಷೆಗಾಗಿಯೇ ಸನ್ನದ್ಧವಾಗಿ ಇರುವಂತಿದೆ; ಆದರೆ, ಇದಕ್ಕೆ ವ್ಯತಿರಿಕ್ತವಾದ ಸ್ಥಿತಿಯಲ್ಲಿ ಶಿಕ್ಷಣ ವ್ಯವಸ್ಥೆ ಇರಬೇಕಿತ್ತು ಎಂದು ಕರ್ಜನ್ ಹೇಳಿದ್ದರು. ಕಳೆದ ಒಂದೂಕಾಲು ಶತಮಾನದ ಅವಧಿಯಲ್ಲಿ ಇಂತಹ ಹಲವು ವರದಿಗಳು ಬಂದಿವೆ. ಹಾಗಿದ್ದರೂ ಒಂದು ಸಮಾಜವಾಗಿ ನಾವು ಪರೀಕ್ಷೆಯ ಗೀಳಿಗೆ ಒಳಗಾಗಿರುವುದು ದುರದೃಷ್ಟಕರ.

> ಕೋವಿಡ್ ಸಾಂಕ್ರಾಮಿಕದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಹತ್ತನೇ ತರಗತಿಯ ಪರೀಕ್ಷೆಗಳನ್ನು ಸರಿಯಾಗಿ ನಡೆಸಲು ಪರೀಕ್ಷಾ ಮಂಡಳಿಗಳಿಗೆ ಸಾಧ್ಯವಾಗಿಲ್ಲ. ಎಲ್ಲ ತರಗತಿಗಳಲ್ಲಿಯೂ ಪರೀಕ್ಷೆಗಳನ್ನು ಕೈಬಿಡಲು ಇದು ಸರಿಯಾದ ಸಮಯ. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ ಮೌಲ್ಯಮಾಪನ ಸುಧಾರಣೆಗಳನ್ನು ಜಾರಿಗೆ ತರಲು ಇದು ಸಕಾಲ

ಪರೀಕ್ಷಾ ಕೇಂದ್ರಿತ ಶಿಕ್ಷಣ ವ್ಯವಸ್ಥೆಯು, ಸಮಾಜ ಕಟ್ಟುವ ಕಾಯಕದಲ್ಲಿ ಕೊಡುಗೆ ನೀಡಲು ಸಾಧ್ಯವಾಗುವಂತೆ ನಮ್ಮ ಮಕ್ಕಳನ್ನು ಸಜ್ಜಾಗಿಸುವುದಿಲ್ಲ; ಸ್ವತಂತ್ರ ಚಿಂತಕರಾಗುವ ರೀತಿಯಲ್ಲಿ ಅವರು ಬೆಳೆಯಲು ಬೇಕಾದ ಆತ್ಮವಿಶ್ವಾಸ ನೀಡುತ್ತಿಲ್ಲ; ಅತ್ಯಂತ ಅಸ್ಥಿರವಾದ 21ನೇ ಶತಮಾನದತ್ತ ಸಾಗುವಾಗ ಇದು ಅತ್ಯಂತ ನಿರ್ಣಾಯಕವಾಗಿ ಬೇಕಾಗಿರುವ ಸಾಮರ್ಥ್ಯ. ಒಂದು ಸಮಾಜವಾಗಿ ನಾವು ಇದನ್ನು ಗ್ರಹಿಸಿಕೊಳ್ಳುವುದು ಬಹಳ ಮುಖ್ಯ. ಸಂಬಂಧಪಟ್ಟ ಎಲ್ಲರಲ್ಲಿಯೂ ಇರುವ ತಿಳಿವಳಿಕೆಯ ಕೊರತೆಯು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಪರೀಕ್ಷಾ ಕೇಂದ್ರಿತವಾಗಿಯೂ ಸಮಾಜವನ್ನು ಪರೀಕ್ಷಾ ಗೀಳಿನದ್ದಾಗಿಯೂ ಉಳಿಸಿದೆ. ಈಗ, 'ಪರೀಕ್ಷೆಗಾಗಿ ಬೋಧನೆ' ಮಾತ್ರ ನಮ್ಮ ಶಾಲೆಗಳಲ್ಲಿ ನಡೆಯುತ್ತಿದೆ. ಮಂಡಳಿಗಳು ನಡೆಸುವ ಪರೀಕ್ಷೆಗಳನ್ನು ಹೇಗೆ ವಿನ್ಯಾಸ ಮಾಡಲಾಗಿದೆ ಎಂದರೆ, 60 ಅಥವಾ 90 ನಿಮಿಷ ಅವಧಿಯ ಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳು ಉತ್ತೀರ್ಣ ಅಥವಾ ಅನುತ್ತೀರ್ಣ ಎಂಬ ಹಣೆಪಟ್ಟಿ ಕಟ್ಟುವುದಕ್ಕಷ್ಟೇ ಇದು ಸೀಮಿತ. ಶೈಕ್ಷಣಿಕವಾಗಿ ಉಪಯುಕ್ತವಾದ ಯಾವುದೇ ಅಂಶವನ್ನು ಈ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ನೀಡುವುದಿಲ್ಲ. ಇದು ಅಸಂಗತ ಅನ್ನಿಸುವುದಿಲ್ಲವೇ? ಅದಕ್ಕಿಂತ ಹೆಚ್ಚಾಗಿ ತಮ್ಮ ಬಾಲ್ಯದ ಶೇ 90ಕ್ಕೂ ಹೆಚ್ಚಿನ ಅವಧಿಯನ್ನು ಶಾಲೆಯಲ್ಲಿ ಕಳೆಯುವ ವಿದ್ಯಾರ್ಥಿಗಳಿಗೆ ಮಾಡುವ ಅನ್ಯಾಯ ಅಲ್ಲವೇ? ಪರ್ಯಾಯಗಳತ್ತ ಯೋಚನೆ ಮಾಡಲು ಇದು ಸಕಾಲ.

ಒಂದು ಕ್ಷಣ ತಡೆದು ನಿಂತು, ನಮ್ಮ ಮಂಡಳಿಗಳು ನಡೆಸುವ ಪರೀಕ್ಷೆಗಳ ಶೈಕ್ಷಣಿಕ ಉದ್ದೇಶ ಏನು ಎಂಬ ಬಗ್ಗೆ ಯೋಚಿಸೋಣ. ನಮ್ಮ ಮಕ್ಕಳಿಗೆ ಭಾಷಾ ಜ್ಞಾನ, ಗಣಿತ, ವೈಜ್ಞಾನಿಕ ವಿಧಾನ, ಮಾನವಿಕ ವಿಷಯಗಳು ಮತ್ತು ನಾಗರಿಕ ಮೌಲ್ಯಗಳ ಅರಿವು ನೀಡುವುದು ಶಾಲಾ ಶಿಕ್ಷಣದ ಉದ್ದೇಶ. ಅವರ ತಾರ್ಕಿಕ ಸಾಮರ್ಥ್ಯವನ್ನು ಬೆಳೆಸುವುದು ಮತ್ತು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥರನ್ನಾಗಿಸುವುದು ಶಿಕ್ಷಣದ ಅಂತಿಮ ಉದ್ದೇಶ. ಮಂಡಳಿಯು ನಡೆಸುವ ಪರೀಕ್ಷಾ ವಿಧಾನದಲ್ಲಿ ಇವುಗಳಲ್ಲಿನ ಹೆಚ್ಚಿನ ಗುಣಗಳನ್ನು ಪರೀಕ್ಷಿಸಲು ಸಾಧ್ಯವಿಲ್ಲ; ಇವುಗಳನ್ನು ಶಾಲಾ ಶಿಕ್ಷಣದ ಅವಧಿಯಲ್ಲಿ ನಿರಂತರವಾಗಿ ವಿಶ್ಲೇಷಿಸಬೇಕೇ ವಿನಹ ಹತ್ತು ಅಥವಾ 12ನೇ ತರಗತಿಯ ಕೊನೆಯಲ್ಲಿ ಅಲ್ಲ. ಹಾಗೆ ನೋಡಿದರೆ, ಶೈಕ್ಷಣಿಕ ವರ್ಷದ ಕೊನೆಯಲ್ಲಿ ಪರೀಕ್ಷೆಗೆ ಒಳಪಡಿಸಬಹುದಾದ ವಿಷಯಗಳೂ ಅಲ್ಲ ಇವು. ಶಿಕ್ಷಣ ಹಕ್ಕು ಕಾಯ್ದೆ 2009ಕ್ಕೆ ದೂರದೃಷ್ಟಿ ಇಲ್ಲದ ನಮ್ಮ ನೀತಿ ನಿರೂಪಕರು ತಿದ್ದುಪಡಿ ತರುವ ಮೊದಲು ಈ ಅಂಶಗಳು ಅದರಲ್ಲಿ ಇದ್ದವು.

ಮಕ್ಕಳನ್ನು ಉತ್ತೀರ್ಣಗೊಳಿಸಲು ಅಂತಿಮ ಪರೀಕ್ಷೆಯೆಂಬುದು ಇರಬಾರದು. ಬದಲಿಗೆ, ಎಂಟನೇ ತರಗತಿಯವರೆಗೆ ನಿರಂತರವಾದ ಮತ್ತು ಸಮಗ್ರವಾದ ಮೌಲ್ಯಮಾಪನ ನಡೆಯುತ್ತಿರಬೇಕು. ಶಾಲಾ ಅವಧಿಯ ಕೊನೆಗೂ ಇದೇ ಅನ್ವಯ ಆಗುತ್ತದೆ. ಮಕ್ಕಳು ನಿರ್ದಿಷ್ಟ ಸಾಮರ್ಥ್ಯಗಳನ್ನು ರೂಢಿಸಿಕೊಂಡಿದ್ದಾರೆಯೇ ಎಂಬುದನ್ನು ಪ್ರಮಾಣೀಕರಿಸುವ ಅಗತ್ಯ ಇದೆ. ಆದರೆ, ಶಾಲಾ ಶಿಕ್ಷಣ ಪಡೆದ ಮಕ್ಕಳು ಈ ಸಾಮರ್ಥ್ಯಗಳನ್ನು ರೂಢಿಸಿಕೊಂಡಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಲು 15 ವರ್ಷದ ಶಾಲಾ ಶಿಕ್ಷಣದ ಕೊನೆಯಲ್ಲಿ ಕಬ್ಬಿಣದ ಗೇಟುಗಳ ಒಳಗಿನ ಪರೀಕ್ಷಾ ಕೇಂದ್ರದಲ್ಲಿ 60 ಅಥವಾ 90 ನಿಮಿಷ ನಡೆಸುವ ಪರೀಕ್ಷೆ ಮಾತ್ರ ಮಾರ್ಗವೇ? ಖಂಡಿತಾ ಅಲ್ಲ. ಮಂಡಳಿಗಳು ನಡೆಸುವ ಪರೀಕ್ಷೆಯ ವಿಧಾನವನ್ನೇ ಮುಂದುವರಿಸಲು ಕಾರಣ ನಾವು ಸೋಮಾರಿಗಳಾಗಿರುವುದು ಮತ್ತು ಉತ್ತಮ ಪರ್ಯಾಯಗಳನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಗದೇ ಇರುವುದು.

ಕೋವಿಡ್ ಸಾಂಕ್ರಾಮಿಕದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಹತ್ತನೇ ತರಗತಿಯ ಪರೀಕ್ಷೆಗಳನ್ನು ಸರಿಯಾಗಿ ನಡೆಸಲು ಪರೀಕ್ಷಾ ಮಂಡಳಿಗಳಿಗೆ ಸಾಧ್ಯವಾಗಿಲ್ಲ. ಎಲ್ಲ ತರಗತಿಗಳಲ್ಲಿಯೂ ಪರೀಕ್ಷೆಗಳನ್ನು ಕೈಬಿಡಲು ಇದು ಸರಿಯಾದ ಸಮಯ. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ ಮೌಲ್ಯಮಾಪನ ಸುಧಾರಣೆಗಳನ್ನು ಜಾರಿಗೆ ತರಲು ಇದು ಸಕಾಲ. ಕೇಂದ್ರ ಶಿಕ್ಷಣ ಸಚಿವಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸು ಅನ್ವಯ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು (ಎನ್‌ಟಿಎ) ಸ್ಥಾಪಿಸಿದೆ. ಪರೀಕ್ಷಾ ಮಂಡಳಿಗಳ ಪರೀಕ್ಷೆಗಳಿಗೆ ಪರ್ಯಾಯವಾಗಿ ನಿಯಮಿತ ಮತ್ತು ಬೇಡಿಕೆಗೆ ಅನುಸಾರವಾದ ಮೌಲ್ಯಮಾಪನ ವ್ಯವಸ್ಥೆಯನ್ನು ಆರಂಭಿಸುವ ದಿಸೆಯಲ್ಲಿ ಎನ್‌ಟಿಎ ಕೆಲಸ ಶುರು ಮಾಡಬೇಕು.

ಲೇಖಕ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ



ಕಳೆದ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಸಾಂಕ್ರಾಮಿಕದಿಂದಾಗಿ ಜುಲೈನಲ್ಲಿ ನಡೆದಿತ್ತು. ಕೋವಿಡ್ ತಡೆ ಮಾರ್ಗಸೂಚಿಗೆ ಅನುಸಾರವಾಗಿ ಪರೀಕ್ಷೆ ನಡೆಸಲಾಗಿತ್ತು. ಕಲಬುರ್ಗಿಯ ಸೇಂಟ್ ಜೋಸೆಫ್ ಬಾಲಕಿಯರ ಪ್ರೌಢಶಾಲೆಯ ಪರೀಕ್ಷಾ ಕೇಂದ್ರದಿಂದ ವಿದ್ಯಾರ್ಥಿಗಳು ಪರೀಕ್ಷೆ ಮುಗಿದ ಬಳಿಕ ಅಂತರ ಕಾಯ್ದುಕೊಂಡೇ ಹೊರ ಬಂದಿದ್ದರು

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಮನುಷ್ಯತನ ಇಲ್ಲದೆಡೆ ಮನುಷ್ಯನಿಲ್ಲ

ಕಾಲ ಸರಿದಂತೆ ಮನುಷ್ಯ ದೈಹಿಕವಾಗಿಯೂ ಮಾನಸಿಕವಾಗಿಯೂ ದುರ್ಬಲನಾಗುತ್ತಿದ್ದಾನೆ. ತಾನೇ ನಿರ್ಮಿಸಿಕೊಂಡ ಆಡಂಬರದ ಢಾಂಬಿಕ ಬದುಕಿನಲ್ಲಿ ಬಂಧಿಯಾಗಿ ತನಗರಿವಿಲ್ಲದೆ ಸರ್ವನಾಶದ ಪಥಕ್ಕೆ ದಾಪುಗಾಲಿಟ್ಟಿದ್ದಾನೆ. ಬದುಕಿಗೆ ಅಗತ್ಯವಾದುದನ್ನು ಬಿಟ್ಟು, ಅನಗತ್ಯ ವಸ್ತುಗಳಿಗೆ ಮತ್ತು ವಿಚಾರಗಳಿಗೆ ಮೈ-ಮನಸ್ಸುಗಳನ್ನು ತೆರೆದುಕೊಂಡ ದುಷ್ಪರಿಣಾಮದ ಫಲವನ್ನು ಈಗ ಅನುಭವಿಸುತ್ತಿದ್ದಾನೆ. ತನ್ನ ಜೀವ ಮತ್ತು ಜೀವನವನ್ನು ಎಷ್ಟು ನಾಜೂಕಿನ ಸ್ಥಿತಿಗೆ ತಂದುಕೊಂಡಿದ್ದಾನೆಂದರೆ, ಸಣ್ಣ ಜ್ವರಕ್ಕೂ ಮನುಷ್ಯನ ಜೀವ ಹೆದರುತ್ತದೆ; ಸಣ್ಣ ಕಷ್ಟಕ್ಕೂ ಅವನ ಜೀವನ ಅದುರುತ್ತದೆ.

ಹಿಂದಿನ ಕಾಲದ ಜನ ಎಂಥ ಕಷ್ಟಕ್ಕೂ ಜಗ್ಗದೆ, ಅಳುಕದೆ ಮುನ್ನುಗ್ಗುತ್ತಿದ್ದರು. 'ಕಷ್ಟ ಮನುಷ್ಯನಿಗೆ ಬರದೇ, ಮರಕ್ಕೆ ಬರುತ್ತಾ' ಅಂತ ಕಷ್ಟವನ್ನು ಅಪ್ಪಿಕೊಳ್ಳುತ್ತಿದ್ದರು. ಆ ಕಷ್ಟಗಳು ಅಳಿಯದೆ, ಜೀವನ ಪೂರ್ತಿ ಇದ್ದರೂ ಬೇಸರಿಸದೆ ಅದರೊಂದಿಗೆ ಬಾಳುವುದನ್ನು ರೂಢಿಸಿಕೊಳ್ಳುತ್ತಿದ್ದರು. ಅಪ್ಪಿತಪ್ಪಿಯೂ ಆತ್ಮಹತ್ಯೆಯ ಯೋಚನೆ ಮಾಡುತ್ತಿರಲಿಲ್ಲ. ಅದರಲ್ಲೂ ತಾವೂ ಸಾಯುವುದಲ್ಲದೆ ತಮ್ಮ ಕರುಳ ಕುಡಿಗಳನ್ನು ಕೊಲ್ಲುವ ನೀಚತನ ಮಾಡುತ್ತಿರಲಿಲ್ಲ. ಒಂದೆರಡು ಮಕ್ಕಳ ಸಲಹುವುದೇ ದುಸ್ತರ ಅಂತ ಹತಾಶರಾಗುವ ಈ ಕಾಲದ ತಾಯಂದಿರಿಗೆ ಹೋಲಿಸಿದರೆ, ಹತ್ತಾರು ಮಕ್ಕಳು ಹೆತ್ತರೂ ಅವುಗಳ ಭವಿಷ್ಯ ರೂಪಿಸಲು ಶ್ರಮಿಸುತ್ತಿದ್ದ ಆ ಕಾಲದ ತಾಯಂದಿರ ಛಲ-ಬಲ ಅನನ್ಯವಾಗಿತ್ತು.

ಹಿಂದಿನ ಕಾಲಕ್ಕಿಂತ ಇಂದಿನ ಕಾಲ ಎಷ್ಟೋ ಸುಭಿಕ್ಷವಾಗಿದೆ. ಆಗೆಲ್ಲಾ ತಿನ್ನಲಿಕ್ಕೂ ಬರ, ಉಡಲಿಕ್ಕೂ ಕಷ್ಟ. ಅಂಥ ಕಡುಕಷ್ಟದಲ್ಲಿ ನೊಂದು-ಬೆಂದು ಬದುಕಿದ ಜೀವಿಗಳ ತ್ಯಾಗದ ಫಲದಿಂದ ಈಗಿನ ಜನ ಒಂದಿಷ್ಟು ನೆಮ್ಮದಿಯ ಬದುಕನ್ನು ಕಂಡಿದ್ದಾರೆ. ಆದರೆ ಇಂಥ ನೆಮ್ಮದಿಯ ಬದುಕನ್ನ ಈಗಿನ ಜನ ಬೇರೆಯವರ ಬದುಕಿಗೆ ತಾಳೆ ಹಾಕುತ್ತಾ ಹಾಳು ಮಾಡಿಕೊಳ್ಳುತ್ತಿದ್ದಾರೆ. 'ಪಾಲಿಗೆ ಬಂದದ್ದೆ ಪಂಚಾಮೃತ' ಅಂತ ಜೀವನವನ್ನು ಅನುಭೋಗಿಸಿಕೊಂಡು ಹೋಗುತ್ತಿದ್ದ ಆ ಕಾಲದ ಜನರಿಗೆ, 'ಅಯ್ಯೋ ಅವರತ್ರ ಇರೋ ಕಾರು-ಬಂಗಲೆ ನಮ್ಮಲ್ಲಿಲ್ಲ' ಅಂತ ಕೊರಗೋ ಈಗಿನ ಜನರನ್ನ ಹೋಲಿಸಲಾಗುವುದಿಲ್ಲ. ಎಂಥ ಕಷ್ಟ ಬಂದರೂ ಎದುರಿಸಿ ನಿಲ್ಲುವ ಛಾತಿ ಆ ಕಾಲದ ಜನರಲ್ಲಿತ್ತು. ಆದರೀಗ ಎಲ್ಲವೂ ತಿರುವು-ಮುರುವಾಗಿದೆ. ಕೈಗೆಟುಕುವ ಅಂತರದಲ್ಲೇ ಎಲ್ಲಾ ಸಿಗುತ್ತಿವೆ. ಹೀಗಿದ್ದರೂ ಇರುವಷ್ಟರಲ್ಲಿ ತೃಪ್ತಿ ಪಡದೆ ಚಡಪಡಿಸುತ್ತಿದ್ದಾರೆ.

ಈಗಿನವರು ಸುಲಭವಾಗಿ ಸುಖದ ಕನಸು ಕಾಣುತ್ತಾರೆಯೇ ಹೊರತು, ಕಷ್ಟಪಟ್ಟು ನನಸು ಮಾಡುವ ಮಾರ್ಗಹಿಡಿಯುವುದಿಲ್ಲ. ಅಡ್ಡ ಮಾರ್ಗದಲ್ಲಿ ಸಂಪಾದಿಸಲೆತ್ನಿಸುತ್ತಾರೆ. ಇದರ ಪರಿಣಾಮವಾಗಿ ಈಗ ಸಾವಿನ ಮನೆಯಲ್ಲೂ ಲಾಭದ ಜಂತಿ ಎಣಿಸುವ ದುರಾತ್ಮರು ಹುಟ್ಟಿಕೊಂಡಿದ್ದಾರೆ. ಲೋಭ-ಮೋಹಗಳು ಮನುಷ್ಯ ಹುಟ್ಟಿದಾಗಿನಿಂದಲೂ ಜೊತೆಯಾಗೇ ಬಂದಿವೆ. ಅವುಗಳಿಗೆ ಆ ಕಾಲದಲ್ಲಿ ವೇಗೋತ್ಕರ್ಷವಿರಲಿಲ್ಲ. ಆದರೀಗ ಆಧುನಿಕ ಜಗತ್ತು ಹೇಗೆ ಗೊತ್ತು-ಗುರಿ ಇಲ್ಲದೆ ನಾಗಾಲೋಟದಲ್ಲಿ ಓಡುತ್ತಿದೆಯೋ, ಹಾಗೇ ಅವನ ಲೋಭತನವೂ ಅಷ್ಟೇ ವೇಗವಾಗಿ ಲಂಬಿಸುತ್ತಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸಾವಿರಾರು ರೂಪಾಯಿಗಳಲ್ಲಿದ್ದ ಭ್ರಷ್ಟಾಚಾರ, ಈಗ ಸಾವಿರಾರು ಕೋಟಿರ ರೂಪಾಯಿ ದಾಟಿದೆ. ಎಲ್ಲರಿಗೂ ಹಣದ ಮೇಲೆಯೇ ಧ್ಯಾನ. ಗುಣಾವಗುಣಗಳನ್ನು ತೌಲನಿಕವಾಗಿ ವಿವೇಚಿಸುವ ಒಳ್ಳೆಯ ಮನಸ್ಸನ್ನೇ ಜನ ಕಳೆದುಕೊಂಡಿದ್ದಾರೆ. ಅದರ ದುಷ್ಪರಿಣಾಮವನ್ನು ಕೊರೊನಾ ಸಂಕಷ್ಟ ಕಾಲದಲ್ಲಿ ನೋಡುತ್ತಿದ್ದೇವೆ. ಎಲ್ಲಿ ಮನುಷ್ಯತನ ಇಲ್ಲವೋ, ಅಲ್ಲಿ ಮನುಷ್ಯರಾರು ಉಳಿಯಲಾರರು. ಈ ಪರಮ ಸತ್ಯ ಅರಿವಾಗದಿದ್ದರೆ ಆಧುನಿಕ ಮನುಷ್ಯರ ಸಂಕಟ ಕೊನೆಗೊಳ್ಳುವುದೂ ಇಲ್ಲ. ಅದಕ್ಕಾಗಿ ಜಗತ್ತಿನ ಜನರೆಲ್ಲ ಲೋಭತನ ಮರೆತು, 'ಸಚ್ಚಿದಾನಂದ'ದ ಸತ್ಸಂಗದಲ್ಲಿ ಬೆರೆತು ಮನುಷ್ಯತನವನ್ನು ಬೆಳೆಸಿಕೊಳ್ಳಬೇಕು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕೋವ್ಯಾಕ್ಸ್' ಒಪ್ಪಂದದ ಪ್ರಕಾರ ಭಾರತವು ವಿದೇಶಗಳಿಗೆ 198 ಲಕ್ಷ ಡೋಸ್ ಕೋವಿಡ್ ಲಸಿಕೆ ರಫ್ತು ಮಾಡಿದೆ. ಇದಕ್ಕೆ ಪ್ರತಿಯಾಗಿ ಕೋವ್ಯಾಕ್ಸ್ ಮೂಲಕ 97 ದಶಲಕ್ಷ (9.7 ಕೋಟಿ) ಡೋಸ್ ಕೋವಿಡ್ ಲಸಿಕೆ ವಿದೇಶಗಳಿಂದ ಭಾರತಕ್ಕೆ ಬಂದಿದೆ' ಎಂದು ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಪೋಸ್ಟರ್ ಪ್ರಕಟಿಸಿದೆ.



ಕೋವ್ಯಾಕ್ಸ್ ಒಪ್ಪಂದದ ಅಡಿ 2021ರ ಏಪ್ರಿಲ್ 16ರ ಅಂತ್ಯಕ್ಕೆ ಭಾರತವು ವಿವಿಧ ದೇಶಗಳಿಗೆ 1.98 ಕೋಟಿ ಡೋಸ್‌ಗಳಷ್ಟು ಕೋವಿಶೀಲ್ಡ್ ಲಸಿಕೆಯನ್ನು ಪೂರೈಕೆ ಮಾಡಿದೆ. ಕೋವ್ಯಾಕ್ಸ್ ಒಪ್ಪಂದದಲ್ಲಿ ಆಸ್ಟ್ರಾಜೆನೆಕಾದ ಕೋವಿಶೀಲ್ಡ್ ಮತ್ತು ಫೈಝರ್- ಬಯೋಎನ್‌ಟೆಕ್‌ನ ಲಸಿಕೆಯನ್ನು ಮಾತ್ರ ಪೂರೈಕೆ ಮಾಡಲಾಗುತ್ತಿದೆ. ಈ ಒಪ್ಪಂದದ ಅಡಿ ಭಾರತಕ್ಕೆ ಬೇರೆ ಯಾವ ದೇಶವೂ ಲಸಿಕೆಯನ್ನು ಪೂರೈಕೆ ಮಾಡಿಲ್ಲ. ರಷ್ಯಾದ ಸ್ಪುಟ್ನಿಕ್-ವಿ ಲಸಿಕೆ ಕೋವ್ಯಾಕ್ಸ್ ಒಪ್ಪಂದದಲ್ಲಿ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಪೋಸ್ಟ್‌ಕಾರ್ಡ್ ಕನ್ನಡ ತನ್ನ ಫೇಸ್‌ಬುಕ್ ಪುಟದಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡಿದೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಮೇ 29, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ತೃತೀಯ ಗಂ. 10-41 (ಹ. 10-16) ಶನಿವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 40-38 (ರಾ. 10-15) ಶುಭ ನಾಮ ಯೋಗ ಗಂ 27-42 ಭದ್ರ ಕರಣ ಗಂ. 10-41 ವಿಷ ಗಂ. 6-38 ಪುರ್ವಿಷ ಗಂ. 59-45 ಅಮೃತ ಗಂ. 29-35 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-56 ಸೂರ್ಯಾಸ್ತ: 6-37 ಅದೃಷ್ಟ ಸಂಖ್ಯೆ 3, 5

ಮೇಷ: ಉದ್ಯೋಗಿಗಳು ಪದೋನ್ನತಿಯನ್ನು ಪಡೆಯುವ ಸಾಧ್ಯತೆಗಳು ನಿಚ್ಚಳವಾಗಿವೆ. ಗುತ್ತಿಗೆದಾರರು ಹೆಚ್ಚಿನ ಲಾಭವನ್ನು ಗಳಿಸಲಿದ್ದೀರಿ. ಸ್ಥಿರಾಸ್ತಿಗಳನ್ನು ಖರೀದಿ ಮಾಡುವ ಸಾಧ್ಯತೆ ಕಂಡುಬರುತ್ತಿದೆ.

ವೃಷಭ: ಸಾಮಾಜಿಕ ಕೆಲಸಗಳಲ್ಲಿ ತೊಡಗಿರುವವರಿಗೆ ಅವಕಾಶಗಳು ದೊರಕುವ ಸಾಧ್ಯತೆ. ಮಗಳ ವಿವಾಹದ ಕುರಿತು ಮಾತುಕತೆಗಳನ್ನು ನಡೆಸಲಿದ್ದೀರಿ. ವ್ಯವಹಾರದಲ್ಲಿ ಚತುರತೆಯನ್ನು ಮೆರೆಯಲಿದ್ದೀರಿ.

ಮಿಥುನ: ಬಲವಾದ ವಿಚಾರವೊಂದನ್ನು ಪ್ರತಿಪಾದಿಸುವ ಹವಣಿಕೆಯಲ್ಲಿ ಮನಸ್ತಾಪವನ್ನು ಎದುರಿಸಬೇಕಾದೀತು. ನೆರೆಹೊರೆಯವರ ದೂಷಣೆಯನ್ನು ಕೇಳುವಂತಹ ಸಾಧ್ಯತೆ. ಮಾನಸಿಕ ಹತೋಟಿಯನ್ನು ಕಾಪಾಡಿಕೊಳ್ಳಿ.

ಕರ್ಕಾಟಕ: ಸರ್ಕಾರಿ ಉದ್ಯೋಗಿಗಳಿಗೆ ಒಳ್ಳೆಯ ದಿನವಾಗಿದೆ. ಮೇಲಧಿಕಾರಿಗಳ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾವರಣದಲ್ಲಿ ಅಧ್ಯಯನ ಮಾಡುವ ಅವಕಾಶ ದೊರಕುವುದು.

ಸಿಂಹ: ಕಳ್ಳಕಾಕರ ಭಯವು ನಿಮ್ಮನ್ನು ಕಾಡುವ ಸಾಧ್ಯತೆ. ಹೆಣ್ಣುಮಕ್ಕಳು ಹೆಚ್ಚು ಜಾಗರೂಕರಾಗಿರುವುದು ಉತ್ತಮ. ಚರಾಸ್ತಿಯ ಬಗ್ಗೆ ವಿಶೇಷವಾಗಿ ಜೋಪಾನವಾಗಿರಿ. ಅಧಿಕಾರಿಗಳು ಸ್ನೇಹಕೂಟದಲ್ಲಿ ಭಾಗವಹಿಸುವ ಸಾಧ್ಯತೆ.

ಕನ್ಯಾ: ದೂರಪ್ರಯಾಣ ಅಥವಾ ಪ್ರವಾಸಕ್ಕಾಗಿ ದಿನ ನಿರ್ಧಾರ ಮಾಡಲಿದ್ದೀರಿ. ವಿದ್ಯಾರ್ಥಿಗಳು ಹೆಚ್ಚಿನ ಉತ್ಸಾಹದಿಂದ ವ್ಯಾಸಂಗದಲ್ಲಿ ತೊಡಗಿಕೊಳ್ಳುವ ದಿನ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ಕೂಡಿ ಬರುವ ಸಾಧ್ಯತೆ.

ತುಲಾ: ಭೂಮಿ - ಸ್ಥಿರಾಸ್ತಿಗಳ ವ್ಯವಹಾರದಲ್ಲಿ ಉತ್ತಮ ಲಾಭ. ಆದರೆ ಪಾಲುಗಾರಿಕೆ ವ್ಯವಹಾರದ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರುವುದು ಉತ್ತಮ. ಆರೋಗ್ಯದ ವಿಚಾರದಲ್ಲಿ ಸ್ವಲ್ಪ ಮಟ್ಟಿನ ತೊಂದರೆ ಸಾಧ್ಯತೆ.

ವೃಶ್ಚಿಕ: ಇಂದು ಸಂತಸದ ದಿನ. ವಾಹನ ಖರೀದಿಗೆ ಮುಂದಾಗುವ ಸಾಧ್ಯತೆ. ಮನೆಯಲ್ಲಿ ಮಂಗಳಕಾರ್ಯಗಳ ಬಗೆಗೆ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಿದ್ದೀರಿ. ವ್ಯಾಪಾರಸ್ಥರಿಗೆ ಸಾಮಾನ್ಯ ದಿನವಾಗಿ ಕಂಡುಬರುತ್ತಿದೆ.

ಧನು: ವಿದ್ಯಾರ್ಥಿಗಳಿಗೆ ಅಷ್ಟೊಂದು ಯಶಸ್ಸನ್ನು ತರದಿದ್ದರೂ, ಪ್ರಯತ್ನವನ್ನು ಮುಂದುವರಿಸಿದಲ್ಲಿ ಯಶಸ್ಸಿನ ಮಾರ್ಗ ಗೋಚರವಾಗುವುದು. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉತ್ತಮ ಸ್ಥಾನಮಾನಗಳು ದೊರೆಯುವುದು.

ಮಕರ: ರೈತಾಪಿ ವರ್ಗದವರಿಗೆ ಸಂತಸ ಮೂಡುವ ದಿನ. ಉತ್ತಮ ಆದಾಯದ ನಿರೀಕ್ಷೆ ಮಾಡಬಹುದು. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆಗಳು ಕಂಡುಬರುತ್ತಿದೆ. ಪ್ರಯಾಣದಲ್ಲಿ ಸುಖಾನುಭವ ನಿಮ್ಮದಾಗುವುದು.

ಕುಂಭ: ಜನ ಪ್ರತಿನಿಧಿಗಳೆನಿಸಿಕೊಂಡವರಿಗೆ ಕಿರಿಕಿರಿ ಸಾಧ್ಯತೆ. ದೃಢ ನಿರ್ಧಾರ ತೆಗೆದುಕೊಳ್ಳುವಲ್ಲಿ ಕಷ್ಟಪಡಬೇಕಾದ ಪರಿಸ್ಥಿತಿ. ಧೃತಿಗೆಡದೆ ತಾಳ್ಮೆವಹಿಸಿ, ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳಿ. ಹಿರಿಯರ ಸಲಹೆಗೆ ಮನ್ನಣೆ ನೀಡಿ.


ಮೀನ: ಮನಸ್ಸಿನಲ್ಲಿರುವ ಯೋಚನೆಯನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸುವಿರಿ. ಸಂಗಾತಿಯಲ್ಲಿ ಮನಬಿಚ್ಚಿ ಮಾತನಾಡಿ. ಆರ್ಥಿಕವಾದ ಬಳಲಿಕೆಯು ದೂರವಾಗಿ ಸಬಲರಾಗುವಲ್ಲಿ ಆಶಾಕಿರಣ ಮೂಡಿಬರುವುದು.

ನಿಮ್ಮ ಜನ್ಮದಿನ 29-ಮೇ ಈ ದಿನ ಅತ್ಯಂತ ಶುಭಕರ. ಸಮಾನ ಮನಸ್ಕರೊಂದಿಗೆ ಕೆಲಸ ಮಾಡುವುದರಿಂದ ಹೊಸ ಉತ್ಸಾಹ ಮೂಡುವುದರೊಂದಿಗೆ ಸಾಧನೆ ಮಾಡಲಿದ್ದೀರಿ. ಸಮಾಜದ ಕೆಳಸ್ತರದವರಿಗಾಗಿ ನಡೆಸುವ ಸಾತ್ವಿಕ ಹೋರಾಟದಲ್ಲಿ ಯಶಸ್ಸಿನೊಂದಿಗೆ ಗೌರವಾದರಗಳು. ಹಿರಿಯರ ಸಕಾಲಿಕ ನೆರವಿನಿಂದಾಗಿ ಆತಂಕದ ಕ್ಷಣಗಳಿಂದ ಪಾರಾಗುವಿರಿ.

ಪದಬಂಧ 4611 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಬ್ಬಿಣವನ್ನು ಆಕರ್ಷಿಸುವಂಥದ್ದು (4)
3.ಭಾವ ಕೊನೆಗಿದ್ದು ತೋರಿದ ವರ್ಚಸ್ಸು! (3)
5.ಹನುಮಂತನ ಇನ್ನೊಂದು ಹೆಸರು (5)
7.ಋತುಗಳ ರಾಜನಿವನು (3)
8.ಹೆಸರಿಡುವ ಶಾಸ್ತ್ರ (5)
10.ಒಬವ್ವನ ಆಯುಧ (3)
11.ಹೇಳಲಾರದ ಯಾತನೆ (5)
14.ತೊಟ್ಟಿಲು ಕಾಣುವ ಜಾಗದಲ್ಲಿನ ಪಾವಟಿಗೆ (3)
15.ರಾಡಿಯಲ್ಲಿರುವ ಭೂತಗನ್ನಡಿ ಕಾಣುತ್ತಿದೆಯೇ? (5)

ಮೇಲಿಂದ ಕೆಳಕ್ಕೆ
1.ಈತ ಅತಿಯಾಸೆಯುಳ್ಳವನು (3)
2.ಬನದ ಹತ್ತಿರ ನೀಡಿದ ಮುತ್ತು (3)
4.ಈಕೆ ಹೆಂಗಸು (3)
6.ಮಗ ಕೊನೆಗೆ ತಿರುಗಿದರೆ ಇದು ಸಲೀಸು! (3)
7.ನೀರಿನ ಅಧಿದೇವತೆ (3)
8.ಹೆಚ್ಚಿಗೆ ಹೇಳಲಾರದ ಲಜ್ಜೆಯಿದು (3)
9.ಈತ ವಿಲಾಸಪ್ರಿಯ (3)
10.ಮೆಲುವಾಗಿ ವ್ಯಕ್ತಪಡಿಸಿರುವ ಪ್ರೀತಿ! (3)
12.ಉತ್ತೇಜನಕರವಾದ ಆಹಾರ (3)
13.ಅಡಿಗಡಿಗೆ ತಲೆದೋರುವ ಶೀತ (3)



4610ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಒಸಡು 4.ವರುಣ 5.ತಳಹದಿ 6.ಹತ್ಯಾಕಾಂಡ 8.ಟೆಸ 10.ಉಪಾ 13.ರಸಮಯ 14.ಪರಿಹಾಸ 15.ಗಾಚಾರ 16.ಉದಾರ

ಮೇಲಿಂದ ಕೆಳಕ್ಕೆ: 1.ಅವತರಣಿಕೆ 2.ಒಣಹರಟೆ 3.ಮಹಲು 5.ತಡಸಲು 7.ಅಕಾಲಮರಣ 9.ಸಮರಸ 11.ಪಾಳೆಯಗಾರ 12.ಹೆರಿಗೆ

ಸುಡೊಕು 4997

7		4		5				3
	2		1		9	6		5
		5		3				
2					4	1		9
9	7	1		8			4	
4			9		2	3		7
	4		3		7		2	
						7		
1	3			2			6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4996 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಅಮೆರಿಕ ಪ್ರವಾಸದಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಪ್ರತಿಪಾದನೆ • ಅಮೆರಿಕದ ನೆರವಿಗೆ ಕೃತಜ್ಞತೆ

ಕೋವಿಡ್ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಕರೆ

ವಾಷಿಂಗ್ಟನ್ (ಪಿಟಿಐ): 'ಭಾರತ ಮತ್ತು ಅಮೆರಿಕದ ಜನರ ನಡುವಣ ಸಂಬಂಧವು ಕೋವಿಡ್ ಹೋರಾಟದಲ್ಲಿ ನೆರವಾಗಿದೆ. ಎರಡೂ ದೇಶಗಳ ಜನರ ನಡುವಣ ಸಂಬಂಧವು, ಎರಡೂ ದೇಶಗಳ ನಡುವಣ ಸಹಕಾರ ಸಂಬಂಧ ಗಟ್ಟಿಗೊಳ್ಳಲು ಕಾರಣವಾಗಿದೆ. ಕೋವಿಡ್ ವಿರುದ್ಧ ಸಮರ್ಥವಾಗಿ ಹೋರಾಡಲು ಈ ಸಹಕಾರ ಮತ್ತಷ್ಟು ಗಟ್ಟಿಗೊಳ್ಳಬೇಕು' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವನ್ ಹೇಳಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಜೈಶಂಕರ್ ಅವರು ಸಲಿವನ್ ಅವರನ್ನು ಭೇಟಿ ಮಾಡಿ, ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಮಾತುಕತೆಯ ನಂತರ ಇಬ್ಬರು ನಾಯಕರೂ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ.



ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವನ್ ಮತ್ತು ಸಚಿವ ಜೈಶಂಕರ್ ಅವರು ಮಾತುಕತೆಯ ನಂತರ ಚಿತ್ರ ತೆಗೆಸಿಕೊಂಡರು — ಪಿಟಿಐ ಚಿತ್ರ

'ಈ ಭೇಟಿಯಲ್ಲಿ ಭಾರತ-ಪೆಸಿಫಿಕ್ ಪ್ರದೇಶವನ್ನು ಮುಕ್ತ ಮತ್ತು ಸ್ವತಂತ್ರವಾಗಿ ಇರಿಸುವುದರ ಬಗ್ಗೆ ಇಬ್ಬರು ನಾಯಕರೂ ದೀರ್ಘವಾಗಿ ಚರ್ಚಿಸಿದ್ದಾರೆ. ಈ ಪ್ರದೇಶದಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಕೊಳ್ಳಲು ಯತ್ನಿಸುತ್ತಿರುವ ಚೀನಾದ ಪ್ರಯತ್ನಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಅತಿಕ್ರಮಣದ ಬಗ್ಗೆಯೂ ಮಾತುಕತೆ ನಡೆದಿದ್ದು, ಕ್ವಾಡ್ ಒಕ್ಕೂಟದ ಸಹಕಾರವನ್ನು ಬಲಪಡಿಸುವ ಬಗ್ಗೆ ಇಬ್ಬರು ನಾಯಕರು ಸಹಮತ ಸೂಚಿಸಿದ್ದಾರೆ' ಎಂದು ಸಲಿವನ್ ಅವರ ಮಾಧ್ಯಮ ಪ್ರತಿನಿಧಿ ಎಮಿಲಿ ಹಾರ್ನೆ ಹೇಳಿದ್ದಾರೆ.

ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆಯನ್ನು ಎದುರಿಸುವಲ್ಲಿ ಅಮೆರಿಕವು ಭಾರಿ ನೆರವು ನೀಡಿತ್ತು. ಅಮೆರಿಕ ಸರ್ಕಾರ, ಅಮೆರಿಕದ ವಿವಿಧ ರಾಜ್ಯಗಳ ಸರ್ಕಾರಗಳು, ಉದ್ದಿಮೆ ಸಂಸ್ಥೆಗಳು, ನಾಗರಿಕರು ಮತ್ತು ಭಾರತೀಯ ಅಮೆರಿಕನ್ನರು ಭಾರತಕ್ಕೆ ನೆರವಿನ ಹಸ್ತ ಚಾಚಿದ್ದರು. ಈ ಮೂಲಕ ಅಮೆರಿಕದಿಂದ ಈವರೆಗೆ ಅಂದಾಜು ₹36,230 ಕೋಟಿ (5 ಕೋಟಿ ಅಮೆರಿಕನ್ ಡಾಲರ್) ಮೊತ್ತದಷ್ಟು ನೆರವು ದೊರೆತಿದೆ. ನೆರವು ನೀಡಿದಕ್ಕೆ ಸಚಿವ ಜೈಶಂಕರ್ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

'ಲಸಿಕೆ ಸಹಕಾರ ಅಗತ್ಯ'

'ಕೋವಿಡ್ ಲಸಿಕೆ ತಯಾರಿಕೆಯಲ್ಲಿ ಅಮೆರಿಕ ಮತ್ತು ಭಾರತವು ಸಹಕಾರ ಒಪ್ಪಂದ ಮಾಡಿಕೊಂಡರೆ, ಕೋವಿಡ್ ನಿಯಂತ್ರಿಸುವುದು ಸುಲಭವಾಗಲಿದೆ' ಎಂದು ಜೈಶಂಕರ್ ಹೇಳಿದ್ದಾರೆ.

ಅಮೆರಿಕದ ವಾಣಿಜ್ಯ ವ್ಯವಹಾರಗಳ ಪ್ರತಿನಿಧಿ ಕ್ಯಾಥರಿನ್ ಥಾಯ್ ಅವರ ಜತೆ ಜೈಶಂಕರ್ ಅವರು ಮಾತುಕತೆ ನಡೆಸಿದ್ದು, ಕೋವಿಡ್ ಲಸಿಕೆಗೆ ಸಂಬಂಧಿಸಿದ ಬೌದ್ಧಿಕ ಹಕ್ಕು ಸ್ವಾಮ್ಯವನ್ನು ಸಡಿಲಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದಕ್ಕೆ ಅಮೆರಿಕವು ಧನಾತ್ಮಕವಾಗಿ ಪ್ರತಿಕ್ರಿಯಿಸಿದೆ ಎಂದು ಮೂಲಗಳು ಹೇಳಿವೆ. 'ಈ ಪ್ರಸ್ತಾವಕ್ಕೆ ಥಾಯ್ ಅವರು ಧನಾತ್ಮಕವಾಗಿ ಸ್ಪಂದಿಸಿದ್ದಾರೆ. ಲಸಿಕೆ ತಯಾರಿಕೆಗೆ ಸಂಬಂಧಿಸಿದ ವಸ್ತುಗಳ ಪೂರೈಕೆಯಲ್ಲಿನ ತೊಡಕು ನಿವಾರಣೆಯಾಗುತ್ತದೆ ಎಂಬ ಭರವಸೆ ಇದೆ' ಎಂದು ಜೈಶಂಕರ್ ಹೇಳಿದ್ದಾರೆ.

ಕೋವಿಡೋತ್ತರ ಕಾಲದಲ್ಲಿ ಆರ್ಥಿಕತೆಯನ್ನು ಮರಳಿ ಹಳಿಗೆ ತರಲು ಅಮೆರಿಕದ ಜತೆಗೆ ವಾಣಿಜ್ಯ, ತಂತ್ರಜ್ಞಾನ ಸಹಕಾರವನ್ನು ಗಟ್ಟಿಗೊಳಿಸುವುದು ಅತ್ಯವಶ್ಯಕ

ಎಸ್.ಜೈಶಂಕರ್, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ

ಕೋವಿಡ್ ಕೊನೆಗಾಣಿಸುವಲ್ಲಿ ಎರಡೂ ದೇಶಗಳ ಸಹಕಾರವು ದೊಡ್ಡ ಪ್ರಮಾಣದಲ್ಲಿ ನೆರವಿಗೆ ಬರಲಿದೆ. ಎರಡೂ ದೇಶಗಳು ಒಟ್ಟಾಗಿ ಕೋವಿಡ್ ಅನ್ನು ಕೊನೆಗಾಣಿಸಲಿವೆ

ಜೇಕ್ ಸಲಿವನ್, ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ

ನಾರದಾ ಪ್ರಕರಣ: ಟಿಎಂಸಿ ಮುಖಂಡರಿಗೆ ಜಾಮೀನು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಚಿವರಾದ ಫಿರ್ಹಾದ್ ಹಕೀಮ್ ಮತ್ತು ಸುಬ್ರತಾ ಮುಖರ್ಜಿ, ಟಿಎಂಸಿ ಶಾಸಕ ಮದನ್ ಮಿತ್ರಾ ಹಾಗೂ ಕೋಲ್ಕತ್ತದ ಮಾಜಿ ಮೇಯರ್ ಸೋವನ್ ಚಟರ್ಜಿ ಅವರಿಗೆ ಕಲ್ಕತ್ತಾ ಹೈಕೋರ್ಟ್ ನಾರದಾ ಲಂಚ ಹಗರಣದಲ್ಲಿ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ.

ಈವರೆಗೆ ಗೃಹ ಬಂಧನದಲ್ಲಿ ಇದ್ದ ಆರೋಪಿಗಳಿಗೆ ಹಲವು ಷರತ್ತುಗಳನ್ನು ವಿಧಿಸಿ ಜಾಮೀನು ಕೊಡಲಾಗಿದೆ. ತಲಾ ₹2 ಲಕ್ಷ ಮೌಲ್ಯದ ಬಾಂಡ್ ನೀಡುವಂತೆಯೂ ಐವರು ನ್ಯಾಯಮೂರ್ತಿಗಳ ಪೀಠವು ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಬಾರದು, ತನಿಖಾಧಿಕಾರಿಯು ಬಯಸಿದರೆ ವರ್ಚುವಲ್ ಮಾಧ್ಯಮದ ಮೂಲಕ ತನಿಖೆಗೆ ಹಾಜರಾಗಬೇಕು ಎಂದು ಪೀಠವು ನಿರ್ದೇಶನ ನೀಡಿದೆ.

ನಾರದಾ ಸುದ್ದಿಜಾಲ ತಾಣವು ನಡೆಸಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಟಿಎಂಸಿಯ ಮುಖಂಡರು ಲಂಚ ಪಡೆದಿದ್ದಾರೆ ಎಂಬ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಕಲ್ಕತ್ತಾ ಹೈಕೋರ್ಟ್ 2017ರಲ್ಲಿ ಆದೇಶ ನೀಡಿತ್ತು. ನಾಲ್ವರು ಆರೋಪಿ ಗಳನ್ನು ಸಿಬಿಐ ಇದೇ 17ರಂದು ಬಂಧಿಸಿತ್ತು.

ಸಿಬಿಐ ವಿಶೇಷ ನ್ಯಾಯಾಲಯವು ಆರೋಪಿಗಳಿಗೆ ಅದೇ ದಿನ ಜಾಮೀನು ನೀಡಿತ್ತಾದರೂ ಹೈಕೋರ್ಟ್ ಅದಕ್ಕೆ ತಡೆ ಕೊಟ್ಟಿತ್ತು. ಹಾಗಾಗಿ, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿತ್ತು.

ಆಸ್ಕರ್ ಪ್ರಶಸ್ತಿ ಸಮಾರಂಭ ಮುಂದೂಡಿಕೆ

ಲಾಸ್ ಏಂಜಲಿಸ್ (ಪಿಟಿಐ): 2022ರ ಆವೃತ್ತಿಯ ಆಸ್ಕರ್ ಪ್ರಶಸ್ತಿ ಸಮಾರಂಭವನ್ನು ಮುಂದಿನ ವರ್ಷ ಮಾರ್ಚ್‌ನಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಈ ಮೊದಲು 2022ರ ಫೆ. 27ರಂದು ಆಯೋಜಿಸಲು ನಿರ್ಧರಿಸಲಾಗಿತ್ತು. ಈಗ 2022ರ ಮಾರ್ಚ್ 27ರಂದು ಸಮಾರಂಭ ಆಯೋಜಿಸಲಾಗುವುದು ಎಂದು ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಆ್ಯಂಡ್ ಸೈನ್ಸ್ ತಿಳಿಸಿದೆ.


ಕೇಂದ್ರ ಸರ್ಕಾರದ ಜನಪ್ರಿಯತೆ ಕುಸಿತ

'ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ-2 ಸರ್ಕಾರದ ಜನಪ್ರಿಯತೆ ಕುಗ್ಗಿದೆ. 2020ಕ್ಕೆ ಹೋಲಿಸಿದರೆ ಮೋದಿ ನೇತೃತ್ವದ ಸರ್ಕಾರದ ಜನಪ್ರಿಯತೆಯಲ್ಲಿ 11 ಶೇಕಡಾವಾರು ಅಂಶಗಳಷ್ಟು ಇಳಿಕೆಯಾಗಿದೆ. ಕೋವಿಡ್‌ನ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ವಿಫಲವಾದದ್ದೇ ಜನಪ್ರಿಯತೆ ಇಳಿಕೆಗೆ ಕಾರಣ' ಎಂದು ಲೋಕಲ್ ಸರ್ಕಲ್ಸ್ ತನ್ನ ಸಮೀಕ್ಷಾ ವರದಿಯಲ್ಲಿ ಹೇಳಿದೆ. 70 ಸಾವಿರ ಜನರು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ. 1.69 ಲಕ್ಷ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ. ಇವುಗಳ ಆಧಾರದ ಮೇಲೆ ಸಮೀಕ್ಷೆಯ ವರದಿಯನ್ನು ಸಿದ್ಧಪಡಿಸಲಾಗಿದೆ

ಲೋಕಲ್ ಸರ್ಕಲ್ಸ್ ಸಮೀಕ್ಷೆ ವರದಿ


- ಕೋವಿಡ್ ಮೊದಲ ಅಲೆಯನ್ನು ಸರ್ಕಾರ ಉತ್ತಮವಾಗಿ ನಿರ್ವಹಣೆ ಮಾಡಿದೆ ಎಂದು ಶೇ 66ರಷ್ಟು ಜನರು ಹೇಳಿದ್ದಾರೆ
- ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಸರ್ಕಾರವು ಉತ್ತಮವಾಗಿ ನಿರ್ವಹಣೆ ಮಾಡಿದೆ ಎಂದು ಶೇ 55ರಷ್ಟು ಜನರು ಹೇಳಿದ್ದಾರೆ
- ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಶೇ 61ರಷ್ಟು ಜನರು ಹೇಳಿದ್ದಾರೆ. ಶೇ 27ರಷ್ಟು ಜನರು ನಿರುದ್ಯೋಗ ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸಿದೆ ಎಂದಿದ್ದಾರೆ
- ದೇಶದಲ್ಲಿ ಕಳೆದ ಎರಡು ವರ್ಷದಲ್ಲಿ ಭ್ರಷ್ಟಾಚಾರದ ಪ್ರಮಾಣ ಇಳಿಕೆಯಾಗಿಲ್ಲ ಎಂದು ಶೇ 51ರಷ್ಟು ಜನರು ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರವು ಭ್ರಷ್ಟಾಚಾರವನ್ನು ನಿಯಂತ್ರಿಸಿದೆ ಎಂದು ಶೇ 39ರಷ್ಟು ಜನರು ಹೇಳಿದ್ದಾರೆ
- ಜಾಗತಿಕ ಮಟ್ಟದಲ್ಲಿ ಭಾರತದ ವರ್ಚಸ್ಸು ಏರಿಕೆಯಾಗಿದೆ ಎಂದು ಶೇ 59ರಷ್ಟು ಜನರು ಹೇಳಿದ್ದರೆ, ಇಳಿಕೆಯಾಗಿದೆ ಎಂದು ಶೇ 35ರಷ್ಟು ಜನರು ಹೇಳಿದ್ದಾರೆ
- ಮೋದಿ ಅವರ ಎನ್‌ಡಿಎ-2 ಸರ್ಕಾರವು ಸಂಸದೀಯ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದೆ ಎಂದು ಶೇ 61ರಷ್ಟು ಜನರು ಅಭಿಪ್ರಾಯಪಟ್ಟಿದ್ದಾರೆ. ಸರಿಯಾಗಿ ನಿರ್ವಹಿಸಿಲ್ಲ ಎಂದು ಶೇ 33ರಷ್ಟು ಜನರು ಹೇಳಿದ್ದಾರೆ
- ಎರಡು ವರ್ಷಗಳಲ್ಲಿ ಅಗತ್ಯವಸ್ತುಗಳ ಬೆಲೆ ಮತ್ತು ಜೀವನ ನಿರ್ವಹಣೆ ವೆಚ್ಚವು ಇಳಿಕೆಯಾಗಿಲ್ಲ ಎಂದು ಶೇ 77ರಷ್ಟು ಜನರು ಹೇಳಿದ್ದಾರೆ. ಇಳಿಕೆಯಾಗಿದೆ ಎಂದು ಶೇ 19ರಷ್ಟು ಜನರು ಹೇಳಿದ್ದಾರೆ

ಸರ್ಕಾರವು ನಮ್ಮ ನಿರೀಕ್ಷೆಗಳನ್ನು ಈಡೇರಿಸಿದೆ ಎಂದು ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಶೇ 50ಕ್ಕೂ ಹೆಚ್ಚು ಜನರು ಹೇಳಿದ್ದಾರೆ



1. ನಿರೀಕ್ಷೆಗಳನ್ನು ಈಡೇರಿಸಿದೆ ಎಂದು 2019ರ ಮಾರ್ಚ್‌ನಲ್ಲಿ ಹೇಳಿದವರ ಪ್ರಮಾಣ
2. ನಿರೀಕ್ಷೆಗಳನ್ನು ಈಡೇರಿಸಿದೆ ಎಂದು 2020ರ ಮೇನಲ್ಲಿ ಹೇಳಿದವರ ಪ್ರಮಾಣ
3. ನಿರೀಕ್ಷೆಗಳನ್ನು ಈಡೇರಿಸಿದೆ ಎಂದು 2021ರಲ್ಲಿ ಹೇಳಿದವರ ಪ್ರಮಾಣ

ಸರ್ಕಾರದ ಅಂಕಪಟ್ಟಿ



1. ತಮ್ಮ ನಿರೀಕ್ಷೆಯನ್ನೂ ಮೀರಿ ಸರ್ಕಾರ ಕೆಲಸ ಮಾಡಿದೆ ಎಂದವರು
2. ತಮ್ಮ ನಿರೀಕ್ಷೆಗಳನ್ನು ಸರ್ಕಾರ ಈಡೇರಿಸಿದೆ ಎಂದವರು
3. ತಮ್ಮ ನಿರೀಕ್ಷೆಗಳನ್ನು ಸರ್ಕಾರ ಈಡೇರಿಸಿಲ್ಲ ಎಂದವರು

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್-19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 25 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 27 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ-ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ದಿಲೀಪ್ ಅಶೋಕ,** ಜಿ1, ನಾರ್ತ್ ಪಾರ್ಕ್, 30 ಎಂಇಜಿ ಆಫೀಸರ್ಸ್ ಕಾಲೊನಿ, ಬೆಂಗಳೂರು	2,00,000
2.	**ಅಭಿಷೇಕ್ ಮುದ್ರಂ,** ನಂ. 2006, ಸಂಜೀವನ, ಕರಿಷ್ಮಾ ಹಿಲ್ಸ್, ಗುಬ್ಬಲಾಳ, ಕನಕಪುರ ರಸ್ತೆ, ಬೆಂಗಳೂರು	50,000
3.	**ಗಿರಿರಾಜು ಎಂ.ಎಸ್.,** ನಂ. 86, ಉದಯಗಿರಿ, ಮೈಸೂರು	10,000
4.	**ಟೀಮ್ಯಾಗ್ ಎಂಟರ್‌ಪ್ರೈಸಸ್ ಪ್ರೈ. ಲಿ.,** ನಂ. 3, ಒಂದನೇ ಮೇನ್, 2ನೇ ಕ್ರಾಸ್, ಮೈಕೊ ಲೇಔಟ್, ಬಿಟಿಎಂ 2ನೇ ಹಂತ, ಬೆಂಗಳೂರು	10,000
5.	**ಎಂ.ಆರ್.ಎಸ್.ಹೆಗ್ಗಡೆ ,** ಆಶ್ರಯ, ರಾಣಿ ಚನ್ನಮ್ಮ ಸರ್ಕಲ್, ಸಾಗರ	5,555
6.	**ಲೀಲಾ ನಾಗರಾಜ,** ನಂ. 510, 13ನೇ ಮೇನ್, ಸರಸ್ವತಿಪುರಂ, ಮೈಸೂರು	5,000
7.	**ನಾಗಮ್ಮ ಧ್ರುವ,** ನಂ. 20/2, ಕೇಶವ ಕೃಪಾ, ವಿನಾಯಕ ಲೇಔಟ್, 8ನೇ ಮೇನ್, ಮಲ್ಲೇಶ್ವರಂ, ಬೆಂಗಳೂರು	5,000
8.	**ದರ್ಶನ್ ಎಸ್.,** ನಂ. 1996, ದರ್ಶನ್, 2ನೇ ಮೇನ್, 6ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ	5,000
9.	**ಬಿ.ಕೆ. ಸತ್ಯನಾರಾಯಣ,** ನಂ. 2716, ಬಿ–1, 3ನೇ ಕ್ರಾಸ್, 2ನೇ ಹಂತ 'ಡಿ'ಬ್ಲಾಕ್, ರಾಜಾಜಿನಗರ, ಬೆಂಗಳೂರು	4,000
10.	**ಪ್ರಾಣೇಶ್ ದಾಮೋದರ ಜೋಷಿ** 106, ವಸಂತನಗರ, ಕುಸುಗಲ್ ರಸ್ತೆ, ಕೇಶ್ವಾಪುರ, ಹುಬ್ಬಳ್ಳಿ	3,000
11.	**ವರ್ಷಾ ಪಿ. ದಂಡಾವತಿ,** ಎಫ್1, ಎಸ್.ವಿ. ಪ್ಯಾರಡೈಸ್, ಜೈನ್ ಟೆಂಪಲ್ ಎದುರು, 5ನೇ ಕ್ರಾಸ್, ಜೆ.ಪಿ.ನಗರ, 7ನೇ ಹಂತ, ಬೆಂಗಳೂರು	2,502
12.	**ಮೋಹನ್‌ರಾಜ್ ಮೂರ್ತಿ,** ನಂ. 36, ಆರ್.ಬಿ. ಎಂಪ್ಲಾಯ್ಸ್ ಗೌತಮ್ ಹೌಸಿಂಗ್ ಸೊಸೈಟಿ, ಕೊತ್ತನೂರು, ಜೆ.ಪಿ. ನಗರ, 8ನೇ ಹಂತ, ಬೆಂಗಳೂರು	2,000
13.	**ಗುರುಲಿಂಗಪ್ಪ ಎಂ.** ಅಮ್ಮಣಗಿ, ಫ್ಲ್ಯಾಟ್ ಎಫ್1, ರಕ್ಷಾ ಹೋಮ್ಸ್, 62/2, 6ನೇ ಮೇನ್, ಬಿಸಿಸಿ ಲೇಔಟ್, ಅತ್ತಿಗುಪ್ಪೆ, ಬೆಂಗಳೂರು	2,000
14.	**ಸುಕುಮಾರ ಪಿಳ್ಳೈ,** ನಂ. 242, 6ನೇ ಮೇನ್, ರಾಮಯ್ಯ ಎನ್‌ಕ್ಲೇವ್, ನಾಗಸಂದ್ರ ಪೋಸ್ಟ್, ಬೆಂಗಳೂರು	2,000
15.	**ಕೆ. ನಾರಾಯಣ,** ನಂ. 108, ಮೊದಲನೇ ಮಹಡಿ, 7ನೇ ಕ್ರಾಸ್, ಅಕ್ಷಯ ನಗರ, ಅಟ್ಟೂರು ಲೇಔಟ್, ಯಲಹಂಕ, ಬೆಂಗಳೂರು	2,000
16.	**ಮೋಹನ್ ಕಶೀರ,** ನಂ. 7, 4ನೇ ಕ್ರಾಸ್, ಸಪ್ತಗಿರಿ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	1,500
17.	**ಬಿ.ಎಸ್.ರವೀಂದ್ರ,** ನಂ. 6274, ವಿಶಾಲ್ ಶಾಲೆಯ ಎದುರು, ಸುಭಾಷ್ ನಗರ, ನೆಲಮಂಗಲ, ಬೆಂಗಳೂರು	1,001
18.	**ಶ್ರೀನಿವಾಸನ್ ಟಿ.ಎ.,** 10/2, ಕನಸು, 4ನೇ ಕ್ರಾಸ್, 3ನೇ ಮೇನ್, ಪಾಪಯ್ಯ ಗಾರ್ಡನ್, ಬನಶಂಕರಿ ಮೂರನೇ ಹಂತ, ಬೆಂಗಳೂರು	1,000
19.	**ರೇಖಾ ಗಾಂವಕರ್,** ಪುರಸಭೆ ಉಪಾಧ್ಯಕ್ಷೆ, ಅಂಕೋಲಾ	1,000
20.	**ಕೆ.ಸಿ. ಜಯರಾಮು,** ನಂ. 1054, ಮೊದಲ ಎಫ್ ಮೇನ್ ರಸ್ತೆ, ಗಿರಿನಗರ 2ನೇ ಹಂತ, ಬೆಂಗಳೂರು	1,000
	ಒಟ್ಟು ಹಣ	3,13,558

ಖಾಸಗಿ ಆಸ್ಪತ್ರೆಗೆ ಸ್ಟ್ಯಾನ್ ಸ್ವಾಮಿ ಸ್ಥಳಾಂತರಕ್ಕೆ ಸೂಚನೆ

ಮುಂಬೈ (ಪಿಟಿಐ): ಎಲ್ಗರ್ ಪರಿಷತ್–ಮಾವೊ ಪ್ರಕರಣದ ಆರೋಪಿ ಫಾದರ್ ಸ್ಟ್ಯಾನ್ ಸ್ವಾಮಿ ಅವರನ್ನು ಎರಡು ವಾರಗಳ ಚಿಕಿತ್ಸೆಗಾಗಿ ತಲೋಜಾ ಕಾರಾಗೃಹದಿಂದ ಮುಂಬೈನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಜೈಲಿನ ಅಧಿಕಾರಿಗಳಿಗೆ ಬಾಂಬೆ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.



ಸಂಕ್ಷಿಪ್ತ ಸುದ್ದಿ

ಡ್ರಗ್ಸ್ ಪ್ರಕರಣ: ಸುಶಾಂತ್ ಸ್ನೇಹಿತ ಸಿದ್ಧಾರ್ಥ್ ಬಂಧನ



ಸಿದ್ಧಾರ್ಥ್

ಮುಂಬೈ (ಪಿಟಿಐ): ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವು ಪ್ರಕರಣಕ್ಕೆ ತಳಕು ಹಾಕಿಕೊಂಡಿರುವ ಡ್ರಗ್ಸ್ ಪ್ರಕರ ಣಕ್ಕೆ ಸಂಬಂಧಿಸಿದಂತೆ ಸುಶಾಂತ್ ಅವರ ಸ್ನೇಹಿತ ಸಿದ್ಧಾರ್ಥ್ ಪಿಥಾನಿಯನ್ನು ಮಾದಕ ವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಶುಕ್ರವಾರ ಬಂಧಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರಧ್ವಜ ಬಳಕೆ: ಕೇಜ್ರಿವಾಲ್ ವಿರುದ್ಧ ಪ್ರಹ್ಲಾದ್ ಪಟೇಲ್ ಆರೋಪ

ನವದೆಹಲಿ (ಪಿಟಿಐ): 'ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡು ವಾಗ ರಾಷ್ಟ್ರಧ್ವಜವನ್ನು ಅಲಂಕಾರಿಕವಾಗಿ ಬಳಸಿದ್ದಾರೆ' ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಪ್ರಹ್ಲಾದ್ ಪಟೇಲ್ ಆರೋಪಿಸಿದ್ದಾರೆ.

ಈ ಸಂಬಂಧ ಕೇಜ್ರಿವಾಲ್ ಅವರಿಗೆ ಪತ್ರ ಬರೆದಿರುವ ಪಟೇಲ್, 'ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುವಾಗ ರಾಷ್ಟ್ರಧ್ವಜವು ಕೇಜ್ರಿವಾಲ್ ಅವರ ಹಿಂದೆ ಇತ್ತು. ಇದು ಧ್ವಜಸಂಹಿತೆಯ ಉಲ್ಲಂಘನೆ' ಎಂದು ದೂರಿದ್ದಾರೆ. 'ಕೇಜ್ರಿವಾಲ್ ಅವರು ರಾಷ್ಟ್ರಧ್ವಜವನ್ನು ಅಲಂಕಾರಿಕವಾಗಿ ಬಳಸಿದಂತೆ ಕಾಣಿಸುತ್ತದೆ. ಧ್ವಜದ ಮಧ್ಯದಲ್ಲಿರುವ ಬಿಳಿಯ ಭಾಗವು ಕಡಿಮೆಯಾಗಿದ್ದು, ಹಸಿರು ಬಣ್ಣದ ಭಾಗವನ್ನು ಹೆಚ್ಚಿಸಲಾಗಿದೆ. ಗೃಹಸಚಿವಾಲಯವು ನಿರ್ದಿಷ್ಟ ಪಡಿಸಿದ ಭಾರತದ ರಾಷ್ಟ್ರಧ್ವಜ ಸಂಹಿತೆಯ ನಿಬಂಧನೆಗಳಿಗೆ ಇದು ಅನುಗುಣವಾಗಿಲ್ಲ.' ಎಂದೂ ಪಟೇಲ್ ಪತ್ರದಲ್ಲಿ ಬರೆದಿದ್ದಾರೆ.

ಉತ್ತರ ಪ್ರದೇಶ: ಕಳ್ಳಭಟ್ಟಿ ಸೇವಿಸಿ 11 ಮಂದಿ ಸಾವು

ಅಲಿಗಢ/ಲಖನೌ (ಪಿಟಿಐ): 'ಉತ್ತರ ಪ್ರದೇಶದಲ್ಲಿ ಕಳ್ಳಭಟ್ಟಿ ಸೇವಿಸಿ 11 ಮಂದಿ ಶುಕ್ರವಾರ ಮೃತಪಟ್ಟಿದ್ದು, ಕೆಲವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮೃತಪಟ್ಟವರೆಲ್ಲರೂ ಟ್ರಕ್ ಚಾಲಕರು. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಅಮಾನತುಗೊಳಿಸಲಾಗಿದೆ' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಅಬಕಾರಿ) ಸಂಜಯ್ ಭೂಸರೆಡ್ಡಿ ತಿಳಿಸಿದ್ದಾರೆ.

5 ಟೋಲ್ ಪ್ಲಾಜಾಗಳಲ್ಲಿ ರೈತರ ಪ್ರತಿಭಟನೆ

ನೋಯ್ಡಾ(ಉತ್ತರಪ್ರದೇಶ, ಪಿಟಿಐ): ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರ ಗುಂಪೊಂದು ಇಲ್ಲಿನ ಯಮುನಾ ಎಕ್ಸ್‌ಪ್ರೆಸ್ ವೇನ ಜೆವಾರ್ ಟೋಲ್ ಪ್ಲಾಜಾದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿತು. ಉತ್ತರ ಪ್ರದೇಶದ ಟೋಲ್ ಪ್ಲಾಜಾಗಳಲ್ಲಿ ಪ್ರತಿಭಟನೆ ನಡೆಸಲು ಯೋಜನೆ ರೂಪಿಸಿದ್ದ ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು)ಪ್ರತಿನಿಧಿಗಳು ಗೌತಮ್ ಬುದ್ಧನಗರಕ್ಕೆ ಗುರುವಾರ ಬಂದಿದ್ದರು.

ವಿಮಾನಯಾನ: ಜೂನ್ 30ರ ತನಕ ನಿರ್ಬಂಧ

ನವದೆಹಲಿ (ಪಿಟಿಐ): ಕೋವಿಡ್-19ರ ಪರಿಸ್ಥಿತಿ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸಂಚಾರದ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ಜೂನ್ 30 ರವರೆಗೂ ಡಿಜಿಸಿಎ ವಿಸ್ತರಿಸಿದೆ.

ನಿರ್ದಿಷ್ಟ ಪ್ರಕರಣಗಳ ಆಧಾರದಲ್ಲಿ ಆಯ್ದ ಮಾರ್ಗಗಳಲ್ಲಿ ಅಂತರರಾಷ್ಟ್ರೀಯ ವಿಮಾನಯಾನಕ್ಕೆ ಅನುಮತಿ ನೀಡಲಾಗುವುದು ಎಂದು ಡಿಜಿಸಿಎ ಹೇಳಿಕೆ ತಿಳಿಸಿದೆ. ಅನುಮತಿ ಪಡೆದ ಸರಕು ಸಾಗಣೆ ವಿಮಾನಗಳ ಸಂಚಾರಕ್ಕೆ ಇದು ಅನ್ವಯವಾಗುವುದಿಲ್ಲ.


ಕೋವಿಡ್ ಪ್ರಕರಣಗಳು ಹೆಚ್ಚಿದಂತೆ 2020ರ ಮಾರ್ಚ್ 23ರಿಂದ ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಯಾನದ ಮೇಲೆ ನಿರ್ಬಂಧ ಹೇರಲಾಗಿದೆ.

ಮೇ 2020ರಿಂದ ವಂದೇ ಭಾರತ್ ಯೋಜನೆಯಡಿ ವಿಶೇಷ ವಿಮಾನಗಳು ಸಂಚರಿಸುತ್ತಿವೆ.

ವಿಶೇಷ ವಿಮಾನಗಳ ಸಂಚಾರಕ್ಕೆ ಸಂಬಂಧಿಸಿ ಭಾರತ ಒಟ್ಟು 27 ದೇಶಗಳ ನಡುವೆ ಒಡಂಬಡಿಕೆ ಮಾಡಿಕೊಂಡಿದೆ.







ಹಳ್ಳಿಗಳಲ್ಲಿ ಚಿಕಿತ್ಸೆಯೇ ದುರ್ಲಭ

• ಬಿ.ಜಿ.ಪ್ರವೀಣಕುಮಾರ

ಯಾದಗಿರಿ: ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಬಾರದ ವೈದ್ಯರು; ಆಸ್ಪತ್ರೆ ಇದ್ದರೂ ಸೌಕರ್ಯ ಇಲ್ಲವೆಂದು ನಗರ ಪ್ರದೇಶಗಳಿಗೆ ಶಿಫಾರಸು ಮಾಡಿ ಸಾಗಹಾಕುವ ಪರಿಪಾಠ, ತುರ್ತು ಚಿಕಿತ್ಸೆ ಸಿಗದೇ ರೋಗಿಗಳ ಪರದಾಟ-ಇವು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ನಿತ್ಯ ಕಂಡು ಬರುವ ಚಿತ್ರಣ.

ಜಿಲ್ಲೆಯ ವಡಗೇರಾ ತಾಲ್ಲೂಕು ಕೇಂದ್ರವಾದರೂ ಸಮುದಾಯ ಆರೋಗ್ಯ ಕೇಂದ್ರ ಹೊಂದಿದೆ. ಇಲ್ಲಿಗೆ ಬರುವ ರೋಗಿಗಳನ್ನು ಯಾದಗಿರಿ, ಶಹಾಪುರ, ರಾಯಚೂರು ಆಸ್ಪತ್ರೆಗಳಿಗೆ ತೆರಳುವಂತೆ 'ಶಿಫಾರಸು' ಮಾಡುವುದು ಸಾಮಾನ್ಯವಾಗಿದೆ. ವೈದ್ಯರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಹೀಗಾಗಿ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸಿಗುತ್ತಿಲ್ಲ. 'ಪ್ರಜಾವಾಣಿ' ಪ್ರತಿನಿಧಿ ಬೆಳಿಗ್ಗೆ 8 ಗಂಟೆಗೆ ವಡಗೇರಾ ಆಸ್ಪತ್ರೆ ಬಳಿ ಹೋಗಿ ವಿಚಾರಿಸಿದಾಗ 'ವೈದ್ಯರು ಇನ್ನೂ ಬಂದಿಲ್ಲ' ಎನ್ನುವ ಉತ್ತರ ಸಿಕ್ಕಿತು. 9 ಗಂಟೆಯಾದರೂ ಆಸ್ಪತ್ರೆಯತ್ತ ವೈದ್ಯರ ಸುಳಿವೇ ಇರಲಿಲ್ಲ.

'ರಾತ್ರಿ ವೇಳೆ ವೈದ್ಯರು ಇಲ್ಲದ್ದರಿಂದ, ಇತ್ತೀಚೆಗೆ ತುರ್ತು ಚಿಕಿತ್ಸೆಗಾಗಿ ಬಂದ ರೋಗಿಯೊಬ್ಬರನ್ನು ಶಹಾಪುರ ಆಸ್ಪತ್ರೆಗೆ ಶಿಫಾರಸು ಮಾಡಲಾಯಿತು. ಇಲ್ಲಿಂದ 60 ಕಿ.ಮೀ ದೂರದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಕೊಡಿಸಬೇಕಾಯಿತು. ಅನುಕೂಲ ಇದ್ದವರು ಹೇಗೋ ವಾಹನ ವ್ಯವಸ್ಥೆ ಮಾಡಿಕೊಂಡು ಹೋಗುತ್ತಾರೆ. ಆದರೆ, ಬಡವರಿಗೆ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದಿದ್ದರೆ ಸಾವೇ ಗತಿ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ಫಕೀರ್ ಅಹ್ಮದ್ ವಡಗೇರಾ.

ಜಿಲ್ಲೆಯ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳ ಪರಿಸ್ಥಿತಿಯೂ ಇದೇ ರೀತಿ ಇದೆ. ಜಿಲ್ಲೆಯಲ್ಲಿ ಸಮರ್ಪಕ ಆರೋಗ್ಯ ಸೇವೆ ಸಿಗದಿರುವುದರಿಂದ ಗುರುಮಠಕಲ್, ಸೈದಾಪುರ, ವಡಗೇರಾ, ಶಹಾಪುರ ತಾಲ್ಲೂಕುಗಳ ಜನತೆ ರಾಯಚೂರು ಆಸ್ಪತ್ರೆಗಳತ್ತ ಮುಖ ಮಾಡುವುದು ತಪ್ಪಿಲ್ಲ. ಸುರಪುರ ತಾಲ್ಲೂಕಿನವರು ಕಲಬುರ್ಗಿಗೆ ಮತ್ತು ಹುಣಸಗಿ ತಾಲ್ಲೂಕಿನವರು ವಿಜಯಪುರದ ಆಸ್ಪತ್ರೆಗಳಿಗೆ ತೆರಳುವುದು ಸಾಮಾನ್ಯ.

ಆಮ್ಲಜನಕ ಹಾಸಿಗೆ ಭರ್ತಿ: ಶಹಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಆಸ್ಪತ್ರೆಯಲ್ಲಿ ಆಮ್ಲಜನಕ ಇರುವ ಹಾಸಿಗೆಗಳು ಭರ್ತಿಯಾಗಿವೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು 85ಕ್ಕೂ ಹೆಚ್ಚು ಜನ ಇದೇ ತಾಲ್ಲೂಕಿನಲ್ಲಿ ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ.

ಸುರಪುರ ಕೋವಿಡ್ ಆಸ್ಪತ್ರೆಯಲ್ಲಿ ಐಸಿಯು ಕೊರತೆ ಇದೆ. 52 ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಶಿಫಾರಸು ಮಾಡಲಾಗಿದೆ. ಇಲ್ಲಿಯೂ ವೈದ್ಯರ ಕೊರತೆ ಇದೆ.

ಸ್ಟಾಫ್ ನರ್ಸ್‌ಗಳ ಮೇಲೆ ಭಾರ: ಬಹುತೇಕ ಕೋವಿಡ್ ಆಸ್ಪತ್ರೆಗಳಲ್ಲಿ ಸ್ಟಾಫ್ ನರ್ಸ್‌ಗಳ ಮೇಲೆ ಹೆಚ್ಚಿನ ಭಾರ ಬಿದ್ದಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸ್ಟಾಫ್ ನರ್ಸ್‌ಗಳೇ ಈಗ 'ವೈದ್ಯ'ರಂತೆ ಕೆಲಸ ಮಾಡುತ್ತಿದ್ದಾರೆ.

'ಸರ್ಕಾರಿ ಆಸ್ಪತ್ರೆಗಳ ಪಕ್ಕದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ವಸತಿ ಗೃಹಗಳಲ್ಲಿ ವೈದ್ಯರು ವಾಸ ಮಾಡುತ್ತಿಲ್ಲ. ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಇದ್ದು, ಕರೆ ಸ್ವೀಕರಿಸಿ ಅಲ್ಲೇ ಸಲಹೆ ನೀಡುವ ವೈದ್ಯರು ಹೆಚ್ಚಾಗಿದ್ದಾರೆ. ಇದರಿಂದ ಗ್ರಾಮೀಣ ಭಾಗದಲ್ಲಿ ಸಮರ್ಪಕ ಆರೋಗ್ಯ ಸೇವೆ ಸಿಗುತ್ತಿಲ್ಲ' ಎನ್ನುವುದು ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ಕಡೆ ಕೇಳಿಬರುತ್ತಿರುವ ದೂರು.

ಹಳ್ಳಿಗಳೇ ಕೊರೊನಾ ಹಾಟ್‌ಸ್ಪಾಟ್: ಗ್ರಾಮಗಳ ಕಟ್ಟೆಗಳ ಮೇಲೆ ವೃದ್ಧರ ಗುಂಪು ಹರಟೆಹೊಡೆಯುತ್ತ ಕುಳಿತುಕೊಳ್ಳುವುದು, ಯುವಕರು ಮಾಸ್ಕ್ ಧರಿಸದೇ ಸಂಚಾರ ಮಾಡುವುದು ಗ್ರಾಮೀಣ ಭಾಗದಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯಗಳಾಗಿವೆ.

ಜಿಲ್ಲೆಯಲ್ಲಿ ಘೋಷಿಸಿರುವ ಸಂಪೂರ್ಣ ಲಾಕ್‌ಡೌನ್ ಕೇವಲ ನಗರ, ಪಟ್ಟಣಕ್ಕೆ ಸೀಮಿತವಾಗಿದೆ. ಹಳ್ಳಿಗಳಲ್ಲಿ ಯಾವುದೇ ನಿಯಮ ಪಾಲನೆ ಆಗುತ್ತಿಲ್ಲ.

'ಜಿಲ್ಲೆಯಲ್ಲಿ ವೈದ್ಯರ ಕೊರತೆ ಇದೆ. ಒಬ್ಬ ವೈದ್ಯರಿಗೆ ನಾಲ್ಕೈದು ಆಸ್ಪತ್ರೆಗಳ ಉಸ್ತುವಾರಿ ನೀಡಲಾಗಿದೆ. ಇದರಿಂದ ಎಲ್ಲಿಯೂ ಸಮರ್ಪಕ ಕೆಲಸ ನಿರ್ವಹಿಸಲು ಆಗುತ್ತಿಲ್ಲ. ಒತ್ತಡವೂ ಹೆಚ್ಚಿದೆ' ಎಂದು ಹೆಸರು ಬಹಿರಂಗ ಪಡಿಸಲು ಒಲ್ಲದ ವೈದ್ಯಾಧಿಕಾರಿಯೊಬ್ಬರು ಹೇಳಿದರು.



ಯಾದಗಿರಿ ಜಿಲ್ಲೆಯ ವಡಗೇರಾ ಗ್ರಾಮದಲ್ಲಿ ಮಾಸ್ಕ್ ಧರಿಸದೇ ಜನರು ತರಕಾರಿ ಖರೀದಿಸಿದರು. ಬೈಕ್ ಸವಾರರು ಗುಂಪಾಗಿ ನಿಂತಿದ್ದು, ಪರಸ್ಪರ ಅಂತರವನ್ನೂ ಪಾಲಿಸಿರಲಿಲ್ಲ

31 ತಜ್ಞ ವೈದ್ಯರ ಹುದ್ದೆ ಖಾಲಿ

ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಬಿಬಿಎಸ್ ವೈದ್ಯರ ಕೊರತೆ ಜೊತೆಗೆ ತಜ್ಞ ವೈದ್ಯರ ಕೊರತೆ ಕಾಡುತ್ತಿದೆ. ಫಿಜಿಷಿಯನ್, ಅರಿವಳಿಕೆ ಸೇರಿದಂತೆ 31 ತಜ್ಞ ವೈದ್ಯರ ಹುದ್ದೆ ಖಾಲಿ ಇವೆ. ಜಿಲ್ಲಾ ಕೋವಿಡ್ ಆಸ್ಪತ್ರೆಯೊಂದರಲ್ಲೇ 5 ತಜ್ಞ ವೈದ್ಯರ ಹುದ್ದೆ ಖಾಲಿ ಇವೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹೆಸರಿಗೆ ಮಾತ್ರ ಕೋವಿಡ್ ಕೇರ್ ಸೆಂಟರ್

ಯಾದಗಿರಿ ತಾಲ್ಲೂಕಿನ ಬಂದಳ್ಳಿ ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆ, ಶಹಾಪುರ ತಾಲ್ಲೂಕಿನ ಭೀಮರಾಯನಗುಡಿ ಕೃಷಿ ಕಾಲೇಜು, ಸುರಪುರ ತಾಲ್ಲೂಕಿನ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ, ವಡಗೇರಾ ಸಮುದಾಯ ಆಸ್ಪತ್ರೆಯಲ್ಲಿ ಕೋವಿಡ್ ಕೇರ್ ಸೆಂಟರ್ ಆರಂಭಿಸಲಾಗಿದೆ.

'ವಡಗೇರಾ ಕೇಂದ್ರದಲ್ಲಿ ಯಾವುದೇ ಸೌಲಭ್ಯ ಇಲ್ಲ' ಎನ್ನುವುದು ಕೋವಿಡ್‌ನಿಂದ ಗುಣಮುಖರಾದ ಮಲ್ಲಪ್ಪ ಪೂಜಾರಿ ಹೇಳುವ ಮಾತು.

ಅಂಕಿಅಂಶ

41 ಜಿಲ್ಲೆಯಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರ

6 ಸಮುದಾಯ ಆರೋಗ್ಯ ಕೇಂದ್ರ

149 ಆರೋಗ್ಯ ಮತ್ತು ಕ್ಷೇಮ ಕೇಂದ್ರ

2 ತಾಲ್ಲೂಕು ಆಸ್ಪತ್ರೆ

ಯಾದಗಿರಿ ಜಿಲ್ಲಾ ಕೋವಿಡ್ ಅಂಕಿ–ಅಂಶ

26,343 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,660 ▼	23,491 ▲	192 ▲

ದಿನದ ಏರಿಕೆ

ಹೊಸ ಪ್ರಕರಣ	184 ▼
ಗುಣಮುಖ	321 ▼
ಸಾವು	8 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

> ಗುಂಪಾಗಿ ಕುಳಿತು ಹರಟೆ ಹೊಡೆಯುವುದರಿಂದ ಮನೆಯಲ್ಲಿರುವ ವೃದ್ಧರೂ ಆರೋಗ್ಯ ಸಮಸ್ಯೆ ಅನುಭವಿಸಬೇಕಾಗುತ್ತದೆ.
> **ಡಾ.ಹರ್ಷವರ್ಧನ ರಫಗಾರ,** ಸುರಪುರ ಕೋವಿಡ್ ಸೆಂಟರ್ ನೋಡಲ್ ಅಧಿಕಾರಿ

> ಹಳ್ಳಿಗಳು ಕೊರೊನಾ ಮುಕ್ತವಾಗಲು ಟಾಸ್ಕ್ ಫೋರ್ಸ್ ಸಮಿತಿ ಕಾರ್ಯನಿರ್ವಹಿಸಬೇಕು. ಪ್ರತಿ ದಿನ ಗ್ರಾಮಗಳಿಂದ ವರದಿ ತರಿಸಿಕೊಂಡು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು
> **ಚಂದ್ರಶೇಖರಗೌಡ ಮಾಗನೂರ**
> ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ

> ವಡಗೇರಾ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತುರ್ತು ಚಿಕಿತ್ಸೆ ಸಿಗುತ್ತಿಲ್ಲ. ರಾತ್ರಿ ವೇಳೆ ಕೇವಲ ನರ್ಸ್‌ಗಳ ಮೇಲೆ ಆಸ್ಪತ್ರೆ ನಡೆಯುತ್ತಿದೆ. ರಾತ್ರಿ ವೇಳೆ ದೂರದ ನಗರಗಳಿಗೆ ತೆರಳಲು ಸಮಸ್ಯೆ ಆಗುತ್ತಿದೆ
> **ಸಂತೋಷ ಬೊಜ್ಜಿ,** ರೈತ ಮುಖಂಡ ವಡಗೇರಾ

> ಕೊನೆ ಹಂತದಲ್ಲಿ ರೋಗಿಗಳು ಆಸ್ಪತ್ರೆಗೆ ಬರುವುದರಿಂದ ಸಾವಿನ ಪ್ರಕರಣಗಳು ಹೆಚ್ಚಾಗುತ್ತಿವೆ. ಈಗ ಆಶಾ ಕಾರ್ಯಕರ್ತೆಯರಿಂದ ಮನೆ ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡುವ ಕೆಲಸ ಮಾಡಲಾಗುತ್ತಿದೆ
> **ಡಾ.ರಮೇಶ ಗುತ್ತೇದಾರ,** ತಾಲ್ಲೂಕು ಆಡಳಿತ ವೈದ್ಯಾಧಿಕಾರಿ ಶಹಾಪುರ

> ಜಿಲ್ಲೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕೋವಿಡ್ ನಿಯಂತ್ರಣಕ್ಕೆ ಬರುತ್ತಿದೆ. ರೋಗಿಗಳು ಇಲ್ಲದಿದ್ದರಿಂದ ವಡಗೇರಾ ಕೋವಿಡ್ ಕೇರ್ ಸೆಂಟರ್ ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ
> **ಡಾ.ಇಂದುಮತಿ ಕಾಮಶೆಟ್ಟಿ,** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಕೋವಿಡ್ ಲಸಿಕೆ ಅಭಾವ, ವೈದ್ಯರ ಕೊರತೆ!

ಒಂದನೇ ಪುಟದಿಂದ...

ಆಸ್ಪತ್ರೆಗೆ ಲಸಿಕೆ ಬಂದಾಗ ಕರೆ ಬರಲಿದ್ದು, ಆಗಷ್ಟೇ ಜನರು ಮುಂದಡಿ ಇಡಬೇಕಿದೆ.

ಕನಕಪುರ ತಾಲ್ಲೂಕಿನ ಚಿಕ್ಕಮುದವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಒಟ್ಟು 38 ಹಳ್ಳಿಗಳು ಬರುತ್ತವೆ. ಇಲ್ಲಿ 15,168 ವಯಸ್ಕರಿದ್ದಾರೆ. ಈ ಪೈಕಿ ಗುರುವಾರದ ಅಂತ್ಯಕ್ಕೆ 3,500 ಮಂದಿಗೆ ಮಾತ್ರ ಲಸಿಕೆ ಸಿಕ್ಕಿತ್ತು. ರಾಮನಗರ ತಾಲ್ಲೂಕಿನ ಲಕ್ಷ್ಮಿಪುರ ಆರೋಗ್ಯ ಕೇಂದ್ರದಲ್ಲಿ 2 ವಯಲ್ ಲಸಿಕೆಯಷ್ಟೇ ಇದ್ದು, ಅದಾಗಲೇ ಆಸ್ಪತ್ರೆ ಮುಂದೆ ಹತ್ತಾರು ಮಂದಿ ಕಾಯುತ್ತ ಕುಳಿತಿದ್ದರು. ಆಸ್ಪತ್ರೆಗಳಲ್ಲಿ ಎರಡನೇ ಡೋಸ್ ಬಾಕಿಯಿರುವವರಿಗೆ ಆದ್ಯತೆ ನೀಡಲಾಗುತ್ತಿತ್ತು.

ಸದ್ಯ ಹಳ್ಳಿಗಳಲ್ಲಿ ಬಸ್ ಸೇವೆ ಇಲ್ಲ. ಲಸಿಕೆ ಬೇಕೆಂದರೆ ನಾಲ್ಕಾರು ಕಿ.ಮೀ ದೂರದ ಆಸ್ಪತ್ರೆಗೆ ಬರಬೇಕು. ಆಟೊ ಮಾಡಿಕೊಂಡು ಬರಬೇಕು. ಹೀಗಾಗಿ ಬಂದಾಗ ಹಾಕಿಸಿಕೊಂಡರಾಯಿತು ಎಂದು ಅನೇಕರು ಇದರಿಂದ ದೂರವೇ ಉಳಿಯುತ್ತಿದ್ದಾರೆ.

ವೈದ್ಯರು ಗೈರು: ಜಿಲ್ಲೆಯ ಹತ್ತಾರು ಹಳ್ಳಿಗಳಿಗೆ 'ಪ್ರಜಾವಾಣಿ' ಭೇಟಿ ನೀಡಿದ ಸಂದರ್ಭ ಬಹುತೇಕ ಪಿಎಚ್‌ಸಿಗಳಲ್ಲಿ ವೈದ್ಯರ ಗೈರು ಕಂಡುಬಂತು. ಇವುಗಳಲ್ಲಿ ತಜ್ಞ ವೈದ್ಯರನ್ನು ಕೋವಿಡ್ ಸೋಂಕಿತರ ಚಿಕಿತ್ಸೆಗೆಂದು ನಿಯೋಜಿಸಿದ್ದು, ಶುಶ್ರೂಷಕರೇ ವೈದ್ಯರಂತೆ ಮದ್ದು ಕೊಡುತ್ತಿದ್ದರು.

ಅನೇಕ ಕಡೆ ಉಪ ಕೇಂದ್ರಗಳಿಗೆ ಬೀಗ ಹಾಕಲಾಗಿತ್ತು. ಪುಟ್ಟ ಮಕ್ಕಳನ್ನು ಕಂಕುಳಲ್ಲಿ ಹೊತ್ತು ಆಸ್ಪತ್ರೆಗೆ ಬಂದ ಬಾಣಂತಿಯರು ಮಗುವಿಗೆ ಕಾಲಕಾಲಕ್ಕೆ ಬೇಕಾದ ಲಸಿಕೆ ಕೊಡುವಂತೆ ಕೋರುತ್ತಿದ್ದರು. ಜಿಲ್ಲೆಯಲ್ಲಿ ಸದ್ಯ 107 ವೈದ್ಯರು ಹಾಗೂ 99 ಕಾಯಂ ಶುಶ್ರೂಷಕರು ಮಾತ್ರ ಇದ್ದಾರೆ.

ದೊರೆಯದ ಆಂಬುಲೆನ್ಸ್: ಜಿಲ್ಲೆಯಲ್ಲಿ ಸದ್ಯ 40ಕ್ಕೂ ಹೆಚ್ಚು ಆಂಬುಲೆನ್ಸ್‌ಗಳಿವೆ. ಇವುಗಳಲ್ಲಿ ಹೆಚ್ಚಿನವು ಜಿಲ್ಲೆ, ತಾಲ್ಲೂಕು ಕೇಂದ್ರಗಳಿಗೆ ಸೀಮಿತಗೊಂಡಿವೆ. ಹೆಚ್ಚಿನವುಗಳನ್ನು ಕೋವಿಡ್ ಸೋಂಕಿತರನ್ನು ಆರೈಕೆ ಕೇಂದ್ರಗಳಿಗೆ ಕರೆದೊಯ್ಯಲು, ಸೋಂಕಿನಿಂದ ಮೃತಪಟ್ಟವರ ಶವ ಸಾಗಿಸಲು ಬಳಸಲಾಗುತ್ತಿದೆ. ಹೀಗಾಗಿ ಗರ್ಭಿಣಿಯರು, ಇತರ ಕಾಯಿಲೆಯಿಂದ ಬಳಲುತ್ತಿರುವವರಿಗೆ ಸದ್ಯ ಸೇವೆ ದೊರೆಯುತ್ತಿಲ್ಲ.

ತಾಲ್ಲೂಕು ಆಸ್ಪತ್ರೆಗಳು ಮೂಲಸೌಕರ್ಯಗಳಿಂದ ಬಳಲುತ್ತಿವೆ. ವೆಂಟಿಲೇಟರ್‌ಗಳು ಇದ್ದರೂ ಆಪರೇಟರ್‌ಗಳು ಇಲ್ಲ. ಕೆಲವೆಡೆ ಐಸಿಯು ಬೆಡ್‌ಗಳ ಕೊರತೆ ಇದೆ. ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಜನರೇಟರ್ ಸಮಸ್ಯೆ ಬಗ್ಗೆ ಜನರು ದೂರುತ್ತಾರೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಕರ್ಯ, ಪಿಎಚ್‌ಸಿಗಳಲ್ಲಿ ಸಕಾಲಕ್ಕೆ ಲಸಿಕೆ, ಜನರ ಆರೋಗ್ಯ ಪರೀಕ್ಷೆ ನಡೆಯಬೇಕಿದೆ ಎಂಬುದು ಹಳ್ಳಿಗಳಲ್ಲಿ ಸುತ್ತಾಡುವಾಗ ಕಾಣಬರುವ ಚಿತ್ರಣ.



> ಮದುವೆ-ತಿಥಿ ಕಾರ್ಯ ಮತ್ತು ಬೆಂಗಳೂರಿನಿಂದ ವಾಪಸ್ ಬಂದವರಿಂದ ಸೋಂಕು ಹೆಚ್ಚಾಗಿದೆ. ಗ್ರಾಮಗಳಲ್ಲಿ ಆರಂಭದಲ್ಲೇ ಸೋಂಕು ಪತ್ತೆ ನಡೆದಿದ್ದರೆ ಪರಿಸ್ಥಿತಿ ವಿಷಮಿಸುತ್ತಿರಲಿಲ್ಲ
> **ಚಿಕ್ಕರಾಜು,** ಬ್ಯಾಲಕೆರೆ ನಿವಾಸಿ



> ಗ್ರಾಮೀಣ ಭಾಗಗಳಲ್ಲಿ ನಿರಂತರವಾಗಿ ಸೋಂಕು ಪತ್ತೆ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಆರೋಗ್ಯ ಕೇಂದ್ರಗಳಲ್ಲಿ ದಿನನಿತ್ಯ ಲಸಿಕೆ ನೀಡುತ್ತಿದ್ದು, ಸದ್ಯಕ್ಕೆ ಕೊರತೆ ಕಾಣುತ್ತಿಲ್ಲ
> **ಡಾ.ಸತೀಶ್**
> ತಾಲ್ಲೂಕು ವೈದ್ಯಾಧಿಕಾರಿ, ಮಾಗಡಿ



> ಮೊದಲೆಲ್ಲ ಜನರನ್ನು ಲಸಿಕೆ ಹಾಕಿಸುವಂತೆ ಗೋಗರೆಯುತ್ತಿದ್ದೆವು. ಈಗ ಜನರೇ ಸ್ವಯಂಪ್ರೇರಿತರಾಗಿ ಲಸಿಕೆ ಪಡೆಯುತ್ತಿದ್ದಾರೆ. ಆದರೆ, ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಕೆಲವರು ಹಿಂದೇಟು ಹಾಕುತ್ತಾರೆ
> **ಹೇಮಾ,** ಆಶಾ ಕಾರ್ಯಕರ್ತೆ, ಲಕ್ಷ್ಮಿಪುರ

ರಾಮನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

22,297 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,744 ▼	19,261 ▲	292 ▲

ದಿನದ ಏರಿಕೆ

ಹೊಸ ಪ್ರಕರಣ	260 ▲
ಗುಣಮುಖ	415 ▲
ಸಾವು	0

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಆರೈಕೆ ಕೇಂದ್ರಕ್ಕೆ ಬೇಕು ಸೌಲಭ್ಯ

ಗ್ರಾಮೀಣ ಜನರಿಗೆ ಜಿಲ್ಲಾಡಳಿತ ಹೋಮ್ ಐಸೋಲೇಷನ್ ಆಯ್ಕೆ ನೀಡಿತ್ತು. ಆದರೆ, ಅದರಿಂದಲೇ ಸೋಂಕು ಹೆಚ್ಚಾದ ಕಾರಣಕ್ಕೆ ಸದ್ಯ ಈ ಎಲ್ಲರನ್ನೂ ಕೋವಿಡ್ ಆರೈಕೆ ಕೇಂದ್ರಗಳಿಗೆ ರವಾನಿಸಲಾಗಿದೆ. ಸುಗ್ಗನಹಳ್ಳಿ, ಹುಲಿಕಟ್ಟೆಯಂತಹ ಕೆಲವೇ ಕೇಂದ್ರಗಳಲ್ಲಿ ಉತ್ತಮ ಸೇವೆ ಸಿಗುತ್ತಿದೆ. ಇನ್ನೂ ಕೆಲವೆಡೆ ಕಳಪೆ ಆಹಾರ, ಸ್ವಚ್ಛತೆ ಬಗ್ಗೆ ಸೋಂಕಿತರು ದೂರುತ್ತಾರೆ.

ಕುದೂರಿನ ಕ್ವಾರಂಟೈನ್ ಕೇಂದ್ರದ ಸೋಂಕಿತರ ಮೇಲೆ ಸ್ಥಳೀಯರ ಗುಂಪೊಂದು ಕಲ್ಲು ತೂರಿತ್ತು. ಈ ಹಿನ್ನೆಲೆಯಲ್ಲಿ ಸದ್ಯ ಈ ಕೇಂದ್ರಗಳಿಗೆ ಪೊಲೀಸ್ ಭದ್ರತೆ ನೀಡಲಾಗಿದೆ. ಜೊತೆಗೆ ಪ್ರತಿ ಕೇಂದ್ರಕ್ಕೆ ಪ್ರತ್ಯೇಕ ಆಂಬುಲೆನ್ಸ್ ವ್ಯವಸ್ಥೆ, ತುರ್ತು ಬಳಕೆಗೆ ಆಮ್ಲಜನಕ ಸಿಲಿಂಡರ್ ಮೊದಲಾದವುಗಳ ವ್ಯವಸ್ಥೆ ಮಾಡಬೇಕು ಎಂಬುದು ಸೋಂಕಿತರ ಸಂಬಂಧಿಕರ ಆಗ್ರಹವಾಗಿದೆ.

ಮೋದಿ ಸಭೆಗೆ ಮಮತಾ ಗೈರು

ಒಂದನೇ ಪುಟದಿಂದ...

ಇನ್ನೊಂದೆಡೆ, 'ಮಮತಾ ಅವರೇ ತಡವಾಗಿ ಬಂದು ಮೋದಿ ಹಾಗೂ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಕಾಯುವಂತೆ ಮಾಡಿದ್ದಾರೆ' ಎಂದು ಕೇಂದ್ರ ಸರ್ಕಾರ ಆರೋಪಿಸಿದೆ. ಪ್ರಧಾನಿ ಮೋದಿ, ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಹಾಗೂ ಇತರರು ಮಮತಾ ಅವರಿಗಾಗಿ ಕಾಯುತ್ತಾ ಸಭೆಯಲ್ಲಿ ಕುಳಿತಿದ್ದ ಚಿತ್ರವನ್ನು ರಾಜ್ಯಪಾಲರು ಟ್ವೀಟ್ ಮಾಡಿದ್ದಾರೆ. ಚಿತ್ರದಲ್ಲಿ ಮಮತಾ ಅವರಿಗಾಗಿ ಕಾಯ್ದಿರಿಸಿದ್ದ ಕುರ್ಚಿ ಖಾಲಿ ಇರುವುದು ಕಾಣಿಸಿದೆ.

'ಮಮತಾ ಅವರು ಪ್ರಧಾನಿಯನ್ನು ಬಹಿಷ್ಕರಿಸಿದ್ದಾರೆ' ಎಂದು ಧನ್‌ಕರ್ ಅವರು ನೇರ ಆರೋಪ ಮಾಡಿದ್ದಾರೆ. 'ಇಂಥ ಬಹಿಷ್ಕಾರವು ಸಂವಿಧಾನದ ಆಶಯ ಹಾಗೂ ಒಕ್ಕೂಟ ವ್ಯವಸ್ಥೆಗೆ ಪೂರಕವಲ್ಲ. ಇಂಥ ನಡೆಯಿಂದ ರಾಜ್ಯದ ಹಿತಾಸಕ್ತಿಯನ್ನಾಗಲಿ, ಜನರ ಹಿತಾಸಕ್ತಿಯನ್ನಾಗಲಿ ಕಾಪಾಡಲು ಸಾಧ್ಯವಾಗದು' ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಮಮತಾ ಅವರ ಒಂದುಕಾಲದ ಸಮೀಪವರ್ತಿ, ಈಗ ವಿರೋಧಪಕ್ಷದ ನಾಯಕರಾಗಿರುವ ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಅವರು ಸಭೆಯಲ್ಲಿ ಪಾಲ್ಗೊಂಡಿದ್ದೇ ಮಮತಾ ಅವರ ಈ ವರ್ತನೆಗೆ ಕಾರಣ ಎಂದು ಹೇಳಲಾಗಿದೆ.

ಪ್ರಧಾನಿಯ ಜತೆಗಿನ ಸಭೆಯ ವಿಚಾರದಲ್ಲಿ ಮಮತಾ ಅವರು ಒಂದು ವಾರದಲ್ಲಿ ಎರಡನೇ ವಿವಾದ ಸೃಷ್ಟಿಸಿದ್ದಾರೆ. ಕೋವಿಡ್ ತಡೆಗೆ ಸಂಬಂಧಿಸಿ ಜಿಲ್ಲಾಧಿಕಾರಿಗಳೊಂದಿಗೆ ಪ್ರಧಾನಿ ನಡೆಸಿದ ಸಭೆಯಲ್ಲಿ ಮಮತಾ ಭಾಗಿಯಾಗಿದ್ದರು. ಆದರೆ, ಸಭೆ ಮುಕ್ತಾಯವಾದ ಕೂಡಲೇ 'ಇದೊಂದು ಸೂಪರ್ ಫ್ಲಾಪ್ ಸಭೆ, ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ' ಎಂದಿದ್ದರು.

ಮುಖ್ಯಕಾರ್ಯದರ್ಶಿ ವರ್ಗಾವಣೆ

ನವದೆಹಲಿ: ಕೇಂದ್ರ ಸರ್ಕಾರ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡುವೆ ಜಟಾಪಟಿ ನಡೆದಿರುವ ಬೆನ್ನಲ್ಲೇ, ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರನ್ನು ದೆಹಲಿಗೆ ವರ್ಗಾವಣೆ ಮಾಡಲಾಗಿದೆ.

ಮೇ 31ರಂದು ಬೆಳಿಗ್ಗೆ 10ಕ್ಕೆ ದೆಹಲಿಯಲ್ಲಿರುವ ಸಿಬ್ಬಂದಿ ಹಾಗೂ ತರಬೇತಿ ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಅವರಿಗೆ ಇಲಾಖೆ ಶುಕ್ರವಾರ ಸೂಚಿಸಿದೆ.

ಹಾನಿಯ ವೈಮಾನಿಕ ಸಮೀಕ್ಷೆ ನಡೆಸಿದ ಪ್ರಧಾನಿ • ಮುಖ್ಯಮಂತ್ರಿಗಳ ಜತೆ ಸಭೆ

ಯಸ್: ₹1,000 ಕೋಟಿ ತುರ್ತು ನೆರವು

ನವದೆಹಲಿ (ಪಿಟಿಐ): 'ಯಸ್' ಚಂಡಮಾರುತದಿಂದ ಹಾನಿ ಅನುಭವಿಸಿರುವ ರಾಜ್ಯಗಳಿಗೆ, ಪ್ರಧಾನಿ ನರೇಂದ್ರ ಮೋದಿ ಅವರು ₹1000 ಕೋಟಿ ತುರ್ತು ಪರಿಹಾರ ಘೋಷಿಸಿದ್ದಾರೆ. ಇದರಲ್ಲಿ ₹500 ಕೋಟಿ ಒಡಿಶಾಗೆ ಹಾಗೂ ಉಳಿದ ₹500 ಕೋಟಿಯನ್ನು ಪಶ್ಚಿಮ ಬಂಗಾಳ ಹಾಗೂ ಜಾರ್ಖಂಡ್ ರಾಜ್ಯಗಳಿಗೆ ಈ ಕೂಡಲೇ ಬಿಡುಗಡೆ ಮಾಡಲಾಗುವುದು' ಎಂದು ಪ್ರಧಾನಮಂತ್ರಿ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪಶ್ಚಿಮ ಬಂಗಾಳ ಮತ್ತು ಒಡಿಶಾದಲ್ಲಿ ಯಸ್ ಚಂಡಮಾರುತದಿಂದ ಹಾನಿಗೆ ಒಳಗಾಗಿರುವ ಜಿಲ್ಲೆಗಳ ವೈಮಾನಿಕ ಸಮೀಕ್ಷೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನಡೆಸಿದರು. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿದ ಬಳಿಕ, ಸಂಜೆ ಮೋದಿ ಅವರು ಈ ಪರಿಹಾರ ಘೋಷಿಸಿದ್ದಾರೆ.

ಚಂಡಮಾರುತದಿಂದಾಗಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹2ಲಕ್ಷ ಹಾಗೂ ತೀವ್ರವಾಗಿ ಗಾಯಗೊಂಡವರಿಗೆ ತಲಾ ₹50,000 ಪರಿಹಾರವನ್ನೂ ಮೋದಿ ಅವರು ಘೋಷಿಸಿದ್ದಾರೆ.

'ಚಂಡಮಾರುತದಿಂದ ಆಗಿರುವ ಹಾನಿಯ ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರವು ಅಂತರ್ ಸಚಿವಾಲಯದ ತಂಡವನ್ನು ಕಳುಹಿಸುವುದು. ಈ ತಂಡ ನೀಡುವ ವರದಿಯ ಆಧಾರದಲ್ಲಿ ಮುಂದಿನ ಪರಿಹಾರ ಮೊತ್ತವನ್ನು ನಿರ್ಧರಿಸಲಾಗುವುದು' ಎಂದು ಪ್ರಕಟಣೆ ತಿಳಿಸಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ಯಸ್ ಚಂಡಮಾರುತವು ಪಶ್ಚಿಮ ಬಂಗಾಳ ಹಾಗೂ ಒಡಿಶಾದಲ್ಲಿ ಉಂಟುಮಾಡಿರುವ ಹಾನಿಯ ವೈಮಾನಿಕ ಸಮೀಕ್ಷೆಯನ್ನು ಶುಕ್ರವಾರ ನಡೆಸಿದರು –ಪಿಟಿಐ ಚಿತ್ರ

ಶಾಶ್ವತ ಪರಿಹಾರಕ್ಕೆ ಮನವಿ

(ಭುವನೇಶ್ವರ ವರದಿ): ಶುಕ್ರವಾರ ಬೆಳಿಗ್ಗೆ ಒಡಿಶಾಗೆ ಬಂದ ಪ್ರಧಾನಿ ಮೋದಿ ಅವರು, ರಾಜ್ಯಪಾಲ ಗಣೇಶಿಲಾಲ್, ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಜತೆ ಸಭೆ ನಡೆಸಿದರು. ಕೇಂದ್ರದ ಸಚಿವರಾದ ಧರ್ಮೇಂದ್ರ ಪ್ರಧಾನ್ ಹಾಗೂ ಪ್ರತಾಪ್ ಸಾರಂಗಿ ಅವರೂ ಇದ್ದರು.

'ಒಡಿಶಾ ಸರ್ಕಾರವು ಪರಿಹಾರದ ರೂಪದಲ್ಲಿ ತಕ್ಷಣಕ್ಕೆ ಆರ್ಥಿಕ ಸಹಾಯಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಲಿಲ್ಲ. ಬದಲಿಗೆ ಪದೇಪದೇ ಎದುರಾಗುತ್ತಿರುವ ಪ್ರವಾಹ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನೆರವಾಗುವಂತೆ ಮನವಿ ಮಾಡಿದೆ' ಎಂದು ವಿಶೇಷ ಪರಿಹಾರ ಆಯುಕ್ತ ಪಿ.ಕೆ. ಜೇನ ತಿಳಿಸಿದ್ದಾರೆ.

'ಯಾವುದೇ ಪರಿಸ್ಥಿತಿಯನ್ನು ಎದುರಿಸಬಲ್ಲಂಥ ವಿದ್ಯುತ್ ವಿತರಣಾ ವ್ಯವಸ್ಥೆ ಹಾಗೂ ಕರಾವಳಿ ಪ್ರದೇಶವನ್ನು ಪ್ರವಾಹಗಳಿಂದ ಸಂರಕ್ಷಿಸಲು ಶಾಶ್ವತವಾದ ವ್ಯವಸ್ಥೆ ರೂಪಿಸಲು ನೆರವಾಗುವಂತೆ ಮುಖ್ಯಮಂತ್ರಿ ಪಟ್ನಾಯಕ್ ಅವರು ಮನವಿ ಮಾಡಿದರು. ಸದ್ಯಕ್ಕೆ ನಾವು ಕೇಂದ್ರದ ನೆರವಿಗೆ ಮನವಿ ಸಲ್ಲಿಸಿಲ್ಲ. ತನ್ನ ಆರ್ಥಿಕ ಮೂಲಗಳಿಂದಲೇ ಸದ್ಯದ ಸ್ಥಿತಿಯನ್ನು ನಿರ್ವಹಿಸಲಾಗುವುದು. ಚಂಡಮಾರುತದಿಂದ ಆಗಿರುವ ಹಾನಿಯ ಬಗ್ಗೆ ಒಂದು ವಾರದೊಳಗೆ ಅಂದಾಜು ತಯಾರಿಸಿ, ಆನಂತರ ಕೇಂದ್ರದಿಂದ ನೆರವಿಗಾಗಿ ಮನವಿ ಸಲ್ಲಿಸಲಾಗುವುದು' ಎಂದು ಜೇನ ತಿಳಿಸಿದರು.

₹20 ಸಾವಿರ ಕೋಟಿಗೆ ಮಮತಾ ಬೇಡಿಕೆ

ಮಧ್ಯಾಹ್ನ ಪಶ್ಚಿಮ ಬಂಗಾಳದಲ್ಲಿ ಸಮೀಕ್ಷೆ ನಡೆಸಲು ಬಂದಿದ್ದ ಮೋದಿ ಅವರನ್ನು ಮುಖ್ಯಮಂತ್ರಿ ಮಮತಾ ಅವರು ಪಶ್ಚಿಮ ಮೇದಿನಿಪುರ ಜಿಲ್ಲೆಯ ಕಲೈಕುಂದದಲ್ಲಿ ಭೇಟಿಮಾಡಿದರು. ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ನಂತರ ಈ ಇಬ್ಬರು ನಾಯಕರು ನಡೆಸಿದ ಮೊದಲ ಭೇಟಿ ಇದಾಗಿದೆ.

ಮಮತಾ ಅವರು ಯಸ್ ಚಂಡಮಾರುತದಿಂದ ಆಗಿರುವ ಹಾನಿಯ ಪ್ರಾಥಮಿಕ ವರದಿಯನ್ನು ಪ್ರಧಾನಿಗೆ ಸಲ್ಲಿಸಿ, ₹ 20,000 ಕೋಟಿ ನೆರವಿಗೆ ಮನವಿ ಮಾಡಿದ್ದಾರೆ.

'ದಿಘ ಹಾಗೂ ಸುಂದರ್‌ಬನ್ ಜಿಲ್ಲೆಗಳ ಮರು ಅಭಿವೃದ್ಧಿಗೆ ತಲಾ ₹1,000 ಕೋಟಿ ನೆರವಿಗೆ ನಾವು ಮನವಿ ಸಲ್ಲಿಸಿದ್ದೇವೆ. ನಮಗೆ ಏನೂ ಲಭಿಸದಿರುವ ಸಾಧ್ಯತೆ ಇದೆ' ಎಂದು ಮಮತಾ ಅವರು ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ ಹೇಳಿದ್ದಾರೆ.

'ಇಬ್ಬರು ನಾಯಕರ ಮಧ್ಯದ ಸಭೆಯು ಕೇವಲ 15 ನಿಮಿಷಗಳಲ್ಲಿ ಸಭೆಯು ಮುಕ್ತಾಯಗೊಂಡಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

26 ವೆಂಟಿಲೇಟರ್ ಕಳಪೆ

ರಾಯಚೂರು: ಕರ್ನಾಟಕ ರಾಜ್ಯ ಔಷಧಿ ಸರಬರಾಜು ನಿಗಮ (ಕೆಆರ್‌ಎಂಎಸ್‌ಎಲ್) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್)ಗೆ ಪೂರೈಸಿದ್ದ ಅಗ್ವಾಮೇಕ್ ಕಂಪನಿಯ 26 ವೆಂಟಿಲೇಟರ್‌ಗಳು ಕಳಪೆ ಗುಣಮಟ್ಟದ್ದಾಗಿವೆ.

ಅವುಗಳನ್ನು ಹಿಂತಿರುಗಿಸಲು ರಿಮ್ಸ್ ಆಡಳಿತ ಮಂಡಳಿ ನಿರ್ಧರಿಸಿದೆ. ವೆಂಟಿಲೇಟರ್ ಖರೀದಿ ಮೊತ್ತವನ್ನು ಈಗಾಗಲೇ ರಿಮ್ಸ್ ಪಾವತಿಸಿದೆ. ಯಂತ್ರಗಳ ವಾಪಸಾತಿಗೆ ಸಂಬಂಧಿಸಿ ರಿಮ್ಸ್ ನಿರ್ದೇಶಕರು ಜಿಲ್ಲಾಧಿಕಾರಿಗೆ ಪತ್ರವೊಂದನ್ನು ನೀಡಿದ್ದಾರೆ.

ಪ್ರತಿಕ್ರಿಯೆಗಾಗಿ ಜಿಲ್ಲಾಧಿಕಾರಿ ಮತ್ತು ರಿಮ್ಸ್ ನಿರ್ದೇಶಕರಿಗೆ ಕರೆ ಮಾಡಿದರೂ ಸ್ಪಂದನೆ ಸಿಗಲಿಲ್ಲ.

ಕೋವಿಡ್ ತಡೆಗೆ ಆಸ್ಪತ್ರೆಯಲ್ಲಿ ಹೋಮ

ತುಮಕೂರು: ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ತಡೆಗೆ ಮೇ 25ರಂದು ಸಂಜೆ 6ರಿಂದ 9 ಗಂಟೆ ನಡುವೆ ಆಸ್ಪತ್ರೆ ಆವರಣದಲ್ಲಿ ಹೋಮ ಮಾಡಿಸಲಾಗಿದೆ.

'ಹೋಮ ಮಾಡಿಸಿದರೆ ಸೋಂಕು ಬರುವುದಿಲ್ಲ. ಕೋವಿಡ್ ಮಾರಿ ದೂರವಾಗಲಿದೆ' ಎಂದು ಆರೋಗ್ಯ ಕೇಂದ್ರದ ವೈದ್ಯರು ಹೇಳಿದರು. ಹಾಗಾಗಿ, ಹೋಮ ಮಾಡಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಸ್ವಂತ ಖರ್ಚಿನಲ್ಲಿ ಲಸಿಕೆ: ಶಾಮನೂರು

ದಾವಣಗೆರೆ: 'ಕ್ಷೇತ್ರದ ಜನರಿಗೆ ಸ್ವಂತ ಖರ್ಚಿನಿಂದ ಕೋವಿಡ್ ಲಸಿಕೆ ನೀಡಲು ಪುಣೆಯ ಕಂಪನಿ ಜೊತೆ ಚರ್ಚಿಸಿದ್ದೇವೆ. ಶೀಘ್ರದಲ್ಲೇ 10 ಸಾವಿರ ಡೋಸ್ ಲಸಿಕೆ ಬರುವ ನಿರೀಕ್ಷೆ ಇದೆ' ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '50 ಸಾವಿರ ಡೋಸ್ ಲಸಿಕೆಗೆ ಪುಣೆಯ ಕಂಪನಿಯೊಂದಕ್ಕೆ ಆರ್ಡರ್ ನೀಡಿದ್ದೇವೆ. 40 ಸಾವಿರ ಡೋಸ್ ಕೊಡುವುದಾಗಿ ಕಂಪನಿ ಭರವಸೆ ನೀಡಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ' ಎಂದರು.

ತಹಶೀಲ್ದಾರ್‌ಗೆ ದಂಡ

ಬೆಳಗಾವಿ: ಇಲ್ಲಿನ ತಹಶೀಲ್ದಾರ್ ಆರ್.ಕೆ. ಕುಲಕರ್ಣಿ ಮಾಸ್ಕ್ ಧರಿಸದೆ ಕೋವಿಡ್–19 ನಿಯಮ ಉಲ್ಲಂಘಿಸಿದ್ದಕ್ಕೆ ಪೊಲೀಸರು ₹ 250 ದಂಡ ವಿಧಿಸಿದರು.

ರಾಣಿ ಚನ್ನಮ್ಮ ವೃತ್ತದಲ್ಲಿ ಪೊಲೀಸರು ಶುಕ್ರವಾರ ವಾಹನ ತಪಾಸಣೆ ನಡೆಸುವಾಗ ತಹಶೀಲ್ದಾರ್ ಮಾಸ್ಕ್ ಧರಿಸದಿರುವುದು ಗಮನಕ್ಕೆ ಬಂದಿತು. ಆದರೂ ಪೊಲೀಸರು ದಂಡ ವಿಧಿಸಿರಲಿಲ್ಲ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಪೊಲೀಸರು ಕ್ರಮ ಕೈಗೊಂಡರು.

₹5 ಕೋಟಿ ನೆರವು

ಹಟ್ಟಿಚಿನ್ನದಗಣಿ (ರಾಯಚೂರು ಜಿಲ್ಲೆ): ಕೊರೊನಾ ಸೋಂಕಿತರ ಆರೈಕೆಗಾಗಿ ಜಿಲ್ಲೆಯ ಹಟ್ಟಿಚಿನ್ನದ ಗಣಿ ಕಂಪನಿಯು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ₹5 ಕೋಟಿ ನೀಡಿದೆ. ಸಚಿವ ಮುರುಗೇಶ ಆರ್. ನಿರಾಣಿ, ಹಟ್ಟಿ ಚಿನ್ನದಗಣಿ ಕಂಪನಿಯ ಅಧ್ಯಕ್ಷ ಮಾನಪ್ಪ ವಜ್ಜಲ್ ಅವರು ಮುಖ್ಯಮಂತ್ರಿಗೆ ಚೆಕ್ ಹಸ್ತಾಂತರಿಸಿದರು.

'ಲಸಿಕೆ ವಿಳಂಬ ವೈಫಲ್ಯ: ಪ್ರಧಾನಿ ಹೊಣೆ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪ್ರಬಲ ನಾಯಕ ಎಂಬ ವರ್ಚಸ್ಸು ಬಹುತೇಕ ಕ್ಷೀಣಿಸಿದೆ ಎಂದಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ದೇಶದಲ್ಲಿ ಕೋವಿಡ್ ಸೋಂಕು ಏರಿಕೆಗೆ ಪ್ರಧಾನಿ ಅವರೇ ನೇರ ಹೊಣೆ ಎಂದು ಕಿಡಿಕಾರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಲಸಿಕೆ ಲಭ್ಯತೆ ಇದೇ ರೀತಿಯಲ್ಲಿ ಮುಂದುವರಿದರೆ ಇನ್ನಷ್ಟು ಅಲೆಗಳು ಬರಬಹುದು ಎಂದು ಎಚ್ಚರಿಸಿದರು. ಭಾರತ ಲಸಿಕೆಯ ರಾಜಧಾನಿ. ಎಲ್ಲರಿಗೂ ಲಸಿಕೆ ನೀಡುವುದು ಸಾಧ್ಯವಿದೆ. ಆದರೆ, ಈವರೆಗೆ ಶೇ 3ರಷ್ಟು ಜನರಿಗೆ ಮಾತ್ರವೇ ಲಸಿಕೆ ದೊರೆತಿದೆ ಎಂದು ಹೇಳಿದರು.

ಮೋದಿ ಅವರು ತನ್ನ ವರ್ಚಸ್ಸನ್ನು ಸರಿಪಡಿಸಿಕೊಳ್ಳುವ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ತನ್ನ ಮುಂದಿರುವ ಸಮಸ್ಯೆ ಬಗ್ಗೆ ಹೆಚ್ಚು ಚಿಂತಿತರಾಗಿದ್ದಾರೆ ಎಂದು ಅವರು ದೂರಿದರು.

ಟೂಲ್‌ಕಿಟ್‌ನ ಭಾಗ– ಬಿಜೆಪಿ ಆರೋಪ: ಕೋವಿಡ್ ಸೋಂಕು, ಪರಿಸ್ಥಿತಿಯ ಕುರಿತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬಳಸುವ ಭಾಷೆ, ಭಯ ಮೂಡಿಸುವ ಶೈಲಿಯೇ ಆ ಪಕ್ಷ ಟೂಲ್‌ಕಿಟ್ ರೂಪಿಸಿದೆ ಎಂಬುದನ್ನು ನಿರೂಪಿಸುತ್ತದೆ ಎಂದು ಬಿಜೆಪಿ ಟೀಕಿಸಿದೆ.

ಪಕ್ಷದ ಹಿರಿಯ ಮುಖಂಡರೂ ಆಗಿರುವ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು, ಆರೋಗ್ಯ ಇಲಾಖೆ ಕೈಗೊಂಡಿರುವ ಸಿದ್ಧತೆ ಕುರಿತಂತೆ ರಾಹುಲ್ ಅವರ ಹೇಳಿಕೆಯನ್ನು ಉಲ್ಲೇಖಿಸಿದರು. ಆರೋಗ್ಯ ಇಲಾಖೆಯು ಈ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ 216 ಕೋಟಿ ಡೋಸ್ ಲಸಿಕೆ ಉತ್ಪಾದನೆ ಮತ್ತು 108 ಕೋಟಿ ಜನರಿಗೆ ಲಸಿಕೆ ನೀಡುವ ಕಾರ್ಯಸೂಚಿ ಹೊಂದಿದೆ ಎಂದು ತಿಳಿಸಿದರು.



ಬಾಳೆಹೊನ್ನೂರು ಸಮೀಪದ ಬರ್ಕನಕಟ್ಟೆಯಲ್ಲಿ ಕೊರೊನಾ ಸೋಂಕಿತನನ್ನು ಒಂದು ಕಿ.ಮೀ ಹೊತ್ತುಕೊಂಡು ಹೋಗಲಾಯಿತು

ಸೋಂಕಿತ ವ್ಯಕ್ತಿಯನ್ನು 1 ಕಿ.ಮೀ ಹೊತ್ತು ಸಾಗಿಸಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬಸರೀಕಟ್ಟೆ (ಬಾಳೆಹೊನ್ನೂರು): ಸಮರ್ಪಕ ರಸ್ತೆ ಇಲ್ಲದ ಕಾರಣ ಕೋವಿಡ್ ಬಾಧಿತ ವ್ಯಕ್ತಿಯನ್ನು ಮನೆಯಿಂದ ಒಂದು ಕಿ.ಮೀ ದೂರದವರೆಗೆ ಹೊತ್ತೊಯ್ದು, ನಂತರ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸಾಗಿಸಿದ ಘಟನೆ ಸಮೀಪದ ಬರ್ಕನಕಟ್ಟೆ ಬಳಿ ನಡೆದಿದೆ.

ಆನೆಗುಂದದ ನಾಗಯ್ಯ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಅವರನ್ನು ಆಸ್ಪತ್ರೆಗೆ ದಾಖಲಿಸಲು ಆಂಬುಲೆನ್ಸ್ ಕರೆಸಲಾಗಿತ್ತು. ರಸ್ತೆ ಸಂಪೂರ್ಣ ಹದಗೆಟ್ಟಿದ್ದರಿಂದ ಅವರ ಮನೆ ಸಮೀಪಕ್ಕೆ ಆಂಬುಲೆನ್ಸ್ ಹೋಗುತ್ತಿರಲಿಲ್ಲ. ಹೀಗಾಗಿ ಸುಮಾರು 1 ಕಿ.ಮೀ ದೂರದಲ್ಲಿ ಬರ್ಕನಕಟ್ಟೆ ಶಾಲೆ ಬಳಿ ಇದ್ದ ಆಂಬುಲೆನ್ಸ್‌ವರೆಗೆ ಅವರನ್ನು ಹೊತ್ತುಕೊಂಡು ಹೋಗಲಾಯಿತು.

ಸ್ಥಳೀಯರು ತಮ್ಮ ವಾಹನದಲ್ಲಿ ಕರೆದೊಯ್ಯಲು ಹಿಂದೇಟು ಹಾಕಿದರು. ಇದನ್ನು ಅರಿತ ಸ್ಥಳೀಯ ಮುಖಂಡ ಮಣಿಕಂಠನ್ ಕಂದಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯ ಪುಟ್ಟಯ್ಯ, ವಿನಯ, ಆಸ್ಪತ್ರೆಯ ಸಿಬ್ಬಂದಿ ಚೆನ್ನಬಸಪ್ಪ, ಆಶಾ ಕಾರ್ಯಕರ್ತೆ ರುಕ್ಮಿಣಿ ಪಿಪಿಇ ಕಿಟ್ ಧರಿಸಿ, ರೋಗಿಯನ್ನು ಒಂದು ಕಿ.ಮೀ ದೂರ, ಆಂಬುಲೆನ್ಸ್‌ವರೆಗೂ ಹೊತ್ತುಕೊಂಡು ತೆರಳಿದರು.

ಐಎಯುಗೆ ನಾಗರಾಜ ಅಡಿಗ ನೇಮಕ

ನವದೆಹಲಿ: ಅಂತರರಾಷ್ಟ್ರೀಯ ಅಲ್ಟ್ರಾ ರನ್ನರ್ಸ್ ಸಂಸ್ಥೆಯ (ಐಎಯು) ಏಷ್ಯಾ ಓಷಿನಿಯಾ ಪ್ರತಿನಿಧಿಯಾಗಿ ಭಾರತದ ನಾಗರಾಜ ಅಡಿಗ ಆಯ್ಕೆಯಾಗಿದ್ದಾರೆ.

ಕೋವಿಡ್‌ನಿಂದಾಗಿ ಈ ಬಾರಿಯ ಸಮಾವೇಶವನ್ನು ವರ್ಚುವಲ್ ಆಗಿ ನಡೆಸಲಾಗಿತ್ತು. ಕಳೆದ 22 ಮತ್ತು 23ರಂದು ಸಮಾವೇಶ ನಡೆದಿತ್ತು.

ಏಷ್ಯಾ ಒಷಿನಿಯಾ ಪ್ರತಿನಿಧಿಯ ಆಯ್ಕೆಗಾಗಿ 24 ತಾಸುಗಳ ಮತದಾನ ನಡೆದಿತ್ತು. ಆನ್‌ಲೈನ್ ಮೂಲಕ ನಡೆದ ಮತದಾನದಲ್ಲಿ 10 ರಾಷ್ಟ್ರಗಳು ಪಾಲ್ಗೊಂಡಿದ್ದವು. ದಕ್ಷಿಣ ಕೊರಿಯಾದ ಗಿಲ್ಲೊ ಪಾರ್ಕ್ ಅವರನ್ನು ನಾಗರಾಜ 7–3 ಮತಗಳಿಂದ ಮಣಿಸಿದರು ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಪ್ರಕಟಣೆಯಲ್ಲಿ ತಿಳಿಸಿದೆ.

ಆರೋಗ್ಯ ಮತ್ತು ಫಿಟ್‌ನೆಸ್‌ಗೆ ಸಂಬಂಧಿಸಿ ಎಎಫ್‌ಐ ಮತ್ತು ವಿವಿಧ ಸರ್ಕಾರಿ ಸಂಸ್ಥೆಗಳ ಜೊತೆ ಕೆಲಸ ಮಾಡುತ್ತಿರುವ ನಾಗರಾಜ ಯುವ ಕ್ರೀಡಾಪಟುಗಳನ್ನು ಬೆಳೆಸುವ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದಾರೆ.

ಬಿಸಿಸಿಐ ವಿಶೇಷ ಸಾಮಾನ್ಯ ಸಭೆ: ರಣಜಿ ಪರಿಹಾರ ಮೊತ್ತ ಬಿಡುಗಡೆ ನಿರೀಕ್ಷೆ

ಐಪಿಎಲ್: ಇಂದು ನಿರ್ಧಾರ ಸಾಧ್ಯತೆ

ನವದೆಹಲಿ (ಪಿಟಿಐ): ಕೊರೊನಾದಿಂದಾಗಿ ಮುಂದೂಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯನ್ನು ಯುಎಇಯಲ್ಲಿ ಮುಂದುವರಿಸುವ ಬಗ್ಗೆ ಶನಿವಾರ ನಿರ್ಧಾರವಾಗಲಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ವಿಶೇಷ ಸಾಮಾನ್ಯ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಲಿದೆ.

ಅಂತರರಾಷ್ಟ್ರೀಯ ಟೂರ್ನಿಗಳ ನಡುವೆ ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15ರ ಅವಧಿಯಲ್ಲಿ ಸಿಗುವ ಸಮಯಾವಕಾಶದಲ್ಲಿ ಉಳಿದಿರುವ ಪಂದ್ಯಗಳನ್ನು ಆಯೋಜಿಸಲು ಬಿಸಿಸಿಐ ಚಿಂತನೆ ನಡೆಸಿದೆ.

ಶನಿವಾರ ನಡೆಯಲಿರುವ ಸಭೆಯಲ್ಲಿ ಐಸಿಸಿ ಟಿ20 ವಿಶ್ವಕಪ್ ಟೂರ್ನಿ ಆಯೋಜನೆ ಬಗ್ಗೆ ಮತ್ತು ಕಳೆದ ವರ್ಷ ರದ್ದುಗೊಂಡ ರಣಜಿ ಟೂರ್ನಿಯಲ್ಲಿ ಆಡಬೇಕಾಗಿದ್ದ ಆಟಗಾರರ ಪರಿಹಾರ ಧನದ ಕುರಿತು ಕೂಡ ಚರ್ಚೆ ನಡೆಯುವ ಸಾಧ್ಯತೆ ಇದೆ. ಟಿ20 ವಿಶ್ವಕಪ್ ಟೂರ್ನಿಗೆ ಸಂಬಂಧಿಸಿ ಜೂನ್ ಒಂದರಂದು ಮತ್ತು ಸಭೆ ನಡೆಯಲಿದ್ದು ಕೋವಿಡ್–19ರ ಸ್ಥಿತಿಯನ್ನು ಪರಿಶೀಲಿಸಿ ಅಂತಿಮ ನಿರ್ಧಾರ ಕೈಗೊಳ್ಳುವಂತೆ ಐಸಿಸಿಐನ್ನು ಕೋರಲಿದೆ.

ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಅವರ ಅಧ್ಯಕ್ಷತೆಯಲ್ಲಿ ವರ್ಚುವಲ್ ಆಗಿ ನಡೆಯಲಿರುವ ಶನಿವಾರದ ಸಭೆಯಲ್ಲಿ ಬಯೊಬಬಲ್, ವಿದೇಶಿ ಆಟಗಾರರ ನಿರ್ವಹಣೆ ಮುಂತಾದ ವಿಷಯಗಳ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಲಿರುವುದರಿಂದ ಇಂಗ್ಲೆಂಡ್ ಆಟಗಾರರು ಐಪಿಎಲ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಈಗಾಗಲೇ ತಿಳಿಸಿದೆ. ಜೋಸ್ ಬಟ್ಲರ್, ಬೆನ್ ಸ್ಟೋಕ್ಸ್, ಜೊಫ್ರಾ ಆರ್ಚರ್, ಜಾನಿ ಬೆಸ್ಟೊ, ಸ್ಯಾಮ್ ಕರನ್, ಏಯಾನ್ ಮಾರ್ಗನ್, ಮೋಯಿನ್ ಅಲಿ ಮುಂತಾದವರ ಬದಲಿಗೆ ಆಟಗಾರರನ್ನು ಹೊಂದಿಸಿಕೊಳ್ಳುವುದು ಸವಾಲಾಗಲಿದೆ.



ಐಪಿಎಲ್ ಫ್ರಾಂಚೈಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು– ಪಿಟಿಐ ಚಿತ್ರ



ಡಬ್ಲ್ಯುಟಿಸಿ: ಫೈನಲ್ ಡ್ರಾ ಆದರೆ ಇಬ್ಬರಿಗೂ ಪ್ರಶಸ್ತಿ

ನವದೆಹಲಿ (ರಾಯಿಟರ್ಸ್): ಇದೇ ಮೊದಲ ಬಾರಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯ ಡ್ರಾ ಅಥವಾ ಟೈ ಆದರೆ ಎರಡೂ ತಂಡಗಳಿಗೆ ಪ್ರಶಸ್ತಿಯನ್ನು ಹಂಚಲಾಗುವುದು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಶುಕ್ರವಾರ ತಿಳಿಸಿದೆ.

2019ರಲ್ಲಿ ನಡೆದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯ ಟೈ ಆಗಿತ್ತು. ಸೂಪರ್ ಓವರ್ ನಂತರವೂ ಫಲಿತಾಂಶ ಹೊರಬರಲಿಲ್ಲ. ಹೀಗಾಗಿ ಬೌಂಡರಿ ಕೌಂಟ್‌ಗೆ (ಬೌಂಡರಿ ಲೆಕ್ಕ ಹಾಕಿ ವಿಜೇತರನ್ನು ನಿರ್ಣಯಿಸುವುದು) ಮೊರೆ ಹೋಗಲಾಗಿತ್ತು. ಇಂಗ್ಲೆಂಡ್‌ಗೆ ಪ್ರಶಸ್ತಿ ಸಂದಿತ್ತು. ಈ ಟೂರ್ನಿಯ ನಂತರ ಬೌಂಡರಿ ಕೌಂಟ್ ನಿಯಮವನ್ನು ಐಸಿಸಿ ಕೈಬಿಟ್ಟಿದೆ.


'ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಸಂಬಂಧಿಸಿದ 'ಪ್ಲೇಯಿಂಗ್ ಕಂಡೀಷನ್ಸ್' ನಿರ್ಧರಿಸಲಾಗಿದೆ. ಪಂದ್ಯ ಫಲಿತಾಂಶವಿಲ್ಲದೆ ಮುಗಿದರೆ ಎರಡೂ ತಂಡಗಳನ್ನು ಜಂಟಿ ವಿಜೇತರು ಎಂದು ಘೋಷಿಸಲಾಗುವುದು' ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

ಇಂಗ್ಲೆಂಡ್‌ನ ಸೌತಾಂಪ್ಟನ್‌ನಲ್ಲಿ ಜೂನ್ 18ರಿಂದ ನಡೆಯಲಿರುವ ಪಂದ್ಯದಲ್ಲಿ ಡ್ಯೂಕ್ ಚೆಂಡು ಬಳಸಲಾಗುವುದು. ಯಾವುದೇ ಕಾರಣದಿಂದ ದಿನದಾಟ ಪೂರ್ತಿ ನಿಂತುಹೋದರೆ ಐದು ದಿನಗಳ ಪೂರ್ತಿ ಆಟ ನಡೆಯುವಂತೆ ಮಾಡುವುದಕ್ಕಾಗಿ ಕಾಯ್ದಿರಿಸಿದ ದಿನವೂ ಇರುತ್ತದೆ. ಆದರೆ ಫಲಿತಾಂಶಕ್ಕಾಗಿ ಹೆಚ್ಚುವರಿ ದಿನವನ್ನು ಬಳಸುವ ಚಿಂತನೆ ಇಲ್ಲ ಎಂದು ಪ್ರಕಟಣೆ ಸ್ಪಷ್ಟಪಡಿಸಿದೆ.

ಒಲಿಂಪಿಕ್: ಕಮರಿದ ಶ್ರೀಕಾಂತ್, ಸೈನಾ ಆಸೆ



ಸೈನಾ ನೆಹ್ವಾಲ್



ಕಿದಂಬಿ ಶ್ರೀಕಾಂತ್

ನವದೆಹಲಿ (ಪಿಟಿಐ): ರ‍್ಯಾಂಕಿಂಗ್‌ನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಶುಕ್ರವಾರ ಘೋಷಿಸಿದೆ. ಇದರೊಂದಿಗೆ, ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಸೈನಾ ನೆಹ್ವಾಲ್ ಅವರ ಆಸೆ ಕಮರಿದೆ.

ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ಅವಕಾಶವಿದ್ದ ಮೂರು ಟೂರ್ನಿಗಳನ್ನು ಕೊರೊನಾ ಕಾರಣದಿಂದ ಈಚೆಗೆ ರದ್ದುಗೊಳಿಸಲಾಗಿತ್ತು. ಹೀಗಾಗಿ ರ‍್ಯಾಂಕಿಂಗ್‌ನಲ್ಲಿ ಬದಲಾವಣೆ ಮಾಡುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಸೈನಾ ನೆಹ್ವಾಲ್ ನಿರೀಕ್ಷೆಯಿಂದ ಕಾಯುತ್ತಿದ್ದರು.

'ಟೋಕಿಯೊ ಒಲಿಂಪಿಕ್ಸ್‌ನ ಅರ್ಹತಾ ಅವಧಿ ಜೂನ್ 15ರಂದು ಮುಕ್ತಾಯಗೊಳ್ಳಲಿದೆ. ಆದರೆ ಅದಕ್ಕೂ ಮುನ್ನ ಯಾವುದೇ ಟೂರ್ನಿಯನ್ನು ಆಯೋಜಿಸಲಾಗುವುದಿಲ್ಲ. ರ‍್ಯಾಂಕಿಂಗ್‌ನಲ್ಲಿ ಬದಲಾವಣೆಯೂ ಇಲ್ಲ. ಆದ್ದರಿಂದ ಒಲಿಂಪಿಕ್ಸ್‌ಗೆ ಈಗಿನ ರ‍್ಯಾಂಕಿಂಗ್ ಪ್ರಕಾರವೇ ಆಟಗಾರರನ್ನು ಆಯ್ಕೆ ಮಾಡಬೇಕು' ಎಂದು ಬಿಡಬ್ಲ್ಯುಎಫ್ ಹೇಳಿದೆ.

ಇಂಡಿಯಾ ಓಪನ್, ಮಲೇಷ್ಯಾ ಮತ್ತು ಸಿಂಗಪುರ ಓಪನ್ ಟೂರ್ನಿಗಳನ್ನು ರದ್ದುಮಾಡಿದ್ದ ಬಿಡಬ್ಲ್ಯುಎಫ್ ಅರ್ಹತಾ ಅವಧಿಯನ್ನು ಮೂರು ತಿಂಗಳು ಮುಂದೂಡಿತ್ತು. ಮುಂದಿನ ತಿಂಗಳ 15ರ ವರೆಗೆ ಅರ್ಹತಾ ಅವಧಿ ಇದ್ದರೂ ತಾಂತ್ರಿಕವಾಗಿ ಒಲಿಂಪಿಕ್ಸ್‌ಗೆ ಟಿಕೆಟ್ ಗಳಿಸುವ ಅವಕಾಶ ಈಗಲೇ ಮುಗಿದಿದೆ ಎಂದು ಬಿಡಬ್ಲ್ಯುಎಫ್ ಪ್ರಧಾನ ಕಾರ್ಯದರ್ಶಿ ಥಾಮಸ್ ಲೂಂಡ್ ಹೇಳಿದ್ದಾರೆ.

ಭಾರತದ ಪಿ.ವಿ.ಸಿಂಧು, ಬಿ.ಸಾಯಿ ಪ್ರಣೀತ್, ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಕೆಒಎಯಿಂದ ನಜೀಬ್, ತೇಜಸ್ವಿನಿ ಬಾಯಿಗೆ ನೆರವು

ಬೆಂಗಳೂರು: ಕರ್ನಾಟಕ ಒಲಿಂಪಿಕ್ ಸಂಸ್ಥೆಯು (ಕೆಒಎ) ಕೋವಿಡ್‌ನಿಂದ ಬಳಲುತ್ತಿರುವ ಒಲಿಂಪಿಯನ್ ಜೂಡೊ ಪಟು ನಜೀಬ್ ಆಗಾ ಮತ್ತು ಸೋಂಕಿನಿಂದಾಗಿ ಪತಿಯನ್ನು ಕಳೆದುಕೊಂಡ ಕಬಡ್ಡಿ ಆಟಗಾರ್ತಿ ತೇಜಸ್ವಿನಿ ಬಾಯಿ ಅವರಿಗೆ ತಲಾ ಒಂದು ಲಕ್ಷ ರೂಪಾಯಿ ನೆರವು ಪ್ರಕಟಿಸಿದೆ. ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್ ಈ ವಿಷಯ ತಿಳಿಸಿದ್ದಾರೆ.



ಕೆ.ಗೋವಿಂದರಾಜ್

1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ನಜೀಬ್ ದೇಶವನ್ನು ಪ್ರತಿನಿಧಿಸಿದ್ದರು. ಸದ್ಯ ಅವರು ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಅರ್ಜುನ ಪ್ರಶಸ್ತಿ ಪುರಸ್ಕೃತ ತೇಜಸ್ವಿನಿ ಬಾಯಿ ಅವರ ಪತಿ ನವೀನ್ ಅವರು ಇತ್ತೀಚೆಗೆ ಕೋವಿಡ್‌ನಿಂದಾಗಿ ಮೃತಪಟ್ಟಿದ್ದರು.

ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್: ವಿಕಾಸ್‌ಗೆ ಕಂಚು

ಅಮಿತ್, ಶಿವ ಫೈನಲ್‌ಗೆ

ದುಬೈ (ಪಿಟಿಐ): ಭಾರತದ ಅಮಿತ್ ಪಂಘಾಲ್ ಮತ್ತು ಶಿವ ಥಾಪಾ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದ್ದಾರೆ. 52 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಅಮಿತ್ ಕಜಕಸ್ತಾನದ ಸಾಕೆನ್ ಬಿಬೊಸಿನೊವ್ ಎದುರು 5–0ಯಿಂದ ಜಯ ಗಳಿಸಿದರು. 64 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ ಶಿವ ಥಾಪಾ ಹಾಲಿ ಚಾಂಪಿಯನ್ ತಜಿಕಿಸ್ತಾನದ ಬಕೋದುರ್ ಉಸ್ಮನೊವ್ ವಿರುದ್ಧ 4–0ಯಿಂದ ಜಯ ಗಳಿಸಿದರು.

ಸಂಜೀತ್ (91 ಕೆಜಿ) ಕೂಡ ಚಿನ್ನದ ಪದಕದ ಸುತ್ತಿಗೆ ಕಾಲಿಟ್ಟರು. ಸೆಮಿಫೈನಲ್‌ನಲ್ಲಿ ಅವರು 5–0ಯಿಂದ ಉಜ್ಬೆಕಿಸ್ತಾನದ ಸಂಜಾರ್ ತುರ್ಸುನೊವ್ ಅವರನ್ನು ಮಣಿಸಿದರು. 69 ಕೆಜಿ ವಿಭಾಗದಲ್ಲಿ ವಿಕಾಸ್ ಕೃಷನ್ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡರು. ಉಜ್ಬೆಕಿಸ್ತಾನದ ಬತುರೊವ್ ಬೊಬೊ ಉಸ್ಮಾನ್‌ಗೆ ವಿಕಾಸ್ ಮಣಿದರು. 60 ಕೆಜಿ ವಿಭಾಗದಲ್ಲಿ ವರಿಂದರ್ ಸಿಂಗ್ ಇರಾನ್‌ನ ಡ್ಯಾನಿಯಲ್ ಶಾಭಕ್ಷ್ ವಿರುದ್ಧ ಸೋತು ಕಂಚಿನ ಪದಕ ಗಳಿಸಿದರು.

ಫೈನಲ್‌ನಿಂದ ಹೊರಬಿದ್ದ ಸಾಕ್ಷಿ: ಎದುರಾಳಿ ತಂಡದವರು ತೀರ್ಪು ಮರುಪರಿಶೀಲನೆಗೆ ಮೊರೆ ಹೋದ ಕಾರಣ ಭಾರತದ ಸಾಕ್ಷಿ ಚೌಧರಿ ಫೈನಲ್‌ನಿಂದ ಹೊರಬಿದ್ದಿದ್ದಾರೆ. ಗುರುವಾರ ರಾತ್ರಿ ನಡೆದ 54 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ಕಜಕಸ್ತಾನದ ದೀನಾ ಜೊಲೊಮನ್ ಅವರನ್ನು ಸಾಕ್ಷಿ 3–2ರಲ್ಲಿ ಮಣಿಸಿದ್ದರು.

ಸ್ಪರ್ಧೆ ಮುಗಿದ ನಂತರ ಕಜಕಸ್ತಾನ ತಂಡದವರು ತೀರ್ಪು ಮರುಪರಿಶೀಲನೆಗೆ ಅರ್ಜಿ ಸಲ್ಲಿಸಿದ್ದರು. ಇದನ್ನು ಪುರಸ್ಕರಿಸಿದ ಏಷ್ಯನ್ ಬಾಕ್ಸಿಂಗ್ ಕಾನ್ಫೆಡರೇಷನ್‌ನವರು ದೀನಾ ಜೊಲೊಮನ್ ವಿಜೇತೆ ಎಂದು ಘೋಷಿಸಿದರು.

ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಎಐಬಿಎ) 2019ರಲ್ಲಿ ಬೌಟ್ ರಿವ್ಯೂ ಪದ್ಧತಿಯನ್ನು ಜಾರಿಗೆ ತಂದಿತ್ತು. 5–0 ಅಥವಾ 4–1ರಲ್ಲಿ ಫಲಿತಾಂಶ ಬಂದರೆ ಈ ಪದ್ಧತಿ ಅನ್ವಯವಾಗುವುದಿಲ್ಲ. ಸೋತ ಬಾಕ್ಸರ್ ತಂಡದ ಮ್ಯಾನೇಜರ್ ಅಥವಾ ಕೋಚ್ ಬೌಟ್ ಮುಗಿದ 15 ನಿಮಿಷಗಳ ಒಳಗೆ ಮನವಿ ಸಲ್ಲಿಸಬಹುದು.



ಸೆಮಿಫೈನಲ್‌ನಲ್ಲಿ ಅಮಿತ್ ಪಂಘಾಲ್ ಪಂಚ್ ಮಾಡಿದ ರೀತಿ –ಪಿಟಿಐ ಚಿತ್ರ

ಸುಶೀಲ್ ಪ್ರಕರಣ: ಮಾಧ್ಯಮ ನಿರ್ಬಂಧಕ್ಕೆ ನಿರಾಕರಣೆ



ಸುಶೀಲ್ ಕುಮಾರ್

ನವದೆಹಲಿ: ಯುವ ಕುಸ್ತಿಪಟುವಿನ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧನಕ್ಕೆ ಒಳಗಾಗಿರುವ ಒಲಿಂಪಿಯನ್ ಸುಶೀಲ್ ಕುಮಾರ್ ಕುರಿತ ಅತಿರಂಜಿತ ವರದಿ ಪ್ರಕಟಿಸುವುದನ್ನು ನಿರ್ಬಂಧಿಸಲು ದೆಹಲಿ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಛತ್ರಸಾಲ್ ಕ್ರೀಡಾಂಗಣದಲ್ಲಿ ನಡೆದ ಘಟನೆಗೆ ಸಂಬಂಧಿಸಿ ಸುಶೀಲ್ ಕುಮಾರ್ ಅವರ ತೇಜೋವಧೆ ಮಾಡುವಂಥ ಸುದ್ದಿಗಳನ್ನು ಪ್ರಕಟಿಸಲಾಗುತ್ತಿದೆ ಎಂದು ದೂರಿ ಕಾನೂನು ವಿದ್ಯಾರ್ಥಿ ಶ್ರೀಕಾಂತ್ ಪ್ರಸಾದ್ ಗುರುವಾರ ಬೆಳಿಗ್ಗೆ ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರನ್ನು ಒಳಗೊಂಡ ಪೀಠವು 'ಸುಶೀಲ್ ಕುಮಾರ್ ಪರವಾಗಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲ' ಎಂದು ಶುಕ್ರವಾರ ಅಭಿಪ್ರಾಯಪಟ್ಟಿತು.

ಯುವ ಕುಸ್ತಿಪಟು ಮೇಲೆ ಸುಶೀಲ್ ಕುಮಾರ್ ದೊಣ್ಣೆಯಿಂದ ಹಲ್ಲೆ ನಡೆಸುತ್ತಿರುವುದಾಗಿ ಹೇಳಲಾಗುವ ವಿಡಿಯೊ ತುಣುಕೊಂದನ್ನು ಗುರುವಾರ ರಾತ್ರಿ ಮಾಧ್ಯಮಗಳು ಪ್ರಸಾರ ಮಾಡಿವೆ.

ಮಹಿಳಾ ಕ್ರಿಕೆಟ್ ತಂಡಕ್ಕೆ ಲಸಿಕೆ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರಿಗೆ ಶುಕ್ರವಾರ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಲಾಯಿತು.

ಸದ್ಯ ಮುಂಬೈಯಲ್ಲಿ ಕ್ವಾರಂಟೈನ್‌ನಲ್ಲಿರುವ ತಂಡದ ಇಂಗ್ಲೆಂಡ್ ಪ್ರವಾಸ ಜೂನ್ 16ರಿಂದ ಬ್ರಿಸ್ಟಲ್‌ನಲ್ಲಿ ನಡೆಯಲಿರುವ ಟೆಸ್ಟ್ ಪಂದ್ಯದೊಂದಿಗೆ ಆರಂಭವಾಗಲಿದೆ. ನಂತರ 2 ಟಿ20 ಮತ್ತು 3 ಏಕದಿನ ಪಂದ್ಯ ನಡೆಯಲಿವೆ.

'ಕೆಲವು ಆಟಗಾರ್ತಿಯರು ಈಗಾಗಲೇ ಅವರಿದ್ದ ಸ್ಥಳಗಳಲ್ಲಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಎಲ್ಲರಿಗೂ ಕೋವಿಶೀಲ್ಡ್ ಲಸಿಕೆ ಹಾಕಲಾಗಿದೆ' ಎಂದು ಬಿಸಿಸಿಐ ತಿಳಿಸಿದೆ.

ಒಲಿಂಪಿಕ್ಸ್: ಜಪಾನ್ ಪ್ರೇಕ್ಷಕರಿಗೂ ಇಲ್ಲ ಅವಕಾಶ?


ಟೋಕಿಯೊ (ಎಪಿ): ಕೋವಿಡ್–19 ಸಾಂಕ್ರಾಮಿಕ ನಿಯಂತ್ರಿಸಲು ಜಪಾನ್‌ನ ಟೋಕಿಯೊ ಮತ್ತು ಇತರ ಪ್ರದೇಶಗಳಲ್ಲಿ ಜಾರಿ ಮಾಡಲಾಗಿರುವ ತುರ್ತುಪರಿಸ್ಥಿತಿಯನ್ನು ಶುಕ್ರವಾರ ಮತ್ತೆ 20 ದಿನಗಳಿಗೆ ವಿಸ್ತರಿಸಲಾಗಿದೆ. ಕೊರೊನಾ ಪ್ರಕರಣಗಳು ಇನ್ನೂ ಏರುಗತಿಯಲ್ಲಿರುವುದರಿಂದ ಈ ಬಾರಿಯ ಒಲಿಂಪಿಕ್ಸ್‌ಅನ್ನು ಪ್ರೇಕ್ಷಕರಿಲ್ಲದೆ ಆಯೋಜಿಸುವ ಸುಳಿವನ್ನೂ ಆಯೋಜನಾ ಸಮಿತಿ ನೀಡಿದೆ.

'ಸೋಂಕು ಪ್ರಕರಣಗಳು ಹೆಚ್ಚುತ್ತಲೇ ಇವೆ. ಪಶ್ಚಿಮ ಜಪಾನ್‌ನ ಒಸಾಕ ಪ್ರಾಂತ್ಯವು ಹೆಚ್ಚು ಬಾಧಿತವಾಗಿದೆ. ಇಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆಯಿದೆ' ಎಂದು ನಿರ್ಧಾರ ಪ್ರಕಟಿಸುವ ವೇಳೆ ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ ತಿಳಿಸಿದ್ದಾರೆ.

ಒಲಿಂಪಿಕ್ಸ್‌ಗೆ ವಿದೇಶಿ ಪ್ರೇಕ್ಷಕರಿಗೆ ನಿರ್ಬಂಧ ನಿರ್ಧಾರವನ್ನು ಒಂದು ತಿಂಗಳ ಹಿಂದೆಯೇ ತೆಗೆದುಕೊಳ್ಳಲಾಗಿದೆ. 2020ರಲ್ಲಿ ನಡೆಯಬೇಕಿದ್ದ ಒಲಿಂಪಿಕ್ಸ್‌ಅನ್ನು ಕೋವಿಡ್ ಹಾವಳಿಯ ಹಿನ್ನೆಲೆಯಲ್ಲಿ ಈ ವರ್ಷದ ಜುಲೈ 23ರಿಂದ ನಡೆಸಲು ಉದ್ದೇಶಿಸಲಾಗಿದೆ.

'ಕೂಟಕ್ಕೆ ಸ್ಥಳೀಯ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಬೇಕೆ ಬೇಡವೇ ಎಂಬುದನ್ನು ತುರ್ತುಪರಿಸ್ಥಿತಿಯನ್ನು ತೆಗೆದು ಹಾಕಿದ ಬಳಿಕ ತೀರ್ಮಾನಿಸುತ್ತೇವೆ' ಎಂದು ಆಯೋಜನಾ ಸಮಿತಿಯ ಅಧ್ಯಕ್ಷೆ ಶೀಕೊ ಹಸಿಮೋಟೊ ತಿಳಿಸಿದ್ದಾರೆ.

'ಒಲಿಂಪಿಕ್ಸ್‌ಅನ್ನು ಪ್ರೇಕ್ಷಕರಿಲ್ಲದೆ ನಡೆಸಬೇಕೆಂದು ಬಹಳಷ್ಟು ಜನ ಹೇಳುತ್ತಿದ್ದಾರೆ. ಪ್ರೇಕ್ಷಕರಿಗೆ ಅವಕಾಶ ನೀಡಿದ ಬಳಿಕ ಸ್ಥಳೀಯ ವೈದ್ಯಕೀಯ ಸೇವೆಗಳ ಮೇಲೆ ಪರಿಣಾಮ ಬೀರಬಾರದು. ಈ ವಿಷಯಗಳನ್ನು ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ' ಎಂದು ಅವರು ನುಡಿದರು.



ಷೇರುಪೇಟೆ ವಹಿವಾಟು	
▲	307
ಹಿಂದಿನ ಅಂತ್ಯ	51,115
ಇಂದಿನ ಅಂತ್ಯ	51,422

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	15,337
ಇಂದಿನ ಅಂತ್ಯ	15,435
▲	97
ದಿನದ ಗರಿಷ್ಠ	15,469

ವಿನಿಮಯ ದರ	
$ ಡಾಲರ್	72.45
£ ಪೌಂಡ್	102.76
€ ಯುರೊ	88.3
¥ ಯೆನ್ (100ಕ್ಕೆ)	65.89

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1385 (1405)
ಸೂರ್ಯಕಾಂತಿ (ರಿಫೈನ್ಡ್)	₹1590 (1610)
ಪಾಮೋಲಿನ್	₹1265 (1285)

ಸೆನ್ಸೆಕ್ಸ್: ದಾಖಲೆ ಬರೆದ ನಿಫ್ಟಿ

ಮುಂಬೈ (ಪಿಟಿಐ): ಶುಕ್ರವಾರದ ವಹಿವಾಟಿನಲ್ಲಿ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಹೊಸ ದಾಖಲೆ ಬರೆಯಿತು. 97 ಅಂಶ ಏರಿಕೆ ಕಂಡು ದಾಖಲೆಯ 15,435 ಅಂಶಗಳಿಗೆ ತಲುಪಿತು.

ಅಮೆರಿಕದ ಡಾಲರ್ ಎದುರು ರೂಪಾಯಿ 15 ಪೈಸೆಯಷ್ಟು ಮೌಲ್ಯ ಹೆಚ್ಚಿಸಿಕೊಂಡಿದ್ದು ಹಾಗೂ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬರುತ್ತಿರುವುದು ಹೂಡಿಕೆದಾರರಲ್ಲಿ ಉತ್ಸಾಹ ಹೆಚ್ಚಿಸಿದವು ಎಂದು ವರ್ತಕರು ತಿಳಿಸಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 307 ಅಂಶ ಏರಿಕೆ ಕಂಡಿತು.



ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರುಗಳು ಶೇಕಡ 5.9ರಷ್ಟು ಏರಿಕೆ ಕಂಡವು. 'ಸೋಂಕು ಪ್ರಕರಣಗಳು ಕಡಿಮೆ ಆಗುತ್ತಿರುವುದು ಹಾಗೂ ರೂಪಾಯಿ ಮೌಲ್ಯ ಹೆಚ್ಚಾಗುತ್ತಿರುವುದು ದೇಶದ ಷೇರು ಮಾರುಕಟ್ಟೆಗಳಲ್ಲಿ ತೇಜಿ ವಹಿವಾಟಿಗೆ ಕಾರಣವಾಗಿವೆ. ಈಚೆಗೆ ವಿದೇಶಿ ಹೂಡಿಕೆಯಲ್ಲಿ ಆಗಿರುವ ಸುಧಾರಣೆ ಕೂಡ ಸಕಾರಾತ್ಮಕ ವಹಿವಾಟಿಗೆ ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಗ್‌ಬಾಸ್ಕೆಟ್ ಖರೀದಿಸಿದ ಟಾಟಾ

ಬೆಂಗಳೂರು (ರಾಯಿಟರ್ಸ್): ಆನ್‌ಲೈನ್ ಮೂಲಕ ದಿನಸಿ ಹಾಗೂ ತರಕಾರಿಗಳನ್ನು ಮಾರಾಟ ಮಾಡುವ ಬಿಗ್‌ಬಾಸ್ಕೆಟ್ ಕಂಪನಿಯನ್ನು ಟಾಟಾ ಸನ್ಸ್ ಖರೀದಿಸಿದೆ. ಇದರಿಂದಾಗಿ ಭಾರತದ ಅತಿದೊಡ್ಡ ಉದ್ಯಮ ಸಮೂಹಗಳಲ್ಲಿ ಒಂದಾಗಿರುವ ಟಾಟಾ, ಇ-ಕಾಮರ್ಸ್ ವಿಭಾಗದಲ್ಲಿ ಅಮೆಜಾನ್, ಫ್ಲಿಪ್‌ಕಾರ್ಟ್ ಹಾಗೂ ರಿಲಯನ್ಸ್ ಜೊತೆ ಸ್ಪರ್ಧೆಗೆ ಇಳಿಯಲಿದೆ.

ಬಿಗ್‌ಬಾಸ್ಕೆಟ್‌ನ ಷೇರುಗಳನ್ನು ಟಾಟಾ ಡಿಜಿಟಲ್ ಲಿಮಿಟೆಡ್ ಕಂಪನಿಯು ಖರೀದಿಸಿದೆ. ಇದು ಟಾಟಾ ಸನ್ಸ್‌ನ ಒಂದು ಅಂಗಸಂಸ್ಥೆ. ಖರೀದಿ ವಿಚಾರವಾಗಿ ಹೆಚ್ಚಿನ ವಿವರ ನೀಡಲು ಟಾಟಾ ನಿರಾಕರಿಸಿದೆ. ಸುದ್ದಿಸಂಸ್ಥೆಗೆ ಬಿಗ್‌ಬಾಸ್ಕೆಟ್ ಕಡೆಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಉಪ್ಪಿನಿಂದ ಆರಂಭಿಸಿ ಐಷಾರಾಮಿ ಕಾರುಗಳು, ಸಾಫ್ಟ್‌ವೇರ್ ಉತ್ಪನ್ನಗಳವರೆಗೆ ವಿವಿಧ ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಟಾಟಾ ಸಮೂಹವು, ಎಲ್ಲ ಬಗೆಯ ಗ್ರಾಹಕ ವ್ಯವಹಾರಗಳನ್ನು ಒಂದೇ ಕಡೆ ತರುವ 'ಸೂಪರ್ ಆ್ಯಪ್' ಅಭಿವೃದ್ಧಿಗೆ ಚಿಂತನೆ ನಡೆಸಿದೆ ಎಂಬ ವರದಿ ಇದೆ.

ಎಫ್‌ಡಿಐ: ಎರಡನೇ ಸ್ಥಾನಕ್ಕೆ ಏರಿದ ಅಮೆರಿಕ

ನವದೆಹಲಿ (ಪಿಟಿಐ): 2020-21ನೇ ಸಾಲಿನಲ್ಲಿ ಭಾರತದಲ್ಲಿ ಹೆಚ್ಚು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆ ಮಾಡಿದ ದೇಶಗಳ ಪಟ್ಟಿಯಲ್ಲಿ ಮಾರಿಷಸ್ ಹಿಂದಿಕ್ಕಿ, ಅಮೆರಿಕವು 2ನೇ ಸ್ಥಾನಕ್ಕೆ ಬಂದಿದೆ. 2020-21ನೇ ಸಾಲಿನ ಅಂತ್ಯಕ್ಕೆ ಭಾರತದಲ್ಲಿ ಅಮೆರಿಕವು ಎಫ್‌ಡಿಐ ರೂಪದಲ್ಲಿ ₹ 1 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡಿದೆ.

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ವಿಭಾಗವು ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಇದೆ. ಭಾರತದಲ್ಲಿ ಅತಿ ಹೆಚ್ಚು ಎಫ್‌ಡಿಐ ಹೂಡಿಕೆ ಮಾಡಿರುವ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಸಿಂಗಪುರವು ಸತತ ಮೂರನೇ ವರ್ಷವೂ ಕಾಯ್ದುಕೊಂಡಿದೆ.



2020-21ನೇ ಸಾಲಿನಲ್ಲಿ ಭಾರತದಲ್ಲಿ ಸಿಂಗಪುರದ ಒಟ್ಟು ₹ 1.26 ಲಕ್ಷ ಕೋಟಿಯಷ್ಟು ಎಫ್‌ಡಿಐ ಹೂಡಿಕೆ ಮಾಡಿದೆ.

ಈ ಅವಧಿಯಲ್ಲಿ ಮಾರಿಷಸ್ ₹ 40,851 ಕೋಟಿ ಎಫ್‌ಡಿಐ ಹೂಡಿಕೆ ಮಾಡಿದೆ. ಯುಎಇ ₹ 30,421 ಕೋಟಿ, ಕೇಮನ್ ಐಲ್ಯಾಂಡ್ ₹ 20,208 ಕೋಟಿ ಹೂಡಿಕೆ ಮಾಡಿದ್ದು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ.

ಸಂಕ್ಷಿಪ್ತ ಸುದ್ದಿ

ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹ 10 ಕೋಟಿ ದಂಡ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹ 10 ಕೋಟಿ ದಂಡ ವಿಧಿಸಿದೆ. ವಾಹನ ಸಾಲಕ್ಕೆ ಸಂಬಂಧಿಸಿದ ವಿಚಾರದಲ್ಲಿ ಶಾಸನಬದ್ಧವಾಗಿ ಮಾಡಬೇಕಿದ್ದ ಕೆಲವು ಕೆಲಸಗಳಲ್ಲಿ ಆಗಿರುವ ಲೋಪಕ್ಕಾಗಿ ಈ ದಂಡ ವಿಧಿಸಲಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ವಾಹನ ಸಾಲ ವಿಭಾಗದಲ್ಲಿ ಕೆಲವು ಲೋಪಗಳು ಇರುವ ಬಗ್ಗೆ ದೂರು ಬಂದಿತ್ತು. ಅದನ್ನು ಆರ್‌ಬಿಐ ಪರಿಶೀಲಿಸಿತ್ತು. ದಂಡ ವಿಧಿಸುವ ಆದೇಶವನ್ನು ಗುರುವಾರವೇ ಹೊರಡಿಸಲಾಗಿದೆ.

ದೂರಿಗೆ ಪ್ರತಿಕ್ರಿಯೆ ನೀಡುವಂತೆ ಆರ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ನೋಟಿಸ್ ನೀಡಿತ್ತು. ಇದಕ್ಕೆ ಬ್ಯಾಂಕ್ ನೀಡಿದ ವಿವರಣೆಯನ್ನು ಪರಿಶೀಲಿಸಿದ ಆರ್‌ಬಿಐ, ದಂಡ ವಿಧಿಸಬೇಕಾದಂತಹ ಲೋಪ ಆಗಿದೆ ಎಂದು ತೀರ್ಮಾನಿಸಿತು ಎಂದು ಪ್ರಕಟಣೆ ತಿಳಿಸಿದೆ.

ವಿದೇಶಿ ವಿನಿಮಯ ಮೀಸಲು ದಾಖಲೆಯ ಮಟ್ಟಕ್ಕೆ

ಮುಂಬೈ (ಪಿಟಿಐ) ದೇಶದ ವಿದೇಶಿ ವಿನಿಮಯ ಮೀಸಲು ಮೇ 21ರ ವೇಳೆಗೆ ₹ 20,753 ಕೋಟಿಯಷ್ಟು ಏರಿಕೆಯಾಗಿ, ₹ 42.92 ಲಕ್ಷ ಕೋಟಿಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ಬಿಡುಗಡೆ ಮಾಡಿರುವ ದತ್ತಾಂಶದಲ್ಲಿ ಈ ಮಾಹಿತಿ ಇದೆ. ಇದು ಈವರೆಗಿನ ಗರಿಷ್ಠ ಮಟ್ಟ. 2021ರ ಜನವರಿ 29ರ ವೇಳೆಗೆ ₹ 42.75 ಲಕ್ಷ ಕೋಟಿ ವಿದೇಶಿ ವಿನಿಮಯ ಮೀಸಲು ದೇಶದಲ್ಲಿ ಇತ್ತು. ಅದೇ ಆವರೆಗಿನ ಗರಿಷ್ಠ ಮೀಸಲಾಗಿತ್ತು.

ಮುಂಬೈ ಧಾರಣೆ

ಶೇಂಗಾ 28-05-2021	
ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1390(1390)
ಪಾಮ್ ವಾರದ ಡೆಲಿವರಿ	1263(1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1580)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,650 (4,8650)
ಬೆಳ್ಳಿ ಕೆ.ಜಿ
70,700 (70,625)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ
ಹೊಸತು 23500-40000
ಹಳತು 42500-50000

ಕುಂದಾಪುರ
ಹೊಸಚಾಲಿ 35000-40000

ಮಂಗಳೂರು
ಹೊಸತು 35000 39500

ಪುತ್ತೂರು
ಹೊಸತು 28000-39500

ಜರಡಿ 1150-1200
ಹೆರಕಿದ್ದು 1500-1600
ಹಸಿರು ಸಾಧಾರಣ 900 –1000
ಹಸಿರು ಉತ್ತಮ 1100- 1200
ಹಸಿರು ಅತಿ ಉತ್ತಮ 1400-1500

ಕಾಳು ಮೆಣಸು 400

ರೇಷ್ಮೆಗೂಡು

ರಾಮನಗರ
ಮಿಶ್ರ ತಳಿ (ಸಿ.ಬಿ) 265-322
ದ್ವಿತಳಿ (ಬಿ.ವಿ) 322-422

ಏಲಕ್ಕಿ ಧಾರಣೆ

ಸಕಲೇಶಪುರ
ಕೂಳೆ 700-800
ನಡುಗೋಲು 850-900
ರಾಶಿ 950-1000
ರಾಶಿ ಉತ್ತಮ 1000-1050

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,700	10,500	10425	155.70 ಸೆಂಟ್ಸ್
ಎಸಿ	4,480	4,000	4000	
ಆರ್‌ಪಿ	5,100	5,050	5125	ಲಂಡನ್
ಆರ್‌ಸಿ	3,100	2,970	2965	1501 ಡಾಲರ್ಸ್